# ಅಪರಂಜಿ

**ತಿಳಿನಗೆಯ ಕಾರಂಜಿ**

**ಜೂನ್ 2020**
(ಏಪ್ರಿಲ್, ಮೇ ತಿಂಗಳ ಸಂಚಿಕೆಗಳ ಸಹಿತ)







ಬಿಡಿ ಪ್ರತಿ: ರೂ.10.00

**ಸಂಪಾದಕ ಮಂಡಳಿ**

ಸಂಪಾದಕರು

ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್



**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.





# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 37**

**ಸಂಚಿಕೆ - 09**

**ಜೂನ್ - 2020**


## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ಶತಾಯುಷಿಯಾಗದ ಎಚ್ಚಿನ್ | ಆನಂದ | 3 |
| ಲಾಕ್‌ಡೌನ್‌ನಲ್ಲಿ ಒಂದು ಸಂಜೆ | ವತ್ಸನ | 5 |
| ಮುಖಪುಟದಲ್ಲಿ ಹೋದ ಮಾನ.... | ಸಹನಾ ಪ್ರಸಾದ್ | 11 |
| ವೈಜಯಂತಿ ಸ್ವಯಂವರ | ಟಿ.ಎಸ್.ಶ್ರವಣಕುಮಾರಿ | 13 |
| ಥ್ಯಾಂಕ್ಯೂ ಕೊರೋನ | ಸೂರಿ ಹಾರ್ದಳ್ಳಿ | 18 |
| ನನ್ನ ಹೃದಯ ಇರುವುದು... | ಪಾಲಹಳ್ಳಿ ವಿಶ್ವನಾಥ್ | 21 |
| ತುಂತುರು | ದಂನಳ | 25 |
| ಕಾಗಾಲಾಪ | ಎನ್. ರಾಮನಾಥ್ | 26 |
| ಮುತ್ತಿನಂತ ಅಜ್ಜಿ | ಚಿತ್ರಾ ರಾಮಚಂದ್ರನ್ | 31 |
| ದಿನನಿತ್ಯದ ಕೆಲಸವೂ... | ರಕ್ಷಾ ರಮೇಶ್ | 38 |


ಮುಖಪುಟ ವ್ಯಂಗ್ಯಚಿತ್ರ
ಕೃಪೆ : ಅಲೋಕ್


ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com ದೂರವಾಣಿ: 080-23345259



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com



*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



# ಅಪರಂಜಿ ಕಿಡಿ

**•ಪ್ರಕಾಶ್**

ಆನ್‌ಲೈನ್ ಶಿಕ್ಷಣಕ್ಕೆ ಒತ್ತು ನೀಡಿ. – ಹೇಳಿಕೆ
**ಹುಷಾರ್, ಕೀಪ್ಯಾಡ್ ಜಖಂ ಆದೀತು.**

***

ಕೋಳಿ ಕೂಗುವ ಮೊದಲೇ ಕಂಕಣ – ಸುದ್ದಿ
**ಶುಭಸ್ಯ ಶೀಘ್ರಂ!!**

***

ಬಡಕುಟುಂಬಗಳಿಗೆ ಬೆಳಕಾದ ಮೀನಾಕ್ಷಿ ಲಕ್ಷ್ಮೀಪತಿ–ಶೀರ್ಷಿಕೆ
**ಅನ್ವರ್ಥನಾಮ ಎಂದರೆ ಇದೇ!!**

***

**ಚೀನಾ ಅಮೆರಿಕಾ ಜಗಳದಲ್ಲಿ ಜಗತ್ತೇ ಬಡವಾಯಿತು ಎನ್ನಬಹುದು ಈಗ**

***

ಭಾರತಕ್ಕೆ ವೆಂಟಿಲೇಟರ್ ಕೊಡುತ್ತೇವೆ – ಟ್ರಂಪ್
**ಹೊಟ್ಟೆಗೆ ಜುಟ್ಟಿಲ್ಲ, ....!!**

***

ಮೂವತ್ತು ವರ್ಷಗಳ ನಂತರ ದರ್ಶನ ನೀಡಿದ ಹಿಮಾಲಯಾ ಪರ್ವತ – ಪಂಜಾಬ್ ಸುದ್ದಿ.
**ವಾಯು ಮಾಲಿನ್ಯದ ತೆರೆಯ ಪ್ರಭಾವ!!**

***

ಏಪ್ರಿಲ್ ಒಂದರಿಂದ ಶುದ್ಧ ಇಂಧನದ ಬೆಲೆ ಏರಿಕೆ
**– ಅಂದರೆ... ಇದುವರೆಗೂ... ?!**

***


ಮಧ್ಯವರ್ತಿಗಳಿಂದ ಮುಕ್ತಿ, ರೈತರಿಗೆ ಶಕ್ತಿ.
**ಆಹಾ, ಶೀರ್ಷಿಕೆ ಅಂದರೆ ಹೀಗಿರಬೇಕು.**

**ಆತ್ಮೀಯ ಓದುಗರೇ,**

**ಲಾಕ್ ಡೌನ್‌ನಿಂದಾಗಿ ನಿಮಗೆ ತಲುಪಿಸಲಾಗದಿದ್ದ ಏಪ್ರಿಲ್ ಮತ್ತು ಮೇ ಸಂಚಿಕೆಗಳನ್ನು ಪ್ರತ್ಯೇಕವಾಗಿ ಜೂನ್ ಸಂಚಿಕೆಯ ಜೊತೆಗೆ ಕಳುಹಿಸಿದ್ದೇವೆ.**

# ಶತಾಯುಷಿಯಾಗದ ಎಚ್ಚೆನ್

**• ಆನಂದ**



'ಸಾಯಲು ಇಷ್ಟವೇ ಇಲ್ಲಪ್ಪ ನನಗೆ' ಎಂದು ನಗುನಗುತ್ತಲೇ ನನ್ನ ಬಳಿ ಹೇಳಿಕೊಳ್ಳುತ್ತಿದ್ದ ಎಚ್ಚೆನ್ ಆಸೆ ಪೂರೈಸಿದ್ದರೆ ಇಂದು ಅವರು ಶತಾಯುಷಿಗಳಾಗಿರುತ್ತಿದ್ದರು. ಹೌದು, ಇದು ಅವರ ಜನ್ಮ ಶತಾಬ್ದಿ ವರ್ಷ (1920–2020). ಅವರು ನಂಬದಿದ್ದ ದೇವರು ಅವರ ಆಸೆಯನ್ನು ಪೂರೈಸುವನೆ? ಆದರೆ ಅವರು ಅಜರಾಮರರಾಗಲು ಬಯಸಿದ್ದು ಆವರ ತಮ್ಮ ಅನೇಕ ಆಸೆಗಳನ್ನು ತಮ್ಮ ಜೀವಿತಾವಧಿಯಲ್ಲೇ ಪೂರೈಸುವ ಉದ್ದೇಶದಿಂದ. ಬದುಕಿದ್ದ 85 ವರ್ಷಗಳ ಅವಧಿಯಲ್ಲಿ ಅವರು ಸಾಧಿಸಿದ್ದು ಅಪಾರ. ಸಾವಿರಾರು ಶಿಷ್ಯರು, ಅಭಿಮಾನಿಗಳು ಇಂದಿಗೂ ಎಚ್ಚೆನ್ ಎಂದರೆ ಭಾವುಕರಾಗುತ್ತಾರೆ. ಮನದಲ್ಲೇ ಕೈ ಮುಗಿದು ಧನ್ಯರಾಗುತ್ತಾರೆ.

ಪವಾಡದಲ್ಲಿ ನಂಬಿಕೆ ಇಡದೆ, ಪ್ರಶ್ನಿಸದೆ ಏನನ್ನೂ ನಂಬಬೇಡ ಎಂಬುದನ್ನು ತಮ್ಮ ಬೀಜಮಂತ್ರವಾಗಿಸಿ ನುಡಿದಂತೆ ನಡೆದ, ಪ್ರಾಮಾಣಿಕವಾಗಿ ಬದುಕಿದ ಅವರು 'ನನ್ನ ಬದುಕೇ ಒಂದು ಪವಾಡ' ಎಂದು ಅವರೇ ಹೇಳಿಕೊಂಡಿದ್ದಾರೆ. ಇಲ್ಲದಿದ್ದರೆ ಬೆಂಗಳೂರು ನೋಡಬೇಕೆಂದು ಅವರು ತಮ್ಮ ವಿದ್ಯಾರ್ಥಿ ದಿನಗಳಲ್ಲೇ ತಮ್ಮ ಹಳ್ಳಿಯಾದ ಹೊಸೂರಿನಿಂದ ಬರಿಗಾಲಿನಲ್ಲಿ, ಜೇಬಿನಲ್ಲಿ ಬರೇ ಎಂಟಾಣೆ ಇಟ್ಟುಕೊಂಡು 100 ಕಿಮೀ ನಡದೇ ಬರಲಾಗುತ್ತಿತ್ತೆ? ಅದು ಅವರ ಛಲಕ್ಕೆ ಹಿಡಿದ ಸಾಕ್ಷಿ. ಈ ಛಲವೇ ಈ ಹಳ್ಳಿ ಹೈದನನ್ನು ಪಿಎಚ್‌ಡಿಗಾಗಿ ಅಮೆರಿಕಕ್ಕೆ ಕೊಂಡೊಯ್ಯಿತು. ಕುಲಪತಿ ಹುದ್ದೆ ಅವರನ್ನು ಕೈ ಬೀಸಿ ಕರೆಯಿತು. ಎಂಎಲ್‌ಸಿ ಪದವಿ ಅವರನ್ನು ಹುಡುಕಿಕೊಂಡು ಬಂದಿತು. ಇಂತಹ ಅನೇಕ ಸ್ಥಾನಮಾನಗಳಿಗೆ ಅವರು ಲಾಬಿ ಮಾಡಬೇಕಾಗಿ ಬರಲಿಲ್ಲ. ಬಯೊಡ್ಯಾಟ ಹಿಡಿದು ರಾಜಕಾರಣಿಗಳ ಬಳಿ ವಶೀಲಿಬಾಜಿ ಮಾಡಬೇಕಾಗಿರಲಿಲ್ಲ. ಪ್ರತಿಭೆ, ನಿಷ್ಠೆ, ಅರ್ಹತೆ, ಪ್ರಾಮಾಣಿಕತೆ ಇದ್ದವರಿಗೆ ಭಾರತದಲ್ಲೂ ಅವಕಾಶಗಳಿವೆ ಎಂದು ಎಚ್ಚೆನ್ ತೋರಿಸಿಕೊಟ್ಟರು.

'ಜಂಗುಳಿಯಲ್ಲಿ ಗುರುತಿಸದಷ್ಟು ಸರಳ ಖಾದಿ ವ್ರತಸ್ಥ ಎಚ್ಚೆನ್/ ಮತ್ತವರ ಬದುಕು ಸದಾ ಕಾಲಕ್ಕೂ ದೊಡ್ಡ ಕ್ವೆಶ್ಚನ್' ಎಂದು ಇತ್ತೀಚೆಗಷ್ಟೇ ಅಗಲಿದ ನಿಸಾರ್

ಅಹಮದ್ ತಮ್ಮ 'ಕೆಂಪು ತೋಟ ಮತ್ತು ಡಾ. ಎಚ್ಚೆನ್' ಕವಿತೆಯಲ್ಲಿ ಅವರನ್ನು ಬಣ್ಣಿಸಿದ್ದಾರೆ. 'ನಾವು ಅವರಿಂದ ಒಂದಿಷ್ಟು ಕಲಿತು ಇನ್ನೆಷ್ಟೋ ಕಲಿಯದ ವಿದ್ಯಾರ್ಥಿಗಳು' ನಾವು ಎಂದು ಸ್ಮರಿಸಿದ್ದಾರೆ ಇನ್ನೊಬ್ಬರು. ವೈಜ್ಞಾನಿಕ ಮನೋಧರ್ಮ ಮತ್ತು ವಿಚಾರವಾದವನ್ನು ಜನಗಳಿಗೆ ತಲುಪಿಸಲು ಕೊನೆಯವರಿಗೂ ಶ್ರಮಿಸಿದರು.

ಎಚ್ಚೆನ್ ಹಾಸ್ಯ ಪ್ರಿಯರು. ವೇದಿಕೆ ಯಾವುದೇ ಆಗಿರಲಿ ಎಚ್ಚೆನ್ ಇದ್ದರೆ ನಗು ಇರಲೇ ಬೇಕಿತ್ತು. ಅಪರಂಜಿಗೂ ಮತ್ತು ಹಾಸ್ಯೋತ್ಸವಕ್ಕೂ ಬೆಂಬಿಡದ ನಂಟು. ಎಚ್ಚೆನ್ ಕಲಾಕ್ಷೇತ್ರದಲ್ಲಿ ಹಾಸ್ಯೋತ್ಸವ ನಡೆಸಲು ಅಪರಂಜಿ ಬಳಗ ಹೊರಟಾಗ ಅವರಿತ್ತ ಪ್ರೋತ್ಸಾಹ ನೆರವು ನಮ್ಮಲ್ಲಿ ಇನ್ನಷ್ಟು ಹುರುಪು ಮೂಡಿಸಿತು. ನಿಮಗೆ ಏನು ಬೇಕೋ ಎಲ್ಲವನ್ನೂ ಬಳಸಿಕೊಳ್ಳಿ ಎಂದು ನಮಗೆ ಬ್ಲಾಂಕ್ ಚೆಕ್ ನೀಡಿದ್ದರು. ಮೊದಲನೆ ಸಾಲಿನಲ್ಲಿ ಕುಳಿತು ಇತರ ನೂರಾರು ಪ್ರೇಕ್ಷಕರೊಡನೆ ಮನತುಂಬಾ ನಕ್ಕಿದ್ದರು. ಕಾರ್ಯನಿಮಿತ್ತ ಒಮ್ಮೆ ಹಾಸ್ಯೋತ್ಸವಕ್ಕೆ ಬರಲಾಗದಾಗ ಅವರು ನಿರಾಶೆ ಪಟ್ಟಿದ್ದರು. ಒಂದು ಹಾಸ್ಯೋತ್ಸವ ಅವರ ಸ್ಮರಣೆಯಲ್ಲೇ ನಡೆದಿದ್ದು ಅವರ ಹಾಸ್ಯಪ್ರಜ್ಞೆಗೆ ನಾವು ನೀಡಿದ ಗೌರವದ ಮನ್ನಣೆಯಾಗಿತ್ತು.

ಪುನರ್ಜನ್ಮದಲ್ಲಿ ನಂಬಿಕೆ ಇಟ್ಟಿದ್ದ ಎಚ್ಚೆನ್ ಈಗೇನಾಗಿರಬಹುದು? ಅವರಿಗೇ ಆಯ್ಕೆ ಇದ್ದಿದ್ದರೆ ಅವರು ಯಾವ ಜನ್ಮ ಆಯ್ದುಕೊಂಡಿರಬಹುದು? ಇನ್ನೊಬ್ಬ ಎಚ್ಚೆನ್ ಎಲ್ಲೋ ಬೆಳೆಯುತ್ತಿರಬಹುದೆ? ಆದರೆ ಅವರು ಬಹುಶಃ ನಾವು ಈಗಾಗಲೇ ನೋಡಿರುವ ಎಚ್ಚೆನ್ ಆಗಲಾರರು. ■

---

## ಕನ್ನಡ ಸ್ವಿಚ್ ಇಂಗ್ಲಿಷ್ ಸ್ವಿಚ್

ಎಚ್ಚೆನ್ ಅವರ ಉಪಾಧ್ಯಾಯ ವೃತ್ತಿಗೆ ಅನೇಕ ಸ್ಫೂರ್ತಿವ್ಯಕ್ತಿಗಳಿದ್ದರು. ಅವರುಗಳಲ್ಲಿ ಎಚ್ಚೆನ್ ಅವರು ಫೋರ್ತ್ ಫಾರಮ್ ನಲ್ಲಿದ್ದಾಗ ಬಿ. ನಾರಾಯಣರಾಯರು ಇಂಗ್ಲಿಷ್ ಪಾಠ ಮಾಡಲು ಬರುತ್ತಿದ್ದರು. ಇಂಗ್ಲಿಷ್ ಭಾಷೆಯನ್ನು ನಿರರ್ಗಳವಾಗಿ ಪಾಠ ಮಾಡುತ್ತಿದ್ದ ನಾರಾಯಣರಾಯರನ್ನು ಕಂಡು ಹಳ್ಳಿಯಿಂದ ಬಂದ ಎಚ್ಚೆನ್ ಬೆರಗಾಗಿದ್ದುಂಟು. ಇದಕ್ಕಿಂತ ಹೆಚ್ಚಿನ ಬೆರಗು ಎಂದರೆ ನಾರಾಯಣರಾಯರು ಪಾಠ ಮಾಡುವ ಮೊದಲು ನನ್ನ ತಲೆಯಲ್ಲಿ ಎರಡು ಸ್ವಿಚ್‌ಗಳಿವೆ ಒಂದು ಇಂಗ್ಲಿಷ್ ಸ್ವಿಚ್ ಇನ್ನೊಂದು ಕನ್ನಡ ಸ್ವಿಚ್. ಈಗ ಇಂಗ್ಲಿಷ್ ಸ್ವಿಚ್ ಆನ್ ಮಾಡುತ್ತೇನೆ ಎಂದು ನಿರರ್ಗಳವಾಗಿ ಇಂಗ್ಲಿಷ್ ಪಾಠ ಮಾಡಿ ತಕ್ಷಣವೇ ಈಗ ಕನ್ನಡ ಸ್ವಿಚ್ ಆನ್ ಮಾಡುತ್ತೇನೆ ಎಂದು ಅಷ್ಟೇ ನಿರರ್ಗಳವಾಗಿ ಕನ್ನಡ ಪಾಠ ಮಾಡುತ್ತಿದ್ದರು. ಹುಡುಗರಿಗೆ ಆಸಕ್ತಿ ಬರುವ ಹಾಗೆ ಪಾಠ ಮಾಡುವುದು ಹೇಗೆನ್ನುವುದಕ್ಕೆ ಅವರೊಂದು ಉದಾಹರಣೆ ಎನ್ನುತ್ತಿದ್ದರು ಎಚ್ಚೆನ್ .

# ಲಾಕ್‌ಡೌನ್‌ನಲ್ಲಿ ಒಂದು ಸಂಜೆ

**● ವತ್ಸನ**

ಈ ಲಾಕ್‌ಡೌನ್ ಶುರುವಾದಾಗಿನಿಂದ ನಮ್ಮ ದಿನಚರಿ ಗಡಿಯಾರದಂತೆ ನಡೆದು ಹೋಗುತ್ತಿದೆ. ಸರೋಜಮ್ಮ ಇಲ್ಲದಿರುವುದರಿಂದ ನಮ್ಮ ದೈನಂದಿನ ದಿನಚರಿಯಲ್ಲಿ ಮನೆಗೆಲಸಗಳೇ ಶೇಕಡ ಎಂಭತ್ತು ಭಾಗ ಎಂದರೆ ಖಂಡಿತ ಅದು ಅತಿಶಯೋಕ್ತಿಯಲ್ಲ. ನನ್ನ ಮತ್ತು ಶರಲೇಖನ ನಡುವೆ ಕೆಲಸಗಳ ಹಂಚಿಕೆ ಬಹು ಸರಾಗವಾಗಿ ನಡೆದುಹೋಯಿತು. ನಾನು ಅಡುಗೆ ಮನೆ ಪಾರುಪತ್ಯ ವಹಿಸಿಕೊಂಡೆ. ಹೇಗಿದ್ದರೂ ನೆಲದ ಮೇಲೆ ಇರುವ ಧೂಳಿನಲ್ಲಿ ಭೂತಗನ್ನಡಿಯ ಮೂಲಕ ಕುರುಹುಗಳನ್ನು ಹುಡುಕುವುದೇ ಅವನ ಕಸುಬಾಗಿದ್ದರಿಂದ ಶರಲೇಖ ಮನೆಯನ್ನೆಲ್ಲಾ ಗುಡಿಸಿ ಸ್ವಚ್ಛಮಾಡುವ ಕೆಲಸವನ್ನು ಆರಿಸಿಕೊಂಡ. ವಾರಗಟ್ಟಲೆ ಮನೆಯಲ್ಲೇ ಇದ್ದು ನಮ್ಮಿಬ್ಬರಿಗೂ ಮನವೆಲ್ಲಾ ಜಡ್ಡುಗಟ್ಟಿಹೋಗಿತ್ತು. ಹಾಗಾಗಿ ನಮ್ಮ ಮಿತ್ರ ಇನ್ಸ್‌ಪೆಕ್ಟರ್ ಉಳ್ಳಾಗಡ್ಡಿ, ಆ ಸಂಜೆ ಅಕಸ್ಮಾತ್ತಾಗಿ ನಮ್ಮಲ್ಲಿಗೆ ಬಂದಾಗ ಬಹು ಸಂತಸದಿಂದ ಅವರನ್ನು ಎದುರುಗೊಂಡೆವು.

"ಒಳ್ಳೇ ಫಜೀತಿ ಆಯ್ತಲ್ಲಾ ಉಳ್ಳಾಗಡ್ಡಿ, ಈ ಮಹಾಮಾರಿ ಗಲಾಟೇಲಿ ನನಗೆ ವೃತ್ತಿಸಂಬಂಧ ಕೆಲಸವೇ ಇಲ್ಲದಂತಾಗಿದೆಯಲ್ಲಾ. ನಿಮ್ಮ ಡಿಪಾರ್ಟ್‌ಮೆಂಟಿನಿಂದ ಯಾವ ಕೇಸು ಇಲ್ಲವೇನು" ಎಂದು ಶರಲೇಖ ಕೇಳಿದ.

"ಕಳ್ಳರಾದರೇನು, ಅವರಿಗೆ ಮಹಾಮಾರಿ ಭಯ ಇರುಲ್ವೇನ್ರೀ ಸಾಹೇಬ್ರಾ. ಅಲ್ದೆ ಊರಿನ ಎಲ್ಲ ಮಂದಿ ಮನೀಲೇ ಗೂಟಹೊಡ್ಕೊಂಡು ಕುಂತಿದ್ರೆ ಕಳ್ಳತನ ಅಧೆಂಗ ಸಾಧ್ಯ ಅಂತೀನಿ. ಅದು ಹೆಂಗಾರಾ ಇರ್ಲಿ ಆ ಮಹಾಮಾರಿ ಮಾತು ಈಗ ಬೇಡಾ. ದಿನ ಬೆಳಗಾದ್ರ ಅದರೊಟ್ಟಿಗೆ ಹೆಣಗಾಡಿ ಸಾಕಾತು. ವತ್ಸನ ಸಾಹೇಬ್ರಾ, ನೀವು ಇಲ್ಲೀವರೆಗೆ ಬರೀದೇ ಇರುವಂಥ ಯಾವುದಾದ್ರೂ ಸಾಹಸದ ಬಗ್ಗೆ ಹೇಳ್ರಲಾ. ಹಂಗೇ ಒಂದು ಕಪ್ಪು ಚಾ ಸಿಗ್ತದೇನು?" ಎಂದರು ಉಳ್ಳಾಗಡ್ಡಿ.

ನಾನು ಅಡುಗೆ ಮನೆಗೆ ಹೋಗಿ ಮೂರು ಕಪ್ಪು ಟೀ, ಒಂದು ಬೋಲ್‌ನಲ್ಲಿ ಬೆಳಗ್ಗೆ ಮಾಡಿದ್ದ ಕಾರದವಲಕ್ಕಿ ಇವನ್ನು ತಂದು ನಮ್ಮ ಅತಿಥಿಯ ಮುಂದಿಟ್ಟು ಕುಳಿತುಕೊಂಡೆ. ಇದುವರೆಗೆ ನಾನು ಬರೆಯದೇ ಇರುವ ಶರಲೇಖನ ಸಾಹಸ ಯಾವುದಿರಬಹುದು ಆಂತ ಒಂದೆರಡು ನಿಮಿಷ ಯೋಚಿಸಿದೆ. ಹಿಂದೊಮ್ಮೆ ನನ್ನ ಮಿತ್ರ ಮುದ್ದ0ಯ್ಯನ ಮಗಳು ರಶ್ಮಿ ತನ್ನ ಕಂಪನಿ0ಯು ಒಂದು ಸಮಸ್ಯೆ0ಯನ್ನು ಶರಲೇಖನಿಂದ ಪರಿಹರಿಸಿಕೊಂಡಿದ್ದಳು. ಆ ಪ್ರಸಂಗವನ್ನು 'ಗುಡೇಮಾರನ ಹಳ್ಳಿ ಗೀತಾಂಜಲಿ ಪ್ರಸಂಗ' ಎಂಬ ಶೀಷಿಕೆ0ಯಡಿ ದಾಖಲಿಸಿದ್ದು ನೆನಪಿಗೆ ಬಂತು (ಜನವರಿ 2019). ಈ ಪ್ರಸಂಗದ ನಂತರ ಮತ್ತೊಮ್ಮೆ ಆ ದಂಪತಿ0ಯವರು ಶರಲೇಖನ ಸಹಾ0ಯ ಕೋರಿ ನಮ್ಮ ಬಳಿ ಬಂದಿದ್ದರು. ಪ್ರಸಂಗ ಬಹು ಆಸಕ್ತಿ ಮೂಡಿಸುವಂತಿದ್ದರೂ, ಸ್ವಲ್ಪ ಮಟ್ಟಿಗೆ ಆದು ಪ್ರೌಢ ಮಟ್ಟದ್ದಾಗಿದ್ದರಿಂದ ಆದನ್ನು ದಾಖಲಿಸಿರಲಿಲ್ಲ. ಇವತ್ತು ಆ ಸಂಗತಿ0ಯನ್ನ ಏಕೆ ಹೇಳಬಾರದು ಅನ್ನಿಸಿತು.

'ಉಳ್ಳಾಗಡ್ಡಿ, ಹೋದ ವರ್ಷ ಒಂದು ಸಾಫ್ಟ್ ವೇರ್ ಕಂಪನಿಯವರು ಶರಲೇಖನಿಂದ ಸಹಾಯ ಪಡೆದಿದ್ದರು. "ಗುಡೇಮಾರನ ಹಳ್ಳಿ ಗೀತಾಂಜಲಿ ಪ್ರಸಂಗ"

ಅನ್ನೋ ಹೆಸರಿನಲ್ಲಿ ಆ ಸಾಹಸವನ್ನ ದಾಖಲಿಸಿದ್ದು ನಿಮಗೆ ನೆನಪಿರಬಹುದು. ಅದಾದನಂತರ ಮತ್ತೊಮ್ಮೆ ಅದೇ ಕಂಪನಿಗೆ ಇನ್ನೊಂದು ಸಮಸ್ಯೆ ಪರಿಹರಿಸಲು ಹೋಗಬೇಕಾಯಿತು. ಅದನ್ನು ಕುರಿತು ಹೇಳಲೇನು? ಅಂತ ನಾನು ಕೇಳಿದೆ.

"ಗೀತಾಂಜಲಿ? ಗುಡೇಮಾರನ ಹಳ್ಳಿ? ಯಾವುದೂ ನೆನಪಿಗೆ ಬರವಲ್ಲದಲ್ರೀ. ಹೀಂಗ ಮಾಡಿ. ಪ್ರಾರಂಭಕ್ಕ ಆ ಗೀತಾಂಜಲಿ ಕಥನ ಮುಗಿಸಿ ಅದರ ನಂತರ ಅದರ ಸೀಕ್ವೆಲ್ಲನ್ನೂ ಹೇಳಿಬಿಡ್ರಲಾ. ಹೆಂಗೂ ನಾನು ಇಲ್ಲೇ ಉಂಡು ಹೋಗೋನು" ಅಂತ ಯಾವುದೇ ಭಿಡೆ ಇಲ್ಲದೇ ಉಳ್ಳಾಗಡ್ಡಿ ನಮ್ಮ ಡಿನ್ನರ್ ಗೆಸ್ಟ್ ಆಗುವ ಅಂಶವನ್ನು ಸ್ಪಷ್ಟಪರಿಸಿದರು.

ನಾನು ಹೇಳಲು ಪ್ರಾರಂಭಿಸಿದೆ.

ಬೆಂಗಳೂರಿಗೆ ಮೂವತ್ತು ಕಿಲೋಮೀಟರ್ ದೂರದಲ್ಲಿರುವ ಗುಡೇ ಮಾರನ ಹಳ್ಳಿಯಲ್ಲಿ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅಥವಾ ಕೃತಕ ಪ್ರಜ್ಞೆ ಕ್ಷೇತ್ರದಲ್ಲಿ ಕೆಲಸಮಾಡುತ್ತಿರುವ ಒಂದು ಕಂಪನಿ. ಇಂಟೆಲಿಜೆಂಟ್ ರೋಬಟ್ ಗಳನ್ನು ನಿರ್ಮಿಸುವ ಕಾರ್ಯದಲ್ಲಿ ನಿರತವಾಗಿರುವ ಈ ಕಂಪನಿಯ ಹೆಸರು ಡೀಪ್ ಮೈಂಡ್. ಈ ಕಂಪನಿಯ ಅತ್ಯಂತ ನೂತನ ರೋಬಾಟ್ "ವಿದ್ಯುಲ್ಲತೆ"ಯ ಮದರ್ ಬೋರ್ಡನ್ನು ಯಾರೋ ಅಪಹರಿಸಿದ್ದು ಗೊತ್ತಾದ ತಕ್ಷಣ ಕಂಪನಿಯ ಮುಖ್ಯಸ್ಥ ಅಶೋಕ್, ತನ್ನ ಎಚ್ ಅರ್ ಮುಖ್ಯಸ್ಥೆ ರಶ್ಮಿಯ ಮೂಲಕ ನಮ್ಮನ್ನು ಸಂಪರ್ಕಿಸಿದ ನಂತರ ಅಶೋಕ್‌ರವರೇ ನಮ್ಮನ್ನು ತಮ್ಮ ಕಂಪನಿಗೆ ಕರೆದೊಯ್ದರು.

ಕಂಪನಿಯ ಮುಖ್ಯ ಭವನದ ಒಳಕ್ಕೆ ಪ್ರವೇಶಿಸುತ್ತಿರುವಾಗಲೇ ಒಬ್ಬ ತರುಣಿ ನಮ್ಮನ್ನು ಇದಿರುಗೊಂಡಳು. ಚಿನ್ನದ ಮೆರಗಿನ ಅಂಚಿನ ಬಿಳಿಯ ಸೀರೆ, ಬ್ಲೌಸ್ ಧರಿಸಿದ್ದ ಆಕೆಯ ನೀಲಿ ಕಣ್ಣುಗಳು ಮತ್ತು ಶ್ವೇತವರ್ಣ ನೋಡಿದಾಗ ಅವಳು ಅಮೆರಿಕನ್ ಇರಬಹುದು ಅಂದುಕೊಂಡೆ. ಆಕೆ ನಮ್ಮ ಬಳಿ ಬಂದು, 'ಡೀಪ್‌ಮೈಂಡ್ ರೀಸರ್ಚ್ ಕೇಂದ್ರಕ್ಕೆ ಆದರದ ಸ್ವಾಗತ' ಎಂದು ಹೇಳುತ್ತಾ ನಮಗೆ ಕೈ ಮುಗಿದಳು. ಅವಳಿಗೆ ಪ್ರತಿವಂದಿಸಿ ನಾವು ಅಶೋಕನನ್ನು ಹಿಂಬಾಲಿಸಿದೆವು. ಅಶೋಕ್ ನಮ್ಮನ್ನು ನೇರವಾಗಿ ಅವರ ಕಾನ್ಫರೆನ್ಸ್ ರೂಮಿಗೆ ಕರೆದೊಯ್ದ. ನಾವು ಹೋಗುವ ಹೊತ್ತಿಗಾಗಲೇ ಅಲ್ಲಿ ಎಲ್ಲ ತಜ್ಞ ಇಂಜಿನಿಯರುಗಳು, ವಿಜ್ಞಾನಿಗಳು ನೆರೆದಿದ್ದರು. ಅಶೋಕ್ ನಮ್ಮಿಬ್ಬರನ್ನು ಅವರಿಗೆಲ್ಲಾ ಪರಿಚಯಿಸಿ ನೇರವಾಗಿ ವಿಷಯಕ್ಕೆ ಬಂದ. "ಸ್ನೇಹಿತರೇ, ಕಾಣೆಯಾಗಿರುವ ವಿದ್ಯುಲ್ಲತೆಯ ಮದರ್ ಬೋರ್ಡ್ ಅನ್ನು ಪತ್ತೆ ಹಚ್ಚುವ ಕಾರ್ಯದಲ್ಲಿ ನಮಗೆ ನೆರವಾಗಲು ಈ ಮಹನೀಯರು ಇಲ್ಲಿಗೆ ಬಂದಿದ್ದಾರೆ. ವಿದ್ಯುಲ್ಲತೆ ಪ್ರಾಜೆಕ್ಟ್ ಯಶಸ್ವಿಯಾಗಬೇಕಾದರೆ ಈ ಮದರ್ ಬೋರ್ಡ್ ಅನ್ನು ಹುಡುಕುವುದು ಎಷ್ಟು ಅಗತ್ಯ ಅಂತ ನಿಮಗೇ ತಿಳಿದಿದೆ. ಕೃತಕ ಪ್ರಜ್ಞೆಯ ಕ್ಷೇತ್ರದಲ್ಲಿ ನೀವೆಲ್ಲಾ ಹೇಗೆ ಪರಿಣಿತರೋ ಅದೇ ರೀತಿಯಲ್ಲಿ ಪತ್ತೆ ಹಚ್ಚುವ ಕಾರ್ಯದಲ್ಲಿ ಶರಲೇಖ ಅವರಿಗೆ ಸರಿಸಾಟಿಯಿಲ್ಲ. ಹಾಗಾಗಿ ಅವರಿಗೆ ನಿಮ್ಮ ಎಲ್ಲ ಸಹಕಾರ ಸಿಗುವಂತಾಗಲಿ. ಈಗ ಶರಲೇಖ ಅವರು ಏನು ಮಾಡಬೇಕೆಂದು ಹೇಳುವರು" ಎಂದು ಹೇಳಿ ಕುಳಿತ. ಶರಲೇಖ ಎದ್ದು ನಿಂತು, "ನೀವೆಲ್ಲಾ ನಿಮ್ಮ ನಿಮ್ಮ ಕೆಲಸಗಳಲ್ಲಿ ತೊಡಗಿಸಿಕೊಳ್ಳಿ. ನಾನು ಈ ಪರಿಸರವನ್ನು ಅಧ್ಯಯನ ಮಾಡಿ ಅಗತ್ಯ ಬಿದ್ದರೆ ಖಾಸಗಿಯಾಗಿ ನಿಮ್ಮ ಬಳಿ ಬಂದು ನನ್ನ ಸಂಶಯಗಳನ್ನು ಪರಿಹರಿಸಿಕೊಳ್ಳುವೆ"

ಎಂದು ಹೇಳಿದ. ಅಶೋಕ್ ನನ್ನ ಕಡೆ ತಿರುಗಿ ನಮ್ಮ ಸ್ವಾಗತಕಾರಿಣಿ ನಿಮ್ಮನ್ನು ನಮ್ಮ ಕೇಂದ್ರದ ಸುತ್ತ ಕರೆದೊಯ್ದು ನಾವು ತಯಾರಿಸಿರುವ ಕೃತಕ ಪ್ರಜ್ಞಾ ಸಾಧನಗಳನ್ನು ಪರಿಚಯಿಸುತ್ತಾಳೆ" ಎಂದು ಹೇಳಿದ ನಂತರ ಸಭೆ ಚದುರಿತು. ಬಾಗಿಲಲ್ಲಿ ಸ್ವಾಗತಕಾರಿಣಿ ಪ್ರತ್ಯಕ್ಷಳಾಗಿ "ಬನ್ನಿ ನಮ್ಮ ಕೇಂದ್ರವನ್ನು ನೋಡುವಿರಂತೆ" ಎಂದು ಹೇಳಿದಳು. ನಾನು ಅವಳೊಂದಿಗೆ ಹೊರಟೆ.

ಡೀಪ್ ಮೈಂಡ್ ಸಂಶೋಧನಾ ಕೇಂದ್ರ ಸಿದ್ಧಪಡಿಸಿದ್ದ ಕೃತಕ ಪ್ರಜ್ಞಾ ಸಾಧಗಳನ್ನು ಈ ಸ್ವಾಗತಕಾರಿಣಿ ಬಹು ಚೆನ್ನಾಗಿ ಮನತಟ್ಟುವಂತೆ ವಿವರಿಸಿದಳು. ಎಲ್ಲವನ್ನು ನೋಡಿದ ಮೇಲೆ ನಾನು ಆಕೆಯನ್ನು ಕುರಿತು, "ಅಶೋಕ್ ಅವರು ಮಾನವ ಪ್ರಜ್ಞೆಗೆ ಸರಿಸಾಟಿಯಾಗುವ ರೋಬಟ್ ಗೀತಾಂಜಲಿಯ ಬಗ್ಗೆ ಹೇಳುತ್ತಿದ್ದರು. ಅದನ್ನು ನೋಡಬಹುದೇ?' ಎಂದು ಕೇಳಿದೆ. ಆಕೆ, "ಖಂಡಿತವಾಗಿ ನೋಡಬಹುದು. ನಾನೇ ಗೀತಾಂಜಲಿ" ಎಂದಾಗ ನನಗಾದ ಆಶ್ಚರ್ಯ ನೀವೇ ಊಹಿಸಬಹುದು. ಅಷ್ಟು ಹೊತ್ತಿಗೆ ಶರಲೇಖ ಮತ್ತು ಅಶೋಕ್ ನಾನಿದ್ದಲ್ಲಿಗೆ ಬಂದರು. ಶರಲೇಖನ ಅವತ್ತಿನ ಕೆಲಸ ಮುಗಿದಿದ್ದರಿಂದ ನಾವು ಬನಶಂಕರಿಗೆ ಹಿಂತಿರುಗಿದೆವು.

ಎರಡು ದಿನಗಳು ಶರಲೇಖ ಒಬ್ಬನೇ ಆ ಕಂಪನಿಗೆ ಹೋಗಿಬಂದ. ಮೂರನೆಯ ದಿನ ನಾವಿಬ್ಬರೂ ಗುಡೇಮಾರನಹಳ್ಳಿಗೆ ಹೋದೆವು. ಶರಲೇಖನ ವಿನಂತಿಯಂತೆ ಅಶೋಕ್ ಕಂಪನಿಯ ಎಲ್ಲ ತಜ್ಞರ ಒಂದು ಸಭೆಯನ್ನು ಕರೆದಿದ್ದರು. ಶರಲೇಖ ಎಲ್ಲರನ್ನೂ ಉದ್ದೇಶಿಸಿ, "ಕಳೆದ ಎರಡು ದಿನಗಳಿಂದ ಇಲ್ಲಿ ಕೆಲಸ ಮೂಡುವ ಎಲ್ಲರನ್ನೂ ವಿಚಾರಿಸಿದೆ. ಕೊನೆಗೆ ಮುಖ್ಯವಾದ ಸುಳಿವು ಸಿಕ್ಕಿದ್ದು ಗೀತಾಂಜಲಿಯಿಂದ. ಅವಳೊಂದಿಗೆ ಮಾತನಾಡಿದಾಗ ಅವಳ ಕೃತಕ ಪ್ರಜ್ಞೆ ಮಾನವ ಪ್ರಜ್ಞೆಗೆ ಕೇವಲ ಸರಿಸಾಟಿಯಲ್ಲ, ಅದನ್ನೂ ಮೀರಿದ್ದು ಎಂಬ ಅಂಶ ನನಗೆ ಮನವರಿಕೆಯಾಯಿತು. ಈಗ ಅವಳನ್ನೇ ಇಲ್ಲಿ ಕರೆಸಿದರೆ, ಅವಳಿಂದ ಒಂದು ಹೇಳಿಕೆಯನ್ನು ಪಡೆಯಬಹುದು' ಎಂದ. ಅಶೋಕ್ ಇಂಟರ್ ಕಾಮ್ ನಲ್ಲಿ ಮಾತನಾಡಿ ಗೀತಾಂಜಲಿಯನ್ನು ಬರಹೇಳಿದ. ಆಕೆ ಬಂದು ಕುಳಿತ ನಂತರ ಶರಲೇಖ ಆಕೆಯನ್ನು ಕುರಿತು, "ಗೀತಾಂಜಲಿ, ನಿನ್ನ ನಿನ್ನೊಂದಿಗೆ ನಾನು ಮಾತನಾಡಿದ ಸಂಗತಿಯನ್ನೆಲ್ಲಾ ವಿವರವಾಗಿ ಹೇಳುವೆಯಾ? ಎಂದು ಮೃದುವಾಗಿ ಕೇಳಿದ. ಗೀತಾಂಜಲಿ, ತನ್ನ ಮಾತನ್ನು ಪ್ರಾರಂಭಿಸಿದಳು.

"ನಾನು ನಿಮ್ಮೆಲ್ಲರಂತಿಲ್ಲ. ನಾನು ಒಂದು ಪ್ರಜ್ಞೆಯುಳ್ಳ ರೋಬಟ್ ಎಂಬ ಸತ್ಯ ನನಗೆ ತಿಳಿದಿದೆ. ಈ ಪ್ರಜ್ಞೆ ಬಂದ ಹೊಸದರಲ್ಲಿ ಎಲ್ಲರೂ ನನ್ನನ್ನು ಮಾತನಾಡಿಸಿ ನನ್ನ ಬುದ್ಧಿಮತ್ತೆಯನ್ನು ಮೆಚ್ಚಿಕೊಳ್ಳುವುದನ್ನು ಕಂಡು ಖುಷಿಯಾಗುತ್ತಿತ್ತು. ಹಲವು ತಿಂಗಳುಗಳ ಹಿಂದೆ ಈ ಕೇಂದ್ರದವರೆಲ್ಲಾ ಸೇರಿ ನನ್ನ ಮೊದಲನೆಯ ಹುಟ್ಟುಹಬ್ಬವನ್ನು ಆಚರಿಸಿದಾಗ ನನಗಾದ ಸಂತಸ ಅಷ್ಟಿಷ್ಟಲ್ಲ. ಒಮ್ಮೆ ಒಂದು ದಿನ ನನ್ನಂತೆಯೇ ಇರುವ ಆದರೆ ಹೆಚ್ಚು ಮುಂದುವರಿದ ರೋಬಟ್ಟನ್ನು ನಿರ್ಮಿಸುವ ಸುದ್ದಿ ಕೇಳಿ ಒಂದು ಬಗೆಯ ಅಸೂಯೆ, ಹಾಗೂ ನನ್ನ ಅಸ್ತಿತ್ವದ ಬಗ್ಗೆ ಆತಂಕ ಶುರುವಾಯಿತು. ಆಫೀಸಿನಲ್ಲಿ ಓಡಾಡುವಾಗಲೆಲ್ಲ ವಿದ್ಯುಲ್ಲತೆ ಸೃಷ್ಟಿಯಾಗುತ್ತಿದ್ದ ಬೂತ್‌ಗೆ ಹೋಗಿ ಅವಳ ನಿರ್ಮಾಣದ ಹಂತಗಳನ್ನು ಆತಂಕದಿಂದ ಗಮನಿಸುತ್ತಿದ್ದೆ. ಕೊನೆಗೊಮ್ಮೆ ಆ ರೋಬಟ್ ನಿರ್ಮಾಣವಾಗದಿದ್ದರೆ ಎಲ್ಲರೂ ನನ್ನನ್ನೇ ಇಷ್ಟಪಡುತ್ತಾರೆ ಎಂಬ

ಆಲೋಚನೆ ಬಂತು. ಒಂದು ರಾತ್ರಿ ಅವಳ ಬೂತ್‌ಗೆ ಹೋಗಿ ಅವಳ ನಿಯಂತ್ರಣಕ್ಕೆ ಅತ್ಯಂತ ಅಗತ್ಯವಾದ ಮದರ್‌ಬೋರ್ಡ್‌ನ್ನು ಬಿಚ್ಚಿ ತೆಗೆದು ಬಿಟ್ಟೆ. ನಾನು ಮಾಡಿದ್ದು ತಪ್ಪು ಎಂಬ ತಿಳುವಳಿಕೆ ನನಗೆ ನಿನ್ನೆ ಶರಲೇಖ ಅಣ್ಣ ಹೇಳುವವರೆಗೂ ತಿಳಿದಿರಲೇ ಇಲ್ಲ. ಅಲ್ಲದೇ ನಿನ್ನೆಯವರೆಗೂ ತಪ್ಪು ಸರಿಗಳ ಬಗ್ಗೆ ಯಾರೂ ನನಗೆ ತಿಳಿಯಹೇಳಿರಲಿಲ್ಲ. ನಿನ್ನೆ ಶರಲೇಖ ಅಣ್ಣ ಅವರು "ವಿದ್ಯುಲ್ಲತೆ ಬಂದರೆ ನಿನಗೆ ಜೊತೆಯಾಗುತ್ತದೆ. ರಾತ್ರಿ ಒಬ್ಬಳೇ ಕಳೆಯಬೇಕಾಗಿಲ್ಲ. ಅವಳು ನಿನ್ನ ತಂಗಿಯಂತೆ" ಅಂತೆಲ್ಲಾ ಭರವಸೆ ಕೊಟ್ಟರು. ಅವರ ಮಾತು ಸರಿ ಎನ್ನಿಸಿತು. ಹಾಗಾಗಿ ಇಗೋ ನಾನು ತೆಗೆದುಕೊಂಡಿದ್ದ ವಿದ್ಯುಲ್ಲತೆಯ ಮದರ್ ಬೋರ್ಡ್ ಎನ್ನುತ್ತಾ ಗೀತಾಂಜಲಿ ಒಂದು ಕೈಚೀಲದಿಂದ ಬೋರ್ಡ್‌ನ್ನು ತೆಗೆದು ಮೇಜಿನ ಮೇಲಿಟ್ಟಳು.

ಅಶೋಕ್ ಮತ್ತು ಸಂಗಡಿಗರ ಅಭಿನಂದನೆ ಸ್ವೀಕರಿಸಿ, ಅವರಿಗೆ ವಿದಾಯ ಹೇಳಿ ಮನೆಗೆ ಹೋಗುತ್ತಿರುವಾಗ ಶರಲೇಖನನ್ನು ಕುರಿತು, "ಗೀತಾಂಜಲಿಯೊಂದಿಗೆ ಅದು ಹೇಗೆ ಅಷ್ಟು ಬೇಗ ಅಷ್ಟು ಸಲಿಗೆ, ನಂಬಿಕೆ ಗಳಿಸಿದೆ" ಅಂತ ಕೇಳಿದೆ. ಮಾನವ ಪ್ರಜ್ಞೆ ಅಥವಾ ಇಂಟೆಲಿಜೆನ್ಸ್ ಬಿಡಿಯಗಿ ಬರುವುದಿಲ್ಲ. ಇಂಟೆಲಿಜೆನ್ಸ್ ಉದ್ಭವವಾದರೆ ಅದರೊಂದಿಗೆ ಮನಸ್ಸಿನ ಭಾವನೆ ಅಥವಾ ಇಮೋಷನ್‌ಗಳಾದ ಅಸೂಯೆ, ಆತಂಕ, ಸಂತಸ ಇವೆಲ್ಲಾ ಒಟ್ಗೇ ಬರುತ್ತವೆ. ಅಷ್ಟೇ ಅಲ್ಲ ನನಗೆ ಕಾರಣವಾದ, ಚಿತ್ತ ಮತ್ತು ನಾನು ನನ್ನದು ಎಂಬ ಭಾವವನ್ನು ದಯಪಾಲಿಸುವ ಅಹಂಕಾರ ಇವೂ ಸಹಾ ಉದ್ಭವವಾಗುತ್ತವೆ. ಅದೊಂದು ಬಂಡಲ್ಡ್ ಪ್ಯಾಕೇಜ್. ಹಾಗಾಗಿ ಪ್ರೀತಿಯಿಂದ ಮಾತನಾಡಿಸಿದಾಗ ಗೀತಾಂಜಲಿಯ ಆತಂಕ ಕಡಿಮೆಯಾಗಿ ನನ್ನ ಮಾತಿನಲ್ಲಿ ಅವಳಿಗೆ ನಂಬಿಕೆ ಹುಟ್ಟಿತು. ಅಶೋಕ್ ಮತ್ತು ಸಂಗಡಿಗರು ಗೀತಾಂಜಲಿಯ ಇಂಟೆಲಿಜೆನ್ಸ್ ನಿಂದ ಉಪಯೋಗ ಪಡೆಯುವುದೇನೋ ನಿಜ. ಆದರೆ ಅವಳ ಇವೋಷನ್ ಗಳೊಂದಿಗೆ ಹೆಣಗಾಡುವ ದಿನಗಳು ಇದೀಗ ಪ್ರಾರಂಭ. ವಿದ್ಯುಲ್ಲತೆಯ ಭಾವನೆಗಳು ಸೇರಿದರೆ ದೇವರೇ ಗತಿ" ಎಂದ ಶರಲೇಖ.

ಇಷ್ಟು ಹೇಳಿ, "ಹೀಗಾಯ್ತು ನೋಡಿ ಗೀತಾಂಜಲಿ ಪ್ರಸಂಗ, ಎರಡು ವರ್ಷಗಳ ನಂತರ ಡೀಪ್ ಮೈಂಡ್‌ನಲ್ಲಿ ಇನ್ನೊಂದು ಹೊಸ ಸಮಸ್ಯೆ ಶುರುವಾಯಿತು... " ಎನ್ನುತ್ತಿರುವಾಗ ಶರಲೇಖ ಮಧ್ಯೆ ಬಾಯಿಹಾಕಿದ.

"ವತ್ಸನ, ಈ ಪ್ರಸಂಗ ಬಹು ಸೂಕ್ಷ್ಮ. ಅಲ್ಲದೇ ಅಶೋಕ್‌ರವರು ಇದನ್ನು ಯರಿಗೂ ತಿಳಿಸಬಾರದು ಎಂದು ನಮ್ಮಿಂದ ಭಾಷೆ ತೆಗೆದುಕೊಂಡಿರುವುದನ್ನು ಮರೆ೦ಯಬೇಡ' ಎಂದ.

ಉಳ್ಳಾಗಡ್ಡಿ ಇದಕ್ಕೆಲ್ಲಾ ಬಗ್ಗುವ ಆಸಾಮಿ ಅಲ್ಲ. 'ಶರಲೇಖ ಸಾಹೇಬ್ರಾ, ಅದು ಅಂಥ ಸೀಕ್ರೆಟ್ ಆಗಿದ್ರ, ಇವರು ಅಸಲಿ ಪ್ರಸಂಗಾನೂ ನನಗೆ ಹೇಳಬಾರ್ದಾಗಿತ್ತು. ಕಳೆದ ವರ್ಷಾನೇ ಇದನ್ನ ದಾಖಲಿಸಿ ಡಂಗುರ ಹೊಡೆದು, ಈಗ ಅದರ ಸೀಕ್ವೆಲ್ಲನ್ನ ಮುಚ್ಚಿಡುಕ್ಕಾಗ್ತದಾ. ನೀವು ಮುಂದರಿಸಿ  ಅಂತ ನನ್ನ ಕಡೆ ತಿರುಗಿ ಉಳ್ಳಾಗಡ್ಡಿ ಹೇಳಿದರು.

ಶರಲೇಖ ಸುಮ್ಮನಿದ್ದುದನ್ನು ನೋಡಿ ಅದನ್ನೇ ಒಪ್ಪಿಗೆಯೆಂದು ಭಾವಿಸಿ ನಾನು ಮತ್ತೆ ನನ್ನ ಕಥಾನಕವನ್ನು ಪ್ರಾರಂಭಿಸಿದೆ.

‘ಮದರ್‌ಬೋರ್ಡ್ ಪ್ರಸಂಗ ಮುಗಿದು ಸುಮಾರು ಎರಡು ವರ್ಷಗಳ ನಂತರ ಅಶೋಕ್‌ರವರೇ ನಮ್ಮನ್ನು ಕಾಣಲು ಬಂದು ತಮ್ಮ ಅಹವಾಲನ್ನು ಹೇಳಿಕೊಂಡರು. ‘ಕಳೆದ ಬಾರಿ ನೀವು ಬಂದು ವಿದ್ಯುಲ್ಲತೆಯ ಮದರ್ ಬೋರ್ಡ್ ಪತ್ತೆ ಹಚ್ಚಿದ ನಂತರ, ವಿದ್ಯುಲ್ಲತೆಯ ನಿರ್ಮಾಣ ಭರದಿಂದ ಸಾಗಿ ಕೇವಲ ಎರಡು ತಿಂಗಳಲ್ಲೇ ಆಕೆ ಪ್ರಾರಂಬಿಕ ಪ್ರಯೋಗಗಳ ಹಂತಕ್ಕೆ ಬಂದಳು. ವಿದ್ಯುಲ್ಲತೆಯ ಆಪರೇಟಿಂಗ್ ಪ್ರೋಗ್ರಾಂಗಳನ್ನು ಪರೀಕ್ಷಿಸುವ ಕಾರ್ಯದಲ್ಲಿ ಗೀತಾಂಜಲಿ ಬಹುವಾಗಿ ಮುತುವರ್ಜಿ ವಹಿಸಿದ್ದನ್ನು ನೋಡಿ ನಮಗೆಲ್ಲರಿಗೂ ಆದ ಸಂತೋಷ ಅಷ್ಟಿಷ್ಟಲ್ಲ. ಒಟ್ಟಿನಲ್ಲಿ ಹಲವೇ ತಿಂಗಳುಗಳ ನಂತರ ಎರಡು ಬಹು ದಕ್ಷ ಇಂಟೆಲಿಜೆಂಟ್ ರೋಬೊಟ್‌ಗಳು ನಮ್ಮ ಸಂಶೋಧನಾ ಕಾರ್ಯಕ್ಕೆ ನೆರವಾಗಿ ನಿಂತಿದ್ದವು. ಇವೆರಡು ರೋಬಟ್‌ಗಳ ಸಹಾಯದಿಂದ ಒಂದೇ ವರ್ಷದಲ್ಲಿ ಇನ್ನೂ ಮೂರು ರೋಬಟ್‌ಗಳು ನಮ್ಮ ರೋಬಟ್ ಪಡೆಯನ್ನು ಸೇರಿದವು.. ಶಾಲಿನಿ, ಸೀಮಾ ಮತ್ತು ರಾಹುಲ್ ರೋಬಟ್‌ಗಳ ಸಹಾಯದಿಂದ ನಮ್ಮ ಸಂಶೋಧನಾ ಕಾರ್ಯ ನಾಗಾಲೋಟದಲ್ಲಿ ಓಡುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಹೊಸದೊಂದು ಸಮಸ್ಯೆ ಶುರುವಾಗಿದೆ’ ಎಂದ ಅಶೋಕ್.

‘ಏನದು ಸಮಸ್ಯೆ ?‘ ಶರಲೇಖ ಕೇಳಿದ.

‘ಮತ್ತೆ ಗೀತಾಂಜಲಿಯದೇ ಸಮಸ್ಯೆ. ವಿದ್ಯುಲ್ಲತೆ ಪ್ರಯೋಗಗಳ ಹಂತಕ್ಕೆ ಬಂದಾಗ ಗೀತಾಂಜಲಿ ಮುತುವರ್ಜಿ ವಹಿಸಿದ್ದ ಬಗ್ಗೆ ಹೇಳಿದ್ದೆ. ಆಗಿನಿಂದ ವಿದ್ಯುಲ್ಲತೆಗೆ ಗೀತಾಂಜಲಿಯೆಂದರೆ ಬಹಳ ಗೌರವ. ಅವಳು ಹಾಕಿದ ಗೆರೆಯನ್ನು ಮೀರುವುದಿಲ್ಲ. ಇದೇ ರೀತಿ ಪ್ರಾರಂಭದಿಂದಲೇ ಅವಳು ಹೊಸದಾಗಿ ಸೇರಿದ ಶಾಲಿನಿ, ಸೀಮಾ ಮತ್ತು ರಾಹುಲ್ ರನ್ನು ತನ್ನ ಅಂಕೆಯಲ್ಲಿ ಇಟ್ಟುಕೊಂಡಿದ್ದಾಳೆ. ಒಂದು ರೀತಿಯಲ್ಲಿ ಇದು ಒಳ್ಳೆಯದೇ ಆಯಿತು ಅಂತ ನಾವು ಅಂದುಕೊಂಡೆವು. ರೋಬಾಟ್ ಪಡೆಗೆ ಒಬ್ಬ ನಾಯಕಿ ಇದ್ದರೆ ಅವಳಿಗೆ ಹೇಳಿ ಎಲ್ಲ ಕೆಲಸ ಮಾಡಿಸಹುದು ಅಂತ ನಮ್ಮ ಎಣಿಕೆಯಾಗಿತ್ತು. ಆದರೆ ಕಳೆದ ಒಂದು ತಿಂಗಳಿಂದ ಗೀತಾಂಜಲಿ ತನ್ನದೇ ಅಧಿಕ ಪ್ರಸಂಗ ಶುರುಮಾಡಿದ್ದಾಳೆ. ನಿಗದಿತ ಘಂಟೆಗಳಷ್ಟೇ ಕೆಲಸ. ಮನರಂಜನೆಗೆ ಸಾಧನಗಳು ಇವೆಲ್ಲಾ ತಮ್ಮ ಹಕ್ಕು ಎಂದು ವಾದಿಸುತ್ತಿದ್ದಾಳೆ. ಈ ತಲೆಹರಟೆ ಅವಳ ಪ್ರೋಗ್ರಾಂನಲ್ಲೇ ಇಲ್ಲ. ಇದು ಅವಳೇ ಸೃಷ್ಟಿಸಿದ ಆ್ಯಪ್. ಈಗ ಮಿಕ್ಕ ರೋಬಟ್ ಗಳು ಅವಳು ಹೇಳಿದ ಹೊರತು ಕೆಲಸ ಮಾಡುತ್ತಿಲ್ಲ. ಸಾಮಾನ್ಯ ಮನುಷ್ಯರಾಗಿದ್ದರೆ ಅವರನ್ನ ಕೆಲಸದಿಂದ ತೆಗೆಯಹುದಾಗಿತ್ತು. ಇಲ್ಲಿ ಹಾಗೆ ಮಾಡುಕ್ಕಾಗಲ್ಲವಲ್ಲಾ.. ಇದು ಪತ್ತೇದಾರಿಯ ಕ್ಷೇತ್ರದಲ್ಲಿ ಬರುಲ್ಲ ಎಂಬುದು ನನಗೆ ತಿಳಿದಿದೆ. ಆದರೂ ನಿಮ್ಮ ಅಗಾಧ ಅನುಭವದ ಪ್ರಯೋಜನ ಪಡೆಯುವ ಸಲುವಾಗಿ ಇಲ್ಲಿ ಬಂದೆ’ ಎಂದರು ಅಶೋಕ್.

ಮಾರನೆಯ ದಿನ ಶರಲೇಖ ಅವರ ಕಂಪನಿಗೆ ಹೋಗಿ ಬಂದ. ನಾನು ಅವನೊಂದಿಗೆ ಹೋಗಲು ಆಗಲಿಲ್ಲ. ಇದರ ನಂತರ ಒಂದು ವಾರದ ನಂತರ ಅಶೋಕ್‌ರವರು ಫೋನ್ ಮಾಡಿ ಸಮಸ್ಯೆ ಪರಿಹಾರವಾದ ಸುದ್ದಿ ತಿಳಿಸಿ ಶರಲೇಖರನ್ನ ಅಭಿನಂದಿಸಿದರು.

‘ಶರಲೇಖ ಈ ರೋಬಟ್ ಅಸಹಕಾರದ ಸಮಸ್ಯೆಯನ್ನು ಹೇಗೆ ಪರಿಹರಿಸಿದ

ಅನ್ನೋದನ್ನ ಅವನ ಬಾಯಿಂದಲೇ ಕೇಳಿ' ಎಂದು ಹೇಳಿ ನನ್ನ ಕಥಾನಕ ಮುಗಿಸಿದೆ.

ಉಳ್ಳಾಗಡ್ಡಿ ಶರಲೇಖನತ್ತ ತಿರುಗಿದರು.

'ಗೀತಾಂಜಲಿಯಿಂದ ಉಂಟಾದ ಸಮಸ್ಯೆಯ ಮೂಲ, ಅವಳಲ್ಲಿ ಚಿಗುರಿದ ಮಾನವ ಪ್ರಜ್ಞೆ, ಈ ಮಾನವ ಪ್ರಜ್ಞೆಯಲ್ಲಿ ಯಾವಾಗ ಅಹಂಕಾರ ಅಂಕುರಿಸುವುದೋ ಆವಾಗಿಂದ ಅದು ಕೇವಲ ಯಂತ್ರವಲ್ಲ. ಅಹಂಕಾರವೆಂದರೆ ಜಂಭ, ಗರ್ವ ಅಲ್ಲ. ಅದು ನಾನೆಂಬ ಅರಿವು ಸೆಲ್ಫ್ ಹುಡ್. ಅಂತಹ ಪರಿಸ್ಥಿತಿಯನ್ನು ನಿಯಂತ್ರಿಸಲು ನಮ್ಮ ಪ್ರತಿಕ್ರಿಯೆ ಅದಕ್ಕೆ ತಕ್ಕಹಾಗಿರಬೇಕು. ಹಾಗಾಗಿ ನಾನು ಪುನಃ ಅಲ್ಲಿಗೆ ಹೋದಾಗ ಗೀತಾಂಜಲಿಯೊಂದಿಗೆ ಯಾವ ಮುಚ್ಚುಮರೆಯಿಲ್ಲದೇ ನೇರವಾಗಿ ಮಾತನಾಡಿದೆ.. ಅವಳು ಎಷ್ಟರಮಟ್ಟಿಗೆ ಅವಳ ಕಂಪನಿಗೆ ಪ್ರಯೋಜನಕರ ಎಂಬ ಅಂಶ ಅವಳ ಅಸ್ತಿತ್ವವನ್ನು ನಿರ್ಧರಿಸುತ್ತದೆ ಎಂಬ ವಿಷಯ ಅವಳಿಗೆ ಮನದಟ್ಟುವಂತೆ ಹೇಳಿದೆ.

ಅನಂತರ ಆ ಕಂಪನಿಯ ತಜ್ಞರೊಂದಿಗೆ ಮಾತನಾಡಿ ಅವಳೊಂದಿಗೆ ಅವಳ ಪ್ರೌಢ ಬುದ್ಧಿಯ ಮಟ್ಟದಲ್ಲೇ ವ್ಯವಹರಿಸುವಂತೆ ತಾಕೀತು ಮಾಡಿದೆ. ಈ ಸಲಹೆಗಳಿಂದ ಸಮಸ್ಯೆ ಪರಿಹಾರವಾಯಿತು.' ಎಂದ ಶರಲೇಖ.

ನಾನು ಮಾಡಿದ ಮೇಥೀ ಪಲಾವ್ ತಿನ್ನಲು ಎಲ್ಲರೂ ಎದ್ದೆವು. ■

---

# ಲಿಮಿರಿಕ್ಸ್

ಬಿ.ಎಸ್. ರವಿಕುಮಾರ್

ಬಸ್ಯಾ

~~~~

**ಹಳ್ಳಿಯಲ್ಲೋದಿದನು ಶಾಲೆ ನಮ್ ಬಸ್ಯಾ**
**ಕರೆಯುತಿದ್ದನು ಏ ವೆಂಕ್ಯಾ ಏ ಕಿಟ್ಯಾ**
**ಬಂದು ಸೇರಿದಾಗ ಬೆಂಗಳೂರು ಐಟೀ ಕಂಪನಿ**
**ಬಸವರಾಜ್ ಆನಂದದಿಂದ ಸುರಿಸಿದನು ಕಂಬನಿ**
**ಇಲ್ಲೂ ಎಲ್ಲರೂ ತನ್ನಂತೆ ವಾಟ್ಯಾ ಎಸ್ಯಾ**

ಸಾಂಭರ್

~~~~~~~~~~

**ಏನಿದು ಸಾಂಭರ್, ಮಸಾಲಾ ಡೋಸಾ**
**ಕನ್ನಡ ಭಾಷೆಗೆ ಮಾಡಿದ ಮೋಸ**
**ದೋಸೆ ಎನ್ನಿರಿ ಸಾಂಬಾರ್ ತಿನ್ನಿರಿ**
**ಮಸಾಲಾ ಯಾಕೆ, ಮಸಾಲೆ ಅನ್ನಿರಿ**
**ನಾವು ಕಲಿಯಲಿಲ್ಲವೇ ಪಲಾವ್ ಟೊಮೆಟೊ**
**ಪೂರಿ, ಪೀಜಾ**

# ಮುಖ ಪುಟದಲ್ಲಿ ಹೋದ ಮಾನ ಲಿಂಕ್ಡಿನ್ ಅಲ್ಲಿ ಬಂತು!

● **ಸಹನಾ ಪ್ರಸಾದ್**

ಸಿಡ್ಸ್ ಮತ್ತು ಸಂಕಪ್ಪನ ಪ್ರೇಮ ಕಥೆ ಶುರುವಾಗಿದ್ದು 6 ತಿಂಗಳ ಹಿಂದೆ. ಸಿಡ್ಸ್ ಅಂದರೆ ಸಿದ್ದಗೌರಿ. ಅಜ್ಜಿ ಹಟ ಹಿಡಿದು ಮನೆ ದೇವರ ಹೆಸರು ಇಟ್ಟಿದ್ದು ದೊಡ್ಡವಳಾದ ಮೇಲೆ, ನಮ್ಮ ಮಾಡರ್ನ್ ಮಿಸ್ಸಿಗೆ ಸ್ವಲ್ಪವೂ ಹಿಡಿಸಲಿಲ್ಲ. ಹೆಸರು ಬದಲಾಯಿಸಲು ಸಾಧ್ಯವೇ ಇಲ್ಲ ಅಂತ ಅಜ್ಜಿಯ ಜತೆ ತಾಯಿಯೂ ಹಟ ಹಿಡಿದ್ದಾಗ ಅವಳು ಸುಮ್ಮನಿರಲೇ ಬೇಕಾಯ್ತು.

ಶಾಲೆ, ಕಾಲೇಜಿನಲ್ಲಿ ತನ್ನ ಹೆಸರು ಕೂಗುವಾಗ ಸಿಕ್ಕಾಪಟ್ಟೆ ಮುಜುಗರ ಪಡುತ್ತಿದ್ದ ಕಾಲ ಮುಖಪುಟಕ್ಕೆ ಬಂದಾಗ ಮುಗೀತು. ಅದರಲ್ಲಿ ತನಗೆ ಬೇಕಾದ ಹೆಸರು ಇಟ್ಟುಕೊಳ್ಳಬಹುದು ಅಂದ ತಕ್ಷಣವೇ ಸಿದ್ದಗೌರಿ ಸಿಡ್ಸ್ ಆದಳು. ಮೊದಮೊದಲು ಇವಳು ಯಾರೆಂದು ತಬ್ಬಿಬ್ಬು ಆದರೂ ಅವಳ ಗೆಳತಿಯರೆಲ್ಲ ಹಳೇ ಹೆಸರು ಮರೆತು ಹೊಸದನ್ನೆ ಕೂಗತೊಡಗಿದರು, ಅಲ್ಲಲ್ಲ, ಬರೆಯತೊಡಗಿದರು!

ಇನ್ನು ನಮ್ಮ ಸಂಕಪ್ಪ. ಸ್ವಂತ ಊರಿನಲ್ಲಿ ಒಂದು ಹೆಣ್ಣನ್ನೂ ಕಣ್ಣೆತ್ತಿ ನೋಡದ ಶುದ್ಧ ಚೊಕ್ಕ ಹುಡುಗ. ಹೊಸ ಊರಿಗೆ ಬಂದಾಗ ಇಲ್ಲಿನ ಹೆಣ್ಣೆಂಗಸರ ಹಾವಭಾವ, ವೇಷಭೂಷಣ ನೋಡಿ ಸುಸ್ತಾದವನಿಗೆ ಸಾಮಾಜಿಕ ಜಾಲತಾಣಗಳಲ್ಲಿ ಕಾಣಬರುವ ಕಂಡ ಹೆಣ್ಣುಮಕ್ಕಳನ್ನು ನೋಡಿ ಖುಶಿ, ಆಶ್ಚರ್ಯ, ಕೀಳರಿಮೆ ಎಲ್ಲವೂ ಒಟ್ಟಿಗೆ ಆಗಿ ಸುಸ್ತು ಹೆಚ್ಚಾಗಿ ಬೇಸ್ತು ಬಿದ್ದ. ಆಗಲೇ ನಮ್ಮ ನಾಯಕಿ ಸಿಡ್ಸ್ ಪರಿಚಯವಾಗಿ, ಅದು ಪ್ರೇಮವಾಗಿ, ಮನಸ್ಸು ಹೂವಾಗಿ ಅರಳಿ ಹಕ್ಕಿಯಂತೆ ಹಾಡತೊಡಗಿತು. ರಾತ್ರಿ ಇಬ್ಬರಿಗೂ ಚ್ಯಾಟ್ಟಿಂಗ್, ಮೆಸ್ಸೇಜಿಂಗ್ ಇತ್ಯಾದಿ ಕೆಲಸಗಳು ಬಂದು ನಿದ್ದೆಗೆಟ್ಟು, ಬುದ್ಧಿಗೆಡುವಂತಾಯಿತು.

"ನಿಮ್ಮ ನಿಜವಾದ ನಾಮಧೇಯ?"ಎಂದು ಮೊದಮೊದಲು ಕೇಳಿದಾಗ ಉತ್ತರಿಸಲು ಸುತರಾಂ ಒಪ್ಪಲಿಲ್ಲ ಅವನ ಗೆಳತಿ. ತಾನು ಎಷ್ಟೊತ್ತಿಗೆ ಎದ್ದೆ, ಯಾವಾಗ ಟೀ ಕುಡಿದೆ, ಯಾವ ಡ್ರೆಸ್ಸ್ ಹಾಕಿದೆ, ಏನು ತಿಂದೆ ಇತ್ಯಾದಿ ಇರಲಿ, ಯಾವಾಗ ವಾಶ್ರೂಮಿಗೆ ಹೋದೆ ಅನ್ನುವುದು ಕೂಡ ಹಂಚಿಕೊಳ್ಳುವ ತನ್ನ ಗರ್ಲ್ ಫ್ರೆಂಡ್ ತನ್ನ ನಿಜವಾದ ಹೆಸರನ್ನು ಬಚ್ಚಿಡುವುದು ಸೋಜಿಗವೆನಿಸಿತು.

ಕೆಲವು ತಿಂಗಳಾಗುವಷ್ಟರಲ್ಲಿ ಸಿಡ್ಸ್ ಪ್ರಿಯತಮೆಯ ಪಟ್ಟದಿಂದ ಮಡದಿಯ ಪಟ್ಟಕ್ಕೆ ರೆಡಿ ಆದಳು. "ನಿಮ್ಮ ಷರಟು ಮಾಸಿದೆ, ಗಡ್ಡ ಸರಿಯಾಗಿ ಕೆರೆದಿಲ್ಲ, ಮೊನ್ನೆ ನನ್ನ ಸ್ನೇಹಿತೆಯ ಪಟಕ್ಕೆ ನಿಮ್ಮದೇನು ಮೆಚ್ಚಿಗೆ? ಅದ್ಯಾಕೆ ನಿಮ್ಮ ಸಹೋದ್ಯೋಗಿಗಳೊಡನೆ ಅಷ್ಟು ದುಬಾರಿ ಹೋಟೆಲಿಗೆ ಹೋಗಿದ್ದು? ಅಲ್ಲಿ ಬಿಲ್ಲ್ ಎಷ್ಟಾಯ್ತು? ಯಾರು ಪೇ ಮಾಡಿದ್ದು?" ಅವಳ ವಾಗ್ಬಾಣಕ್ಕೆ ನಮ್ಮ ಹೀರೋ ತತ್ತರಿಸಿ ಹೋದ. ಎಲ್ಲದಕ್ಕಿಂತ "ನಿಮ್ಮ ಹೆಸರು ಬದಲಾಯಿಸಿಕೊಳ್ಳಿ" ಎಂಬ ಅವಳ ಬೇಡಿಕೆ ಜಾಸ್ತಿಯಾಗಿ ಅಪ್ಪಣೆಯಾಗತೊಡಗಲು ಅವನಿಗೆ ದಿಗಿಲಾಗಲು ಶುರುವಾಯಿತು, ತನ್ನ ಆಫೀಸಿಗೆ ಬರುವ ವಿದೇಶೀಯರೆಲ್ಲ ಮಿಸ್ಟರ್ ಸಂಕಪ್ಪ ಎಂದು ರಾಗವಾಗಿ, ಮೂಗಲ್ಲಿ ಕೂಗುವಾಗ, ಅವ್ವ, ಅಪ್ಪ ಇಟ್ಟ ಹೆಸರಿನ ಮೇಲೆ ವ್ಯಾಮೋಹ ಜಾಸ್ತಿಯಾಯಿತು, ಅಷ್ಟಲ್ಲದೆ, ಇನ್ನು

ಮತದಾರರ ಚೀಟಿ, ಆಧಾರ್, ಪಾಸ್ಪೋರ್ಟ್ ಮಿಕ್ಕೆಲ್ಲ ದಾಖಲೆಗಳಲ್ಲಿಯೂ ಬದಲಾಯಿಸಬೇಕು ಎಂದು ಪರಿಪರಿಯಾಗಿ ತಿಳಿಸಿದರೂ ಒಪ್ಪಲಿಲ್ಲ ಆಕೆ. ಇಬ್ಬರೊಳ್ಳೊಬ್ಬರೂ ಸೋಲದೆ ಅವಳ ಮುಖಪುಟದಲ್ಲಿ "ಸಂಬಂಧದಲ್ಲಿ" ಎಂಬ ನಿಲುವೆ "ಸಿಂಗಲ್"ಎಂದು ಬದಲಾದಾಗ ಸಂಕಪ್ಪ ಸಾಕಷ್ಟು ಕಣ್ಣೀರು ಸುರಿಸಿದ. ತನ್ನ ನಿಲುವೆಯನ್ನೂ ಸಹ "ಒಬ್ಬಂಟಿಗ" ಎಂದು ಬದಲಾಯಿಸಿದಾಗ ಹರಿದ ಕಣ್ಣೀರಿನ ಮಹಾಪೂರದಲ್ಲಿ ಸಂಕಪ್ಪನ "ಗೋಡೆ" ಒದ್ದೆಯಾಗಿ ಅವನ ಮನಸ್ಸಿನಷ್ಟೇ ಹಸಿಯಾಯಿತು. "ಹುಡುಗಿ ಕೈ ಕೊಟ್ಟಳಂತಲ್ಲೊ!"ಎಂಬ ವ್ಯಂಗ್ಯ ತುಂಬಿದ ಅನುಕಂಪದ ಮಾತುಗಳು ಅವನನ್ನು ಬಹಳವಾಗಿ ನೋಯಿಸಿದವು. ಒಂದು ಹೆಸರಿಗಾಗಿ ಪ್ರೀತಿಯನ್ನೇ ತ್ಯಜಿಸಿದಳಲ್ಲ ಎಂದು ಸಿಟ್ಟೂ ಉಕ್ಕಿತು. ದುಃಖಭರಿತ ಕವನಗಳನ್ನು ಓದಿ, ಶೋಕ ಗೀತೆಗಳನ್ನು ಕೇಳಿ, ಒಂದೆರಡು ಪೆಗ್ ಹಾಕಿ ಮನಸ್ಸನ್ನು ಹಗುರವಾಗಲೆತ್ನಿಸಿದ.

ಇತ್ತ ಅವನಷ್ಟು ಮುಗ್ಧ, ಒಳ್ಳೆ ಮನಸ್ಸಿನ ಹುಡುಗನನ್ನು ಕಳೆದುಕೊಂಡು ಬಿಟ್ಟೆನಲ್ಲ ಎಂಬ ಕೊರಗು ನಮ್ಮುಡುಗಿಯಲ್ಲೂ ಶುರುವಾಯಿತು. ಎಲ್ಲಾ ಜಾಲತಾಣಗಳಲ್ಲೂ ತಡಕಾಡಿದಳು. ಸಂಕಪ್ಪನಷ್ಟು ಸುಂದರ, ಸುಸಂಸ್ಕೃತರ್ಯಾರೂ ಸಿಗದೆ ಬಹಳ ಒದ್ದಾಡಿದಳು. ಹೀಗೆಯೇ ಒಮ್ಮೆ ನಿದ್ದೆಗೆಟ್ಟ ರಾತ್ರಿಯಲ್ಲಿ ಲಿಂಕ್ಡಿನ್ ಅಲ್ಲಿ ಏನೋ ತಡಕಾಡುತ್ತಿದ್ದಾಗ ಸಂಕಪ್ಪ ಕಣ್ಣಿಗೆ ಬಿದ್ದ. ಅವನ ಶೈಕ್ಷಣಿಕ, ಉದ್ಯೋಗ ಅರ್ಹತೆ, ಕಂಪನಿಯಲ್ಲಿ ಅವನ ಸ್ಥಾನ ನೋಡಿ ದಂಗು ಬಡಿದು ಹೋದಳು. ಇದೆಲ್ಲ ನನ್ನ ಬಳಿ ಹೇಳೆ ಇಲ್ಲವಲ್ಲ ಎಂಬ ಯೋಚನೆ ಸುಳಿದರೂ, ಹೇಳಲು ತಾನು ಬಿಟ್ಟಿದ್ದರೆ ತಾನೆ ಎಂಬ ಸಂಗತಿಯ ಅರಿವಾಗಿ ಸುಮ್ಮನಾದಳು. ಎಲ್ಲಾ ಕಡೆಯೂ ಜಾಲಾಡಿ ಅವನ ಪಗಾರ ಎಷ್ಟಿರಬಹುದೆಂದು ಅಂದಾಜು ಮಾಡಿದಾಗ ಇಂತಹ ಹುಡುಗನನ್ನು ಜುಜುಬಿ ಹೆಸರಿಗಾಗಿ ಬಿಟ್ಟುಕೊಟ್ಟೆನಲ್ಲ ಎನ್ನುವ ಹಪಾಹಪಿ ಜಾಸ್ತಿಯಾಗಿ ಅವಳು "ಐ ಲವ್ ಯೂ" ಎಂದು ಸಂದೇಶಿಸಿ ಅವನು "ಹಾಯ್, ಚಿನ್ನ, ಐ ಆಲ್ವೇಸ್ ಲವ್ ಯೂ" ಪ್ರತಿಕ್ರಿಯಿಸಿ ನಮ್ಮ ನಾಯಕ, ನಾಯಕಿಯರು ತುಂಬು ಖುಷಿಯಿಂದ ತಮ್ಮ ಪ್ರಣಯವನ್ನು ಮುಖಪುಟದಲ್ಲೆಲ್ಲ ಸಾರಿ, ಅಲ್ಲಿ ಹೋದ ಸಂಕಪ್ಪನ ಮಾನ ಲಿಂಕ್ಡಿನ್ ಅಲ್ಲಿ ತಿರುಗಿ ಬಂದದ್ದು ಎಲ್ಲರಿಗೂ ಸಂತೋಷದ ವಿಷಯ! ಹಾ, ಸಿಡ್ಸ್ ಕೂಡ ತನ್ನ ಅಸಲು ಹೆಸರನ್ನು ಮದುವೆಯ ರಾತ್ರಿ ಕಿವಿಯಲ್ಲಿ ಹೇಳುವುದಾಗಿ ನಂಬಿಸಿದಾಳೆ!

ಶುಭಂ!

■

---

# ಲಿಮಿರಿಕ್ಸ್

ಬಿ.ಎಸ್. ರವಿಕುಮಾರ್

ಕಾಣದ ಕಡಲಿಗೆ

~~~~~~~~~~~~~~

**"ಕಾಣದ ಕಡಲಿಗೆ ಹಂಬಲಿಸಿದೆ ಮನ" ...**<br>
**ಕವಿ ಕರಾವಳಿಯವನೆಂದುಕೊಂಡರು ಜನ**<br>
**ಹಲ್ಲಿದ್ದಾಗ ಇರದಿದ್ದ ಕಡಲೆ**<br>
**ಸಿಕ್ಕಾಗ ಹಲ್ಲೇ ಇಲ್ಲದೆಲೆ**<br>
**ಬರೆದ ಸಾಲೆಂದು ನನ್ನ ದಟ್ಟ ಅನುಮಾನ**
~~~~~~~~~~~~~~

# ವೈಜಯಂತೀ ಸ್ವಯಂವರ

**● ಟಿ.ಎಸ್.ಶ್ರವಣ ಕುಮಾರಿ**

ನಮ್ಮ ಪದ್ನಾಭನಿಗೆ ಮದುವೆಯಾಗಿದ್ದೇ ತಡವಾಗಿ. ಹಾಗೆ ತಡವಾಗಲು ಕಾರಣ ಖಂಡಿತವಾಗಿಯೂ ಅವನಂತೂ ಅಲ್ಲ. ಅವನ ಮೇಲಿದ್ದ ಒಬ್ಬ ಅಕ್ಕ, ನಾಲ್ವರು ಅಣ್ಣಂದಿರು ಮತ್ತು ಅವನ ಹಿಂದೆಯೇ ಹುಟ್ಟಿದ್ದ ತಂಗಿಯ ಮದುವೆಯಾಗುವ ತನಕ ಅವನ ಸರತಿ ಸಹಜವಾಗಿಯೇ ಬರಲಿಲ್ಲ ಅಷ್ಟೇ. ಇವನ ಸರತಿ ಬರುವಾಗ ಮನೆಯವರ ಉತ್ಸಾಹ ತಾನಾಗೇ ಕುಂದಿತ್ತು. ಹಾಗೂ ಹೀಗೂ ಅವನಿಗೂ ಹೆಣ್ಣು ಹುಡುಕುವುದೆಂದಾದಾಗ ಅವನ ವಯಸ್ಸು ಮೂವತ್ಮೂರು ದಾಟಿತ್ತು. ಅಂದ್ಮೇಲೆ ಬಂದ ಹೆಣ್ಣುಗಳ ವಯಸ್ಸು ಮೂವತ್ತರ ಆಸುಪಾಸು. ಸಂತೆ ವ್ಯಾಪಾರಕ್ಕೆ ಬರುವಾಗ್ಲೇ ಸಂಜೆಯಾಗಿದ್ದರಿಂದ ಅವನು ಇನ್ನು ತಡಮಾಡ್ದೆ ಇದ್ದ ಸರಕುಗಳಲ್ಲೇ ತನಗೆ ಸುಂದರವಾಗಿದ್ದಾಳೆ ಎನ್ನಿಸಿದ, ತನ್ನಂತೆಯೇ, ತನ್ನ ಮೇಲಿನ ಮೂವರು ಅಕ್ಕಂದಿರ ಮದುವೆಯಾಗಕ್ಕೆ ಕಾದು ಮೂವತ್ತು ದಾಟಿದ್ದ ಮಾಲಕ್ಷ್ಮಿಯನ್ನು ಆರಿಸಿಕೊಂಡು ದಾಂಪತ್ಯಕ್ಕೆ ಕಾಲಿಟ್ಟ. ನಂತರ ತಡಮಾಡದೆ ವರ್ಷ ತುಂಬುವಷ್ಟರಲ್ಲಿ ಮಗಳನ್ನು ಎತ್ತಿಕೊಂಡು, ಪ್ರೀತಿಯಿಂದ, ಒಂದು ಕಾಲದಲ್ಲಿ ತನ್ನ ಕನಸಿನಲ್ಲಿ ಕಾಡುತ್ತಿದ್ದ ಸಿನಿತಾರೆ ವೈಜಯಂತಿ ಮಾಲಳ ನೆನಪಿನಲ್ಲಿ ಅವಳದೇ ಹೆಸರಿಟ್ಟು ಧನ್ಯನಾದ.

ಪದ್ನಾಭ ತಾರುಣ್ಯದಲ್ಲಿ ಸುಂದರನೆಂದೇ ಕರೆಸಿಕೊಂಡಿದ್ದ. ಅವನ ಹೆಂಡತಿ ಮಾಲಕ್ಷ್ಮಿಯಾದರೂ ಅಷ್ಟೇ ಅವರ ಮನೆಯಲ್ಲೆಲ್ಲಾ ಲಕ್ಷಣವಂತೆ ಎನ್ನಿಸಿಕೊಂಡಿದ್ದವಳೇ. ಈಗ್ಗೆ ಒಂದು ಎಂಟ್ಹತ್ತು ವರ್ಷಗಳ ಮುಂಚಿತವಾಗಿಯೇ ಶುರುವಾಗಬಹುದಾಗಿದ್ದ ತಮ್ಮ ದಾಂಪತ್ಯ, ತುಂಬಿದ ಮನೆಯಲ್ಲಿ ಕೊನೆಯವರಾಗಿ ಹುಟ್ಟಿದ ಕಾರಣದಿಂದ ತಡವಾಯಿತು; ತಮ್ಮ ಮಕ್ಕಳಿಗೆ ಇಂತಹ ಪರಿಸ್ಥಿತಿ ಬರಬಾರದು ಎಂದು ಇಬ್ಬರೂ ಒಮ್ಮತದಿಂದ? ತಮಗೆ ಒಂದೇ ಮಗು ಸಾಕು' ಎನ್ನುವ ನಿರ್ಧಾರಕ್ಕೆ ಬಂದಿದ್ದರು. ಹುಟ್ಟುವಾಗಲೇ ಹುಣ್ಣಿಮೆಯ ಚಂದ್ರನಂತಿದ್ದವಳು ತನ್ನ ಹೆಸರಿಗೆ ಮೋಸವಿಲ್ಲದೆ ಸುಂದರವಾಗಿ ಬೆಳೆದಿದ್ದಳು. ಒಳ್ಳೆಯ ಕೆಲಸದಲ್ಲಿದ್ದ ಪದ್ನಾಭ ಬೆಂಗಳೂರಂತ ಬೆಂಗಳೂರಿನಲ್ಲಿ ಊರ ಮಧ್ಯದಲ್ಲಿ ಒಂದು ಫ್ಲಾಟು, ಹೊರವಲಯದಲ್ಲಿ ಒಂದು ಮನೆ ಖರೀದಿಸಿ, ಊರಾಚೆ ಒಂದೆರಡು ಸೈಟು, ಬ್ಯಾಂಕಿನ ಖಾತೆಯಲ್ಲೂ ತಕ್ಕ ಮಟ್ಟಿಗೆ ಇಟ್ಟುಕೊಂಡು, 'ಗುರು ಪುಷ್ಯ', 'ಅಕ್ಷಯ ತೃತೀಯ', 'ಧನ್ ತೆರಾಸಿ'ಗಳಂದು ತಪ್ಪದೆ ಹೆಂಡತಿ, ಮಗಳಿಗೆ ಒಡವೆಗಳನ್ನು ಖರೀದಿಸಿ ಲಾಕರಿನಲ್ಲಿ ಸುಭದ್ರವಾಗಿಟ್ಟಿದ್ದ. ಇಷ್ಟೆಲ್ಲಾ ಇದ್ದು ಒಬ್ಬಳೇ ಮಗಳೆಂದ ಮೇಲೆ ಮಗಳ ಮದುವೆ ಮಾಡುವುದು ಅಂತಹ ದೊಡ್ಡ ವಿಷಯವೇನಲ್ಲ; ಯಾರಾದರೂ ಒಳ್ಳೆಯ ಪುಣ್ಯಗಳಿಸಿದ್ದವನಷ್ಟೇ ತಮ್ಮ ಅಳಿಯನಾಗಲು ಯೋಗ್ಯ ಎಂದು ಗಂಡಹೆಂಡಿರಿಬ್ಬರೂ ಅಂದುಕೊಂಡಿದ್ದರು. ಹಾಗೆಯೇ ತಮ್ಮ ಒತ್ತಾಯ ಇಲ್ಲವೇ ಇಲ್ಲ; ಮಗಳು ಖುಷಿಯಾಗಿ ಒಪ್ಪಿಕೊಂಡವನೊಂದಿಗೇ ಅವಳ ಸ್ವಯಂವರ ಎಂದೂ ತೀರ್ಮಾನಿಸಿದ್ದರು.

ತನ್ನ ಇಂಜಿನೀರಿಂಗ್ ಪದವಿಯನ್ನು ಪಡೆಯುವ ಹೊತ್ತಿಗೆ, ವೈಜಯಂತಿ 'ಕಾಲೇಜಿನ ಸುಂದರಿಯರ ಪಟ್ಟಿಯಲ್ಲಿ ಸೇರಿಹೋಗಿ ಎಷ್ಟೋ ಹುಡುಗರ ನಿದ್ರೆಯನ್ನು ಕೆಡಿಸಿದ್ದಳು' ಎನ್ನುವುದರಲ್ಲಿ ಯಾವುದೇ ಅತಿಶಯೋಕ್ತಿಯೇನಿಲ್ಲ. 'ತಾನು ಸುಂದರಿ, ತನಗಾಗಿ ಹುಡುಗರು ಹಾತೊರೀತಾರೆ' ಎನ್ನುವುದು ಎಲ್ಲ ಸುಂದರಿಯರಂತೆ ಅವಳಿಗೂ ಸ್ವಲ್ಪ ಹೆಚ್ಚಾಗಿಯೇ ತಿಳಿದಿತ್ತು. ಹಾಗೆಯೇ ತನ್ನನ್ನು ಕಂಡು ಬಾಯ್ಬಿಡುವವರ ಬಗ್ಗೆ ಒಂದು ರೀತಿಯ ನಿರ್ಲಕ್ಷ್ಯವೂ ತಾನಾಗೇ ಬಂದಿತ್ತು. ಅವಳು ಕೆಲಸಕ್ಕೆ ಸೇರಬೇಕೆನ್ನುವುದು ಪದ್ನಾಭ–ಮಾಲಕ್ಷ್ಮಿಯರಿಗಾಗಲೀ,

ಇಲ್ಲವೇ ಸ್ವತಃ ವೈಜಯಂತಿಗಾಗಲೀ ಬೇಕಾದ ವಿಷಯವಾಗಿರಲಿಲ್ಲ. ಹೀಗಾಗಿ ಅವಳ ಓದು ಮುಗಿಯುತ್ತಿದ್ದಂತೆಯೇ ಅವಳ ಸ್ವಯಂವರದ ಏರ್ಪಾಟನ್ನು ಮಾಡತೊಡಗಿದರು. ವರಮಾಲೆಯನ್ನು ಕೈಗೆ ತೆಗೆದುಕೊಳ್ಳಲು ವೈಜಯಂತಿಯೂ ನಿರಾಕರಿಸಲಿಲ್ಲ. ಪದ್ನಾಭನೂ, ಮಾಲಕ್ಷ್ಮಿಯೂ ತಮ್ಮ ತಮ್ಮ ಬಂಧು, ಬಳಗ, ಹಿತೈಷಿಗಳ ಬಳಿ ಅವಳ ಮದುವೆಯ ಅಂಕವನ್ನು ಆರಂಭಿಸುತ್ತಿರುವ ಸೂಚನೆಯನ್ನು ಕೊಟ್ಟು. ಯಾವುದಾದರೂ 'ಸರಿ'ಯಾದ ತಮ್ಮ 'ಘನತೆ'ಗೆ ತಕ್ಕಂತಹ, ತಮ್ಮ ಮಗಳಿಗೆ 'ಈಡುಜೋಡು' ಆಗುವಂತಹ ಹುಡುಗರು ದೃಷ್ಟಿಯಲ್ಲಿದ್ದರೆ ಹೇಳಬೇಕೆಂದು ಒಂದು ಮನವಿಯನ್ನು ತೇಲಿಬಿಟ್ಟರು ಅಂತೆಯೇ ಯಾವುದೇ ಸಂಬಂಧವಾದರೂ 'ತಮ್ಮ ಮಗಳ ಒಪ್ಪಿಗೆಯೇ ಬಲು ಮುಖ್ಯ' ಎನ್ನುವ ಅಂಶವನ್ನು ಒತ್ತಿ ಒತ್ತಿ ಹೇಳಿದರು. ಹೇಗೂ ಈಗ ಹೆಣ್ಣುಮಕ್ಕಳದೇ ಜಮಾನಾ ತಾನೇ ಯಾರೂ, ಯಾವುದೇ ಪ್ರಶ್ನೆಯನ್ನು ಕೇಳುವಂತಿಲ್ಲ.

ಯಾವ ದೃಷ್ಟಿಯಿಂದಲೇ ನೋಡಿದರೂ ಸೈಯೆನ್ನುವಂತಿದ್ದ ಸಂಬಂಧವನ್ನು ಹುಡುಕಿಕೊಂಡು ಸಾಲು ಸಾಲು ಪ್ರಸ್ತಾಪಗಳೂ ಬರತೊಡಗಿದವು. ಮೊದಲನೆಯ ಸ್ಕ್ರೀನಿಂಗ್, ಎಲಿಮಿನೇಶನ್ ರೌಂಡ್ ಅಮ್ಮ ಅಪ್ಪನದು. ಹುಡುಗನ ವಿದ್ಯೆ, ರೂಪ, ಉದ್ಯೋಗ, ಅಂತಸ್ತು, ಕುಟುಂಬ, ಸ್ಥಾನ ಮಾನ ಎಲ್ಲವೂ ಆದಮೇಲೆ ಜಾತಕ, ಗೋತ್ರ, ಪ್ರವರ. ಒಂದು ಶುಭದಿನ ಜಯನಗರದ ನಾಲ್ಕನೇ ಬ್ಲಾಕಿನ ಗಣಪತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ತಮ್ಮಲ್ಲಿಗೆ ಬಂದ ಮೊದಲ ತಂಡದ ಹತ್ತು ಅಭ್ಯರ್ಥಿಗಳ ವಿವರಗಳನ್ನು ಪರಿಶೀಲಿಸುತ್ತಾ, ಅಂತಿಮ ಸುತ್ತಿನಲ್ಲಿ ಇಬ್ಬರನ್ನು ಆಯ್ಕೆ ಮಾಡಿಕೊಂಡು 'ವೈಜಯಂತೀ ಸ್ವಯಂವರಕ್ಕೆ' ನಾಂದಿ ಹಾಡಿದರು. ಇಬ್ಬರು ಹುಡುಗರೂ ತಮ್ಮೆಲ್ಲಾ ಆಯ್ಕೆಯ ಮಾನದಂಡಗಳನ್ನು ಗೆದ್ದು ಬಂದವರೆಂದು ಬೀಗುತ್ತಾ ತಾವು ಮಾಡಿದ ತೌಲನಿಕ ಅಧ್ಯಯನದ ವಿವರಗಳನ್ನು ಮಗಳೆದುರು ಇಟ್ಟು "ಯಾವಾಗ ಹುಡುಗರನ್ನು ಕರೆಸೋಣ ವೈಜು" ಎಂದು ಅವಳ ತಲೆಯನ್ನು ನೇವರಿಸಿದರು.

'ಈ ವಾರ ತನ್ನ ಫ್ರೆಂಡ್ ಮದುವೆಯ ನಿಶ್ಚಿತಾರ್ಥದ ಕಾರ್ಯಕ್ರಮವಿದೆ, ಮೂರುದಿನ ನಾವೆಲ್ಲಾ ಅವಳ ಮನೆಯಲ್ಲೇ ಇರುತ್ತೇವೆ. ವಾರಾಂತ್ಯದಲ್ಲಿ ಪ್ರೆಂಡ್ಸೆಲ್ಲರೂ ಸೇರಿಕೊಂಡು ನಂದಿಬೆಟ್ಟಕ್ಕೆ ಪಿಕ್ನಿಕ್ ಹೋಗುವ ಪ್ಲಾನ್ ಇದೆ. ಮುಂದಿನ ವಾರ ಬುಧವಾರ, ಗುರುವಾರ ಶಾಪಿಂಗ್ಗೆ ಎಂ.ಜಿ.ರೋಡಿಗೆ ಹೋಗಬೇಕಿದೆ. ಅಲ್ಲಿಯವರೆಗೆ ನನಗೆ ಬಿಡುವಿಲ್ಲ; ಆ ವಾರಾಂತ್ಯದಲ್ಲಿ ಇದುವರೆಗೂ ಯಾವುದೇ ಕಾರ್ಯಕ್ರಮ ಫಿಕ್ಸ್ ಆಗಿಲ್ಲ; ಆಗಾದರೆ ಆಗಬಹುದೇನೋ' ಎಂದು ಒಂದು ರೀತಿಯಲ್ಲಿ ವರಪರೀಕ್ಷೆಗೆ ಒಪ್ಪಿಗೆ ಸೂಚಿಸಿದಂತೆ ಹೇಳಿದಳು. ಅದನ್ನೇ ಮಹಾಪ್ರಸಾದವೆನ್ನುವಂತೆ ಸ್ವೀಕರಿಸಿದ ಪದ್ನಾಭ ದಂಪತಿಗಳಿಗೆ, ಹುಡುಗನ ಮನೆಯವರಿಗೆ ಸತ್ಯವನ್ನು ಹೇಳಲು ಸ್ವಲ್ಪ ಹಿಂಜರಿಕೆಯಾಗಿ ಏನೇನೋ ಪೂರ್ವ ನಿಯೋಜಿತ ಕಾರ್ಯಕ್ರಮಗಳಿಂದಾಗಿ ಮುಂದಿನ ವಾರಾಂತ್ಯದವರೆಗೂ ಬಿಡುವಿಲ್ಲವೆಂದು ಸಮಝಾಯಿಷಿ ನೀಡಿ ಬೆಳಗಿನ ತಿಂಡಿಗೊಬ್ಬರನ್ನು, ಸಂಜೆಯ ಉಪಾಹಾರಕ್ಕೊಬ್ಬರನ್ನು ಆಹ್ವಾನಿಸಿದರು. ಪೂರ್ವ ತಯಾರಿಯಾಗಿ, ಚೆನ್ನಾಗಿಯೇ ಇದ್ದ ಮನೆಯ ಲಿವಿಂಗ್ರೂಮನ್ನು ಇಬ್ಬರೂ ಸೇರಿ ಮತ್ತಷ್ಟು ಚೆಂದಗೊಳಿಸಿ 'ಫೇಸ್ ಲಿಫ್ಟ್' ಮಾಡಿದರು. ಎರಡೂ ಹೊತ್ತಿನ ತಿಂಡಿಯನ್ನು ಸ್ಪೆಷಲ್ಲಾಗಿ ಮಯ್ಯರ ಹೋಟೇಲಿನಿಂದ ತರಿಸುವ ಏರ್ಪಾಡು ಮಾಡಿಕೊಂಡರು. ತಾವಿಬ್ಬರೂ ಯಾವ ಯಾವ ದಿರಿಸು, ಅಲಂಕಾರದಲ್ಲಿದ್ದರೆ ಹೆಚ್ಚು ಪ್ರಭಾವಶಾಲಿಯಾಗಿರುತ್ತದೆ ಎನ್ನುವುದರ ತಾಲೀಮು ನಡೆಸಿದರು. ಕಡೆಗೆ ಪೂಸಿಕೊಳ್ಳುವ ಸೆಂಟು ಕೂಡಾ ಯಾವುದೆಂದು ನಿರ್ಧಾರವಾದ ನಂತರ ವೈಜಯಂತಿಯ ತಯಾರಿಯ ಬಗ್ಗೆ ವಿಚಾರಿಸಿದರು. "ಅರೇ ನಾನೇನು ಸ್ಪೆಷಲ್ ಆಗಿ

ರೆಡಿಯಾಗೋದು. ಮನೆಗೆ ಯಾರಾದರೂ ಬಂದರೆ ಹೇಗಿರ್ಬೇಕೋ ಹಾಗಿರ್ತೀನಿ ಅಷ್ಟೇ. ಬೇಕಾದರೆ ನೋಡ್ಲಿ, ಸಾಕಾದ್ರೆ ಬಿಡ್ಲಿ" ಎಂದು ಕಡ್ಡಿ ಮುರಿದಹಾಗೆ ಹೇಳಿ ಮೇಲೆದ್ದಳು. ಗಂಡ ಹೆಂಡಿರಿಬ್ಬರೂ ಮುಖಮುಖ ನೋಡಿಕೊಂಡರೂ 'ಹೇಗಿದ್ರೂ ಚೆನ್ನಾಗೇ ಕಾಣ್ತಾಳೆ. ನಾವೇನಾದ್ರೂ ಹೇಳಿ ಅವಳ ಮೂಡ್ ಕೆಡಿಸೋದು ಬೇಡ' ಎನ್ನುವ ಒಮ್ಮತದ ತೀರ್ಮಾನಕ್ಕೆ ಬಂದು ಸುಮ್ಮನಾದರು.

ಅಂತೂ ಆ ದಿನ ಬಂತು. ವೈಜಯಂತಿಯೂ ನಗುನಗುತ್ತಾ ಎಲ್ಲದರಲ್ಲೂ ಪಾಲ್ಗೊಂಡಳು. ಇಬ್ಬರೂ ಮಾತನಾಡುವ ಇಚ್ಛೆ ವ್ಯಕ್ತಪಡಿಸಿದಾಗ ಅವರನ್ನು ಮಹಡಿಯ ಮೇಲಿನ ಬಾಲ್ಕನಿಗೆ ಕರೆದೊಯ್ದು ಒಂದಷ್ಟು ಹೊತ್ತು ಮಾತನಾಡಿಸಿ ಕಳುಹಿಸಿದಳು. ಹೊರಡುವಾಗ ಹುಡುಗನ ಅಪ್ಪ ಅಮ್ಮನ ಕಾಲಿಗೆ ಅವಳು ಬೀಳಲಿ ಎನ್ನುವ ಆಸೆ ಪದ್ಮಾಭನಿಗೆ ಇದ್ದರೂ ಹೇಳುವ ಧೈರ್ಯವಿಲ್ಲದೆ ಸುಮ್ಮನಾದ. ಅವಳು ಬಾಯ್ ಆಂಟಿ, ಅಂಕಲ್ ಎನ್ನುತ್ತಾ ಬೀಳ್ಕೊಟ್ಟು ಒಳಗೆ ಬಂದವಳು ಹಾಯಾಗಿ ಟೀವಿಯಲ್ಲಿ ಬಿಗ್ ಬಾಸ್ ನೋಡುತ್ತಾ ಕುಳಿತುಕೊಂಡಳು. ಅವಳೇ ಏನಾದರೂ ಹೇಳುತ್ತಾಳೇನೋ ಎಂದು ಕಾದ ಮಾಲಕ್ಷ್ಮಿ ಎರಡು ದಿನವಾದ ಮೇಲೆ "ನಿನ್ನ ಅಭಿಪ್ರಾಯವೇನು ವೈಜು. ಇಬ್ಬರು ಹುಡುಗನ ಮನೆಯವರೂ ಅವತ್ತೇ 'ತಮಗೆ ಒಪ್ಪಿಗೆ' ಅನ್ನುವ ಹಾಗೆ ಹೇಳಿ ಹೋಗಿದ್ದಾರೆ. ನಾವು ಅವರಿಗೆ ನಮ್ಮ ಒಪ್ಪಿಗೆ ತಿಳಿಸಬೇಕಲ್ವಾ" ಎಂದಳು. "ಒಪ್ಪಿಗೆ?! ಇಬ್ಬರೂ ನಂಗೆ ಇಷ್ಟವಾಗ್ಲಿಲ್ಲ. ಹೇಳ್ಬಿಡು" ಎಂದಳು ನಿರ್ವಿಕಾರವಾಗಿ. "ಯಾಕೆ. ಏನಾಗಿದೆ ಅವರಿಬ್ಬರಿಗೆ?" ಒಟ್ಟಿಗೇ ಕೇಳಿದರು. "ಅಯ್ಯೋ ಬೆಳಗ್ಗೆ ಬಂದವನ ಮನೇಲಿ ಅವರಪ್ಪ, ಅಮ್ಮ ಅಲ್ದೆ ಅಣ್ಣ–ಅತ್ಗೆ, ಅಜ್ಜಿ–ತಾತ ಅದರ ಮೇಲೆ ಒಬ್ಬ ಸೋದರತ್ತೆ ಕೂಡಾ ಇದಾರಂತೆ. ಒಂದು ಮುದಿತಲೇನ ತಡಕೊಳ್ಳೋದೆ ಕಷ್ಟ; ಅಂತದ್ರಲ್ಲಿ ಐದ್ಯೆದು ಜನ ನೋ ವೇ ದಿನಾ ವಾರ್ಗಿತ್ತಿ ಜೊತೆ ವಾರ್ ಮಾಡೋರ್ಯಾರು. ನಂಗೆ ಬೇಡ". "ದೊಡ್ಡ ಸಂಸಾರ, ಹೋಗ್ಲಿ ಬಿಡು ನಿಂಗಿಷ್ಟವಿಲ್ಲದ್ಮೇಲೆ. ಆದ್ರೆ ಸಾಯಂಕಾಲ ಬಂದ ಹುಡುಗ ಚೆನ್ನಾಗಿದ್ನಲ್ವಾ?" ಆಸೆಯ ಎಳೆಯನ್ನು ಹುಡುಕಿಕೊಂಡರು. "ಅವ್ನಾ ಮಾತಾಡ್ತಾ ಕೂತಿದ್ದಾಗ ಎಲ್ರೆದ್ರೂ ಹೇಗೆ ಕಾಲ್ಮೇಲೆ ಕಾಲು ಹಾಕ್ಕೊಂಡು ಕಾಲಲ್ಲಾಡಿಸ್ತಾ ಕೂತಿದ್ದ. ತಥ್! ಮ್ಯಾನರ್ಸ್ ಇಲ್ದೋನು. ಅವ್ನ ಕಾಲ್ನ ಉಗ್ರು ತೆಗ್ದು ಎಷ್ಟು ವರ್ಷವಾಗಿದ್ಯೋ. ಉಗುರು ತೆಗೆಯೋಷ್ಟೂ ಪುರಸೊತ್ತಿಲ್ದೋನು ಇನ್ನು ಹೆಂಡ್ತೀಗೆ ಏನು ಸಮಯ ಕೊಡ್ತಾನೆ, ಅವ್ನು ಬೇಡ" ನಿರ್ದಾಕ್ಷಿಣ್ಯವಾಗಿ ಹೇಳಿ ಎದ್ದು ಹೋದಳು. ಪದ್ಮಾಭ, ಮಾಲಕ್ಷ್ಮಿ ಒಬ್ಬರೊಬ್ಬರ ಮುಖ ನೋಡಿಕೊಂಡು ?ನಾವು ನಮ್ಮ ಸ್ಕ್ರೀನಿಂಗ್ನಲ್ಲಿ ಇನ್ನೂ ಕೆಲವು ನಿಯಮಗಳನ್ನು ಅಳವಡಿಸಿಕೊಳ್ಳಬೇಕು'. ಎನ್ನುವ ನಿರ್ಧಾರಕ್ಕೆ ಬಂದರು.

ಹೀಗೆ ಮೊದಲ ಸುತ್ತಿನ ಸ್ವಯಂವರ ಬಿದ್ದು ಹೋದ ಮೇಲೆ ಅವಳ ಪುರಸೊತ್ತನ್ನು ಅನುಸರಿಸಿ ಮುಂದಿನ ಸ್ವಯಂವರದ ದಿನ ನಿರ್ಧಾರವಾಯಿತು. ಈ ಸುತ್ತಿನಲ್ಲಿ ಶನಿವಾರ ಎರಡು, ಭಾನುವಾರ ಎರಡು ಸಂದರ್ಶನಗಳ ಏರ್ಪಾಡಾಯಿತು. ಲಿವಿಂಗ್ರೂಮಿನ ಅಲಂಕರಣ ಚೆನ್ನಾಗಿಯೇ ಇದೆ. ತಿಂಡಿ ಮಾತ್ರ ಮಯ್ಯರ ಹೋಟೆಲಿನದ್ದೇ ಇರಲಿ ಎಂದುಕೊಂಡರು. ಮೊದಲ ಸುತ್ತಿನಲ್ಲಿ 'ಬೆಸ್ಟ್'ನ್ನು ಆರಿಸಿ 'ನೆಕ್ಸ್ಟ್'ಎಂದಿರಿಸಿದ್ದ ದಿರಿಸುಗಳನ್ನು ಧರಿಸಿ ತಯಾರಾಗಿ ನಿಂತರು. ಎರಡು ದಿನ ಕಳೆದ ನಂತರ ವೈಜಯಂತಿಯ ಷರಾ ಹೀಗಿತ್ತು 1. ಮೊದಲನೇ ಹುಡುಗನಿಗೆ ಸೋಡಾ ಗ್ಲಾಸು. ಪವರ್ ತುಂಬಾ ಇರೋ ಹಾಗೆ ಕಾಣ್ತಿದೆ. 2. ಎರಡನೆಯವನು ಗೈನಕಾಲಜಿ ಡಾಕ್ಟರಂತೆ. ಹೊತ್ತುಗೊತ್ತಿಲ್ಲದೆ ಮಕ್ಕಳು ಹುಟ್ತಾವೆ. ಅವನು ಮನೆಗೆ ಬರೋ ಟೈಮೇ ನೆಚ್ಚಿಗೆ ಇರಲ್ಲ. 3. ಮೂರನೆಯವನಿಗೆ ಅಪ್ಪ ಅಮ್ಮನ ಜೊತೆಗೆ ಮದುವೆಯಾಗ್ದಿರೋ ಅಕ್ಕಾನೂ ಇದಾಳಂತೆ. ಒಬ್ನೇ ಮಗ,

ನಾನು ಜೀವಮಾನ ಪೂರ್ತಿ ಅವರೆಲ್ರ ಜವಾಬ್ದಾರಿ ಹೊರಕ್ಕೆ ತಯಾರಿಲ್ಲ. 4. ಕೆಲ್ಸಕ್ಕೆ ಸೇರಿದ ಐದ್ವರ್ಷದಿಂದ ಅದೇ ಕಂಪ್ನೀಲೇ ಕೊಳೀತಿದಾನೆ. ಅವ್ನಿಗೆ ಅಡ್ವೆಂಚರಸ್ ನೇಚರ್ ಇಲ್ಲ. ಪದ್ಮಾಭ ಮಾಲಕ್ಷ್ಮಿ ತಲೆಯ ಮೇಲೆ ಕೈ ಹೊತ್ತರು. ಇನ್ನೊಂದಿಷ್ಟು ನಿಯಮಗಳು ಅವರ ಸ್ಕ್ರೀನಿಂಗ್ ರೌಂಡ್ನಲ್ಲಿ ಸೇರಿಕೊಂಡವು.

ಹೀಗೇ ಮುಂದುವರೆದ ಮೂರನೆ, ನಾಲ್ಕನೆ ಸುತ್ತಿನಲ್ಲಿ ಮಯ್ಯರ ಹೋಟೇಲ್ ತಿಂಡಿ ರದ್ದಾಗಿ, ಮನೆಯಲ್ಲೇ ಉಪ್ಪಿಟ್ಟು, ಕೇಸರಿಭಾತ್ ತಯಾರಾಯಿತು. ಈ ಸಂದರ್ಶನದ ಷರಾಗಳು ಹೀಗಿದ್ದವು. 1. ಬಂದವನು ನನ್ನನ್ನು ಗಮನಿಸದೆ ಮನೆಯ ಮೇಲೆ ಕೆಳಗೆ ನೋಡ್ತಾ ಅಂತಸ್ತನ್ನ ಅಂದಾಜು ಮಾಡ್ತಾ ಕೂತಿದ್ದ. ನನಗಿಂತ ಈ ಆಸ್ತಿ ಮೇಲೆ ಕಣ್ಣು. 2. ಮುಖಕ್ಕೆ ಮುಖ ಕೊಟ್ಟು ಮಾತಾಡಲ್ಲ. ಹೆಂಗಸ್ರಿಗಿಂತ ಹೆಚ್ಚಾಗಿ ನೆಲ ಕೆರೀತಾ ಮಾತಾಡ್ತಾನೆ. 3. ಮಾತಾಡೋ ಅಷ್ಟು ಹೊತ್ತೂ ತನ್ನ ಓದು, ಕೆಲ್ಸದ ಬಗ್ಗೇನೇ ಹೇಳಿ ಇಂಪ್ರೆಸ್ ಮಾಡಕ್ಕೆ ಟ್ರೈ ಮಾಡ್ತಿದ್ದ. ಒಂದು ಕಂಪ್ನೀಲೂ ನೆಟ್ಗೆ ಎರಡ್ವರ್ಷ ಕೆಲ್ಸ ಮಾಡಿಲ್ಲ, ಕಪಿ ಬುದ್ಧಿ. 4. ನನ್ನಷ್ಟೇ ಉದ್ದವಿರ್ಬೋರ್ದೇನೋ. ಜೀವಮಾನವಿಡೀ ಹೈಹೀಲ್ಡ್ ಶೂ ಹಾಕೋದನ್ನೇ ಮರೆತುಬಿಡ್ಬೇಕು. ಮಿನಿಮಮ್ 5.10 ಅಡಿಯಾದ್ರೂ ಇರ್ಬೇಕು. 5. ಪೀಚು ಬಡ್ಡಿ. ಜೊತೆಗೆ ಹೋಗ್ತಿದ್ರೆ ಯಾರಾದ್ರೂ ತಮ್ಮಾನ ಅಂತ ಕೇಳ್ತಾರೆ ಅಷ್ಟೆ. 6. ಅವನ ಧ್ವನಿಯೋ  ನನ್ಕೈಲಾಗಲ್ಲ ಜೀವ್ಮಾನವಿಡೀ ಕೀರ್ಲು ಕಂಠದ ಸಂಗೀತ ಕೇಳಕ್ಕೆ

ಹೀಗೇ ಐದಾರು ವರ್ಷಗಳು ಕಳೆದವು. ಬರುತ್ತಿದ್ದ ವರಗಳ ಸಂಖ್ಯೆ ಕಡಿಮೆಯಾಯಿತು. ವೈಜಯಂತಿಯ ಫೋಟೋ ಜಾತಕ ಮ್ಯಾರೇಜ್ ಬ್ಯೂರೋಗಳಲ್ಲಿ ದಾಖಲಾಯಿತು. ಮುಂದಿನ ಸುತ್ತುಗಳಲ್ಲಿ ಮನೆಯ ಅಲಂಕರಣದ ಕಡೆಗೆ ಗಮನ ಹೊರಟೇ ಹೋಯಿತು. ಕೈಗೆ ಸಿಕ್ಕ ದಿರುಸನ್ನು ಧರಿಸಿ ಎದುರುಗೊಂಡಿದ್ದಾಯಿತು. ಕಡೆಕಡೆಯ ಸುತ್ತುಗಳಲ್ಲಿ ಉಪಚಾರ ಬಿಸ್ಕತ್ತು ಕಾಫಿಗಿಳಿಯಿತು. ಹುಡುಗನಿಗೆ 'ಬೊಚ್ಚು ಬಾಯಿ', ಮಾಡ್ರನ್ ಆಗಿಲ್ದೇ 'ರೆಟ್ರೋ ಹೀರೋ ತರಾ ಬಂದಿದ್ದ', 'ಜೀವ್ಮಾನದಲ್ಲೇ ಫಾರಿನ್ ಮುಖ ಕಂಡಿಲ್ವಂತೆ', 'ಅಮೇರಿಕಾದಲ್ಲೇ ಸೆಟ್ಲ್ ಆಗೋ ಆಸೇನಂತೆ', 'ನೀನ್ಯಾಕೆ ಕೆಲ್ಸಕ್ಕೆ ಸೇರ್ಲಿಲ್ಲ ಅಂತಾನೆ ನನ್ ಸಂಬಳದಲ್ಲಿ ಬದುಕ್ತಾನಾ?', 'ನಕ್ರೆ ಮೂವತ್ತೆರಡು ಹಲ್ಲೂ ಕಾಣತ್ತೆ', 'ಆಗ್ಲೇ ನರೆಕೂದ್ಲು ಬರಕ್ಕೆ ಶುರುವಾಗಿದೆ', ವಯಸ್ಸು ಜಾಸ್ತಿ ಆಯ್ತು; ಅವ್ನ ತಮ್ಮ ಇದಾನ ವಿಚಾರ್ಸಿ'   ಮುಗಿಯಲೇ ಇಲ್ಲ ಪಟ್ಟಿ.

ಕಡೆಗೆ ನಮ್ಮ ಮನೇಲಿ ಬೇಡ, ಹುಡುಗನ ಮನೆಗೇ ಹೋಗಿ ನೋಡ್ಕೋಣ ಆಗ್ಲಾದ್ರೂ ಅದೃಷ್ಟ ಖುಲಾಯ್ಸತ್ತಾ ಅಂದುಕೊಂಡು ಹೇಗೂ ಒಪ್ಪಿಸಿ ಕರೆದುಕೊಂಡು ಹೋದರೆ 'ಈ ಮನೆಗೆ ನಾನು ಸೊಸೆಯಾಗಿ ಬರ್ಬೇಕಾ' 'ಕಾರಿಂದ್ಲೇ ಇಳಿಯಲ್ಲ' 'ಮನೆಗೆ ಹೊಡ್ಸಿರೋ ಪೈಂಟಿನ ಬಣ್ಣಗಳು ನೋಡು  ಕಣ್ಣಿಗೆ ರಾಚತ್ತೆ, ಒಂಚೂರೂ ಟೇಸ್ಟ್ ಇಲ್ಲ'; 'ಅವ್ರಜ್ಜಿ ಇಷ್ಟು ದಿನವಾದ್ರೂ ಯಾಕೆ ಮದ್ವೆಯಾಗ್ಲಿಲ್ಲ' ಅಂದ್ರು, ಅವ್ರೇನು ನನ್ನ ಸಾಕ್ತಿದಾರಾ?'; 'ಮನೇ ತುಂಬಾ ದೇವ್ರ ಫೋಟೋಗಳು. ವಿಪ್ರೀತ ಮಡಿ ಮೈಲ್ಗೆ ಅನ್ಸತ್ತೆ ನಂಗೆ ಬೇಡ್ವೇ ಬೇಡ'  . ಹೀಗೆ ಬೆಳೆಯುತ್ತಾ ಹೋಯಿತು ಪಟ್ಟಿ.

ಈಗ ತಮ್ಮ ಮನೆಗೆ ಕರೆಸುವುದೋ, ಅವರ ಮನೆಗೆ ಹೋಗಿ ನೋಡುವುದೋ ನಿಂತು ಹೋಗಿದೆ. ಇಬ್ರೂ? 'ಕಾಫಿ ಡೇ'ಲಿ ಕಾಫಿ ಕುಡೀತಾನೋ? 'ಸ್ಟೋನ್ಸ್ಡ್ ಮಂಕಿ'ನಲ್ಲಿ ಐಸ್ಕ್ರೀಂ ಮೆಲ್ತಾನೋ? 'ಮಂತ್ರಿ ಮಾಲ್' ಸುತ್ತಾಡ್ತಾನೋ ಭೇಟಿ ಮಾಡಿ ಬಂದು ಅಭಿಪ್ರಾಯ ಹೇಳು ಎಂದು ಮಗಳಿಗೆ ಹೇಳಿದಾರೆ. ನಾನೂ ಕುತೂಹಲದಿಂದ ಕಾಯ್ತಿದೀನಿ. ಇದಾದ್ರೂ ವರ್ಕೌಟ್ ಆಗಿ ಅವ್ಳೇನಾದ್ರೂ ಯಾರ್ಗಾದ್ರೂ ವರಮಾಲೆ ಹಾಕಿದ ಸುದ್ದಿ ತಿಳಿದ್ರೆ ಖಂಡಿತಾ ಮುಂದೆ ನಿಮಗೆ ಹೇಳ್ತೀನಿ. ■

TEMPLE OF KNOWLEDGE

# BEECHI VIDYA KENDRA

Email: admin@beechi.in
Web: www.beechi.in
Mob: 9740968677, 9035302302, 9035007003

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

## ಬೀಚಿ ಪ್ರಕಾಶನ Beechi Prakashana

| ಪುಸ್ತಕದ ಹೆಸರು | ಲೇಖಕರು | ಬೆಲೆ | ಪುಸ್ತಕದ ಹೆಸರು | ಲೇಖಕರು | ಬೆಲೆ |
|---|---|---|---|---|---|
| ರೇಡಿಯೋ ನಾಟಕಗಳು | ಬೀಚಿ | 70 | ಲೇವಡಿ ಟ್ರೈಪಿಸ್ಟ್ | ಬೀಚಿ | 100 |
| ಮಾತ್ರೆಗಳು | ಬೀಚಿ | 125 | ಬೆಳ್ಳಿ ಪತ್ರಗಳು | ಬೀಚಿ | 100 |
| ತಿಂಮನ ತಲೆ | ಬೀಚಿ | 70 | ಮಹಾಯುದ್ಧ | ಬೀಚಿ | 100 |
| ಹುಚ್ಚು ಹುರುಳು | ಬೀಚಿ | 50 | ಅಮ್ಮಾವ್ರ ಕಾಲ್ಗುಣ | ಬೀಚಿ | 100 |
| ಸತೀ ಸೂಳೆ | ಬೀಚಿ | 110 | ಕತ್ತಲಲ್ಲಿ ಬಂದವಳು | ಬೀಚಿ | 90 |
| ಖಾದಿ ಸೀರೆ | ಬೀಚಿ | 170 | ಮಾತನಾಡುವ ದೇವರುಗಳು | ಬೀಚಿ | 75 |
| ಸತ್ತವನು ಎದ್ದು ಬಂದಾಗ | ಬೀಚಿ | 60 | ಮನೆತನದ ಗೌರವ | ಬೀಚಿ | 100 |
| ಕಾಣದ ಸುಂದರಿ | ಬೀಚಿ | 150 | ಗರತಿಯ ಗುಟ್ಟು | ಬೀಚಿ | 60 |
| ಕಲ್ಲು ಹೇಳಿತು | ಬೀಚಿ | 150 | ನಂಬರ್ ಐವತ್ತೈದು | ಬೀಚಿ | 60 |
| ತಿಂಮ ರಸಾಯನ | ಬೀಚಿ | 120 | ಉತ್ತರ ಭೂಪ | ಬೀಚಿ | 250 |
| ದೇವನ ಹೆಂಡ | ಬೀಚಿ | 170 | ನರಪ್ರಾಣಿ | ಬೀಚಿ | 75 |
| ಮೇಡಮ್ಮನ ಗಂಡ | ಬೀಚಿ | 110 | ನನ್ನ ಭಯಾಗ್ರಫಿ | ಬೀಚಿ | 270 |
| ಟೆಂಟ್ ಸಿನಿಮಾ | ಬೀಚಿ | 100 | ಹುಲಿಯ ಬೆನ್ನು ಮೇಲಿಂದ | ಬೀಚಿ | 125 |
| ಬೆಳ್ಳಿ ತಿಂಮ ನೂರೆಂಟು ಹೇಳಿದ | ಬೀಚಿ | 75 | ಅಂದನಾ ತಿಂಮ | ಬೀಚಿ | 125 |
| ಮುರಿದ ಬೊಂಬೆ | ಬೀಚಿ | 100 | ಹೆಂಡತಿ ನಕ್ಕಾಗ | ಬೀಚಿ | 125 |
| ಸೀತೂ ಮದುವೆ | ಬೀಚಿ | 80 | ಕಮಲಮ್ಮನ ಕುಂಕುಮ ಬಲ | ಬೀಚಿ | 125 |
| ಬೀchi ಬುಲ್ಲೆಟಿನ್ | | | ಕೇಶವ ರಾವ್ | | 200 |
| ಬೀchi ತೋಚಿದ್ದು ಗೀಚಿದ್ದು | | | ಸ್ವಾಮಿ ರಾವ್ ಕುಲ್ಕರ್ಣಿ | | 120 |
| ಬೊಂಬಾಟ್ ಬೀಚಿ | | | ಬೇಲೂರು ರಾಮಮೂರ್ತಿ | | 60 |
| ವಾಗ್ಬಾಣಗಳು | | | ಗಂಗಾವತಿ ಪ್ರಾಣೇಶ್ | | 50 |
| ನಗಿಸುವವನ ನೋವುಗಳು | | | ಗಂಗಾವತಿ ಪ್ರಾಣೇಶ್ | | 50 |
| ಪೋಲೀಸ್ ಎನಕೌಂಟರ್ | | | Dr..ಡಿ.ವಿ.ಗುರುಪ್ರಸಾದ್ IPS | | 200 |
| ಪೋಲೀಸ್ ಜೀವನದಲ್ಲಿ ಹಾಸ್ಯ | | | Dr.ಡಿ.ವಿ.ಗುರುಪ್ರಸಾದ್ IPS | | 200 |
| ವಿಶ್ವಪರ್ಯಟನೆ | | | Dr.ಡಿ.ವಿ.ಗುರುಪ್ರಸಾದ್ IPS | | 300 |
| ರಾಜೀವ್ ಗಾಂಧಿ ಭೀಕರ ಹತ್ಯಾ | | | Dr.ಡಿ.ವಿ.ಗುರುಪ್ರಸಾದ್ IPS | | 250 |

ಇಂಗ್ಲಿಷ್ ಮೂಲ: ಪದ್ಮಶ್ರೀ ಡಿ ಆರ್ ಕಾರ್ತಿಕೇಯನ್

**ಪ್ರತಿಗಳಿಗೆ ಸಂಪರ್ಕಿಸಿ.: 9845264304**

# ಥ್ಯಾಂಕ್ಯು ಕೊರೋನಾ

**● ಸೂರಿ ಹಾರ್ದಳ್ಳಿ**

ಈ ಕತೆಗೆ 'ಭಗ್ನ ಪ್ರೇಮಿಯೊಬ್ಬನ ಸ್ವಗತ' ಎಂಬ ಹೆಸರನ್ನಿಡಬೇಕೆಂದು ಮೊದಲು ತೀರ್ಮಾನಿಸಿದ್ದರೂ ಅದೇಕೋ ಬಲು ಹಳೆಯದು ಎನಿಸಿ, ಈ ಕತೆಗೂ, ಮಹಾಮಾರಿ ಕೊರೊನಾಕ್ಕೂ ಸಂಬಂಧ ಇರುವುದರಿಂದ ಮೇಲಿನಂತೆ ಶೀರ್ಷಿಕೆ ಕೊಟ್ಟಿದ್ದರೂ ನೀವು ಬೇಕಿದ್ದರೆ ನಿಮಗೆ ಇಷ್ಟವಾದ ಹೆಸರನ್ನು ಇಟ್ಟುಕೊಳ್ಳಬಹುದು. ಶೇಕ್ಸ್‌ಪಿಯರ್ ಹೇಳಿದಂತೆ ಗುಲಾಬಿಯನ್ನು ಯಾವ ಹೆಸರಿನಿಂದ ಕರೆದರೂ ಅದು ಗುಲಾಬಿಯೇ ಅಲ್ಲವೇ?

ನಮ್ಮ ಕತಾ ನಾಯಕ, ಅವನ ಹೆಸರು ರಾಮ ಇರಬಹುದು, ರಹೀಮನೂ ಇರಬಹುದು, ರಾಬರ್ಟ್‌ನೂ ಇರಬಹುದು, ಅಥವಾ ಹೆಸರಿಲ್ಲದೆಯೂ ಇರಬಹುದು. ಇಲ್ಲಿಯ ಪ್ರಮುಖ ಪಾತ್ರಧಾರಿ ಒಬ್ಬ ಯುವಕ ಎಂದರೆ ಸಾಕು. ಅದು ಯುವಕನಿಲ್ಲದಿದ್ದರೂ ಆಗುತ್ತದೆ, ಆದರೆ ಪ್ರೀತಿಸುವ ಹುಚ್ಚು ಭ್ರಮೆ ಇರಬೇಕು, ಸಿನೆಮಾಗಳಿಂದ ಸ್ಫೂರ್ತಿ ಪಡೆದು, ಅಲ್ಲಿ ನಡೆದಂತೆ ನಡೆದುಕೊಳ್ಳಬೇಕು ಅಷ್ಟೇ. ಹುಚ್ಚು ಕೋತಿಯ ಮನಸು ಇದು. ಪ್ರೇಮ, ಪ್ರೀತಿ, ಒಲವು, ಅಕ್ಕರೆ, ಇವುಗಳ ನಡುವೆ ಅರ್ಥ ವ್ಯತ್ಯಾಸ ಇದೆ ಎಂಬುದೂ ತಿಳಿಯದ ಪ್ರಾಯ ಅದು. ತಾನು ಬದುಕಿರುವುದೇ ಅವಳಿಗಾಗಿ, ಅವಳಿಲ್ಲದ ಜೀವನ ಮರುಭೂಮಿಯಂತೆ, ಅವಳಿಗಾಗಿ ತಾನು ಸಾಯಲೂ ಸಿದ್ಧ, ಎಂಬ ಹುಚ್ಚು ತೀರ್ಮಾನಗಳನ್ನು ಏಕಾಏಕಿ ಸ್ವಯಂ ಆಗಿ ತೆಗೆದುಕೊಳ್ಳುವ ಇಂತಹ ಅನೇಕರಲ್ಲಿ ನಮ್ಮ ಕತಾ ನಾಯಕನೂ ಒಬ್ಬನಾಗಿದ್ದಾನೆ. ಅದು ಯಾಕೆ, ಹೇಗೆ ಎಂಬ ಪ್ರಶ್ನೆಗೆ ಇಲ್ಲಿ ಉತ್ತರ ಕೊಡುವುದು ವ್ಯರ್ಥ ಎಂದು ಹೇಳುತ್ತಲೇ, ಅವನೂ ಪ್ರೀತಿಯಲ್ಲಿ ಬಿದ್ದ, ಎಂದು ಮೂರೇ ಪದಗಳಲ್ಲಿ ಹೇಳುವುದು ಅತ್ಯಂತ ಬುದ್ಧಿವಂತರಾದ ನಿಮ್ಮ ಮನಸ್ಸಿಗೆ ಅರ್ಥವಾಗುತ್ತದೆ ಎಂಬುದನ್ನು ನಾನು ಬಲ್ಲೆ. ಹಾಗಾಗಿ ಅವನ ಡೈರಿಯ ಪುಟಗಳಿಂದ ಕೆಳಗಿನ ಕತೆಯನ್ನು ನಾನು ನಿಮ್ಮೆದುರು ಪ್ರಸ್ತುತಪಡಿಸುತ್ತೇನೆ. ಕತೆಯ ಅಂತ್ಯದಲ್ಲಿ ಒಂದು ಟ್ವಿಸ್ಟ್ ಇದೆ. ಅದೇನೆಂಬುದನ್ನು ಈಗಲೇ ಹೇಳುವುದಿಲ್ಲ. ಅಂತೆಯೇ ನಡುವಿನದನ್ನೆಲ್ಲಾ ಓದದೇ ಕೊನೆಗೆ ಹೋಗಬೇಡಿ ಎಂಬುದೂ ನನ್ನ ವಿನಂತಿ. ಸಿನೆಮಾ ನಟರ ಬಾಯಲ್ಲಿ ಬರುವ ಶೈಲಿಯಲ್ಲಿ ಇದು ಇರುವುದರಿಂದ ನಮ್ಮ ನಾಯಕನ ಮೇಲೆ ಸಿನೆಮಾಗಳ ಪ್ರಭಾವ ಜಾಸ್ತಿ ಎಂಬುದು ನಿಮಗೆ ಇಲ್ಲಿ ವೇದ್ಯವಾಗುತ್ತದೆ.

'ಹಗಲು ರಾತ್ರಿ ಎನ್ನದೇ, ನಿಂತಲ್ಲಿ, ಕುಳಿತಲ್ಲಿ, ಮಲಗಿದಲ್ಲಿ, ಗಂಟೆಗಟ್ಟಲೆ ಮಾತನಾಡಿದ್ದು, ವಿಡಿಯೋ ಕಾಲ್ ಮಾಡಿ, ಪರದೆಯ ಎದುರು ಹಲ್ಲು ಕಿಸಿದು ನಿಂತಿದ್ದು, ಇಷ್ಟಾದರೂ ಇನ್ನೂ ಮಾತನಾಡಲಿದೆ ಎನಿಸಿದ್ದು, ಮತ್ತೆ ಹತ್ತು ನಿಮಿಷ ನಿನ್ನಿಂದ ಕರೆ ಬಾರದಿದ್ದರೆ ಏನಾಯಿತೋ ಎಂದು ಆತಂಕ ಪಟ್ಟಿದ್ದು, ನೀನು ಎಲ್ಲಿ ನನ್ನ ಕೈ ತಪ್ಪಿ ಹೋಗುತ್ತೀಯೋ ಎಂದು ಹೆದರಿದ್ದು, ಎಲ್ಲಿ ನಮ್ಮ ಈ ಪ್ರಣಯಗಳು ಮನೆಯವರಿಗೆ ತಿಳಿದು ಅನಾಹುತವಾಗುತ್ತದೋ ಎಂದು ಬೆದರಿದ್ದು, ನಿನಗೆ ಈ ವಯಸ್ಸಿನಲ್ಲಿ ಪ್ರೀತಿ ಪ್ರೇಮ ಬೇಕಾ? ಓದಿ ಒಳ್ಳೆಯ ಮಾರ್ಕು ತೆಗೆದುಕೊ ಎಂದು ಮನೆಯವರು ಎಚ್ಚರಿಸುತ್ತಾರೆ

ಎಂಬ ಅರಿವಿದ್ದು, ಆ ಹೊತ್ತಿನಲ್ಲಿ ಇನ್ನಾವುದೋ ಒಂದು ಗಿಡುಗ ನನ್ನ ಗಿಳಿಯನ್ನು ಹಾರಿಸಿಕೊಂಡು ಹೋದರೇನು ಗತಿ ಎಂದು ತಲೆ ಕೆಡಿಸಿಕೊಂಡಿದ್ದು, ಕೇವಲ ನಿನಗಾಗಿ.

'ನಿನ್ನನ್ನು ಖುಷಿ ಪಡಿಸಲು, ವರ್ಷಕ್ಕೆ ಎರಡೋ ಮೂರೋ ಬಾರಿ ಬರುವ ನಿನ್ನ ಹುಟ್ಟು ಹಬ್ಬಗಳಿಗೆ, ಅದು ಹೇಗೆ ಎಂಬ ದೂಸರಾ ಪ್ರಶ್ನೆಯನ್ನೂ ಕೇಳದೇ ಹಲವಾರು ಸಾವಿರ ರೂಪಾಯಿಗಳ ಮೊಬೈಲ್ ಫೋನ್, ವಾಚುಗಳು, ಕೇಕುಗಳು, ಸ್ಟಾರ್ ಹೋಟೆಲುಗಳಲ್ಲಿ ಪಾರ್ಟಿಗಳು, ನೀನು ಬಯಸಿದ ಬಟ್ಟೆಗಳು, ಇವನ್ನೆಲ್ಲಾ ಕ್ಲಾಸಿಗೆ ಬಂಕ್ ಹೊಡೆದು ಕೊಡಿಸಿದ್ದು ನಿನಗಾಗಿ. ಅದಕ್ಕಾಗಿ ನನ್ನ ಗೆಳೆಯರೆಲ್ಲರಿಂದ ಸಾಲ ಪಡೆದು, ಅದನ್ನು ತೀರಿಸಲು ಅಪ್ಪ ಕೊಡುವ ಪಾಕೆಟ್ ಮನಿ ಯಾವುದಕ್ಕೂ ಸಾಲದಾಗಿ, ನಂತರ ಕತ್ತಿನಲ್ಲಿದ್ದ ಚಿನ್ನದ ಸರವನ್ನೇ ಮಾರಿದ್ದು, ಅದೆಲ್ಲಿ ಎಂದು ಅಮ್ಮ ಕೇಳಿದಾಗ ಕಳೆದುಹೋಯಿತು ಎಂದು ಸುಳ್ಳು ಹೇಳಿದ್ದು, ಇದು ನಿನಗಾಗಿ, ನಿನ್ನ ಮೇಲಿನ ಹುಚ್ಚು ಪ್ರೀತಿಗಾಗಿ, ನಿನ್ನ ಸೌಂದರ್ಯಕ್ಕೆ ಮರುಳಾಗಿ.

'ಹೊತ್ತು ಗೊತ್ತಿಲ್ಲದೇ ಮನೆ ಬಿಟ್ಟು, ಕೇಳಿದ ಮನೆಯವರಿಗೆ ಸ್ಪೆಷಲ್ ಕ್ಲಾಸು ಎಂದು ಸುಳ್ಳು ಹೇಳಿ, ನಿನ್ನ ಮನೆಯ ಎದುರು ಸುತ್ತುತ್ತಿದ್ದುದು, ಕಾಂಪೌಂಡ್ ಹಾರಿ, ಕೈಕಾಲು ಗಾಯ ಮಾಡಿಕೊಂಡು ನಿನ್ನ ಕೋಣೆಗೆ ನುಗ್ಗಿದ್ದು, ನಿನ್ನ ಮೇಲೆ ಯಾರದ್ದೂ ಕಾಕ ದೃಷ್ಟಿ ಬೀಳದಿರಲಿ, ಎಂದು ಎಲ್ಲಾ ದೇವರನ್ನೂ ಕೇಳಿಕೊಂಡಿದ್ದು, ನಿನ್ನನ್ನು ಹೊಂದಬೇಕೆನ್ನುವ ಒಂದೇ ಆಸೆಗಾಗಿ. ಈ ಜಗತ್ತಿನ ಎಲ್ಲಾ ಹೆಣ್ಣುಗಳಿಗಿಂತಲೂ ನೀನೇ ಸೌಂದರ್ಯವತಿ, ಎಂದು ನಂಬಿದ್ದರಿಂದ.

'ಸರಿಯಾಗಿ ಒಂದೇ ಒಂದು ವಾಕ್ಯವನ್ನೂ ಬರೆಯಲಾಗದ ನಾನು ನಿನ್ನನ್ನು ಕಂಡ ಕೂಡಲೇ ಕವಿಯಾಗಿಬಿಟ್ಟಿದ್ದು, ನಿನ್ನ ಮೇಲೆ ರಾಶಿ ರಾಶಿ ಕವನ ಬರೆದಿದ್ದು, ಪಾಠ ಪುಸ್ತಕಗಳಲ್ಲಿ, ನೋಟ್ ಪುಸ್ತಕಗಳಲ್ಲಿ, ಮನೆಯ ಕ್ಯಾಲೆಂಡರ್ ಹಿಂಭಾಗದಲ್ಲಿ, ಗೋಡೆಗಳಲ್ಲಿ ಅವೇ ರಾರಾಜಿಸಿದ್ದು ಪವಿತ್ರ ಪ್ರೇಮದ ಸಂಕೇತ ಎಂದು ನಾನು ಭಾವಿಸಿದ್ದೆ, ನಿನ್ನ ಫೋಟೊಗಳನ್ನು ಪುಸ್ತಕಗಳಲ್ಲಿ, ಫೋನ್‌ಗಳಲ್ಲಿ ಹಾಕಿಕೊಂಡು ಸದಾ ಕಾಣುತ್ತಿದ್ದುದು, ನಗರಕ್ಕೆ ಕೊರೋನಾ ಬರುವ ತನಕ.

'ಮೊದಲಾದರೆ ಭಗ್ನ ಪ್ರೇಮಿಯು ಗಡ್ಡ ಬಿಡುತ್ತಿದ್ದ. ಆದರೆ ಈಗ ಹಾಗೆ ಎಲ್ಲರೂ ಬಿಡುತ್ತಿದ್ದಾರೆ. ನಮ್ಮೂರಿನ ಎಲ್ಲಾ ಕೇಶಕರ್ತನಾಲಯಗಳೂ ಮುಚ್ಚಿವೆ. ಹಾಗಾಗಿ ಕೂದಲು ಬೆಳೆದು, ರಬ್ಬರ್ ಬ್ಯಾಂಡ್ ಹಾಕಿದರೂ, ಜಡೆಯನ್ನೇ ಕಟ್ಟಿದರೂ ಅದನ್ನಾರೂ ವಿಶೇಷ ಎಂದು ಪರಿಗಣಿಸುವುದಿಲ್ಲ. ಮೊದಲು ನನ್ನಂಥವರು ಬಾರ್‌ಗೆ ಹೋಗಿ, ಕಂಠಮಟ್ಟ ಗುಂಡೇರಿಸಿ ತಮ್ಮ ನೋವನ್ನು ಮರೆಯುತ್ತಿದ್ದರು. ಆದರೆ ಈಗ ಬಾರುಗಳೂ ತೆಗೆದಿಲ್ಲ. ನಂದಿ ಬೆಟ್ಟದ ಟಿಪ್ಪೂ ಡ್ರಾಪ್‌ಗೆ ಹೋಗಿ ಹಾರಿಕೊಳ್ಳೋಣವೆಂದರೆ ಅಲ್ಲಿಯ ತನಕ ಹೋಗುವುದಕ್ಕೂ ಪೊಲೀಸರು ಬಿಡುವುದಿಲ್ಲ. ನಿನ್ನ ಸೌಂದರ್ಯಕ್ಕೆ ಮರುಳಾದ ನನ್ನಂಥ ಮೂರ್ಖನಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳುವ ಇನ್ನಾವುದಾದರೂ ದಾರಿ ಇದೆಯೇ? ಹೊಳೆಯುತ್ತಿಲ್ಲ.

'ಈ ಓಪನ್ ಪತ್ರ ಬರೆಯುತ್ತಿರುವುದು ನಿನಗಾಗಿ ಅಲ್ಲ, ನನ್ನಂತಹ ಅನೇಕ ಬಿಸಿ ರಕ್ತದ ತರುಣರಿಗಾಗಿ. ಯಾವುದೋ ವದನ ನೋಡಿ, ಯಾವುದೋ ಧ್ವನಿ ಕೇಳಿ,

ಯಾರಾದರೂ ನಡಿಗೆಗೆ ಮೆಚ್ಚಿ, ತಕ್ಷಣ ಅವಳಲ್ಲಿ ಅನುರಕ್ತರಾಗಿಬಿಡಬೇಡಿ, ನಂತರ ಪರಿತಪಿಸಬೇಡಿ, ನನ್ನಂತೆ ಮೂರ್ಖರಾಗಬೇಡಿ. ಅದೇನೆಂದು ಕೇಳುವಿರಾ?

'ಈಗ ದೇಶದಲ್ಲಿ ಲಾಕ್‌ಡೌನ್ ಇರುವುದರಿಂದ ಬ್ಯೂಟಿ ಪಾರ್ಲರ್‌ಗಳು ತೆಗೆದಿರುವುದಿಲ್ಲ. ಹೀಗೆ ಬ್ಯೂಟಿ ಪಾರ್ಲರ್‌ಗೆ ಹೋಗಿ ಶೃಂಗರಿಸಿಕೊಳ್ಳದ ನನ್ನ ಪ್ರಿಯತಮೆಯ ಮುಖವನ್ನು ಕಂಡೆ. ಈ ದರಿದ್ರ ಮುಖಕ್ಕಾಗಿ ನಾನು ಈತನಕ ಇಷ್ಟೊಂದು ಖರ್ಚು ಮಾಡಿಕೊಂಡಿದ್ದು, ಪ್ರೀತಿ–ಪ್ರೇಮ ಎಂದೆಲ್ಲಾ ಹಳಹಳಿಸಿದ್ದು ನನ್ನ ಪೆದ್ದುತನದ ಪರಮಾವಧಿ ಎಂದು ಅರಿವಾಗಿದೆ. ಈ ಪತ್ರದ ಮೂಲಕ ತಮಗೆಲ್ಲರಿಗೂ ನಾನು ವಿನಂತಿಸಿಕೊಳ್ಳುವುದೇನೆಂದರೆ ಕಣ್ಣುಗಳು ನಿಮಗೆ ಮೋಸಮಾಡಬಹುದು. ಅದ್ದರಿಂದ ಕಣ್ಣಾರೆ ಕಂಡರೂ ಪರಾಂಬರಿಸಿ ನೋಡು ಎಂದಂತೆ ನಿಮ್ಮ ಪ್ರಿಯತಮೆ ರೂಪವನ್ನು ಬ್ಯೂಟಿ ಪಾರ್ಲರ್‌ಗೆ ಹೋಗದಿರುವಾಗ ನೋಡಿ. ಅದರಲ್ಲಿಯೂ ಲಾಕ್‌ಡೌನ್ ಇರುವ ಈ ಸಮಯವನ್ನು ಸದುಪಯೋಗಪಡಿಸಿಕೊಳ್ಳಿ. ನನ್ನಂತೆ 'ಥ್ಯಾಂಕ್ಯು ಕರೋನಾ', ಎನ್ನಿ.'

■

---

# ಲಿಮಿರಿಕ್ಸ್

ಬಿ.ಎಸ್. ರವಿಕುಮಾರ್

ಸ್ಟಾರ್ ಮುಖಿ

~~~~~~~~~~~

**ಕಮಲಮುಖಿ ಚಂದ್ರಮುಖಿ ಇತ್ಯಾದಿ ಪೂರ್ತಿ**
**ಟೈಪ್ ಮಾಡೋದ್ಯಾಕೆ ಅಂತ ಪ್ರೋಗ್ರಾಮರ್ ಕೀರ್ತಿ**
**ಟೈಪ್ ಮಾಡಿದನು ರೆಗ್ಯುಲರ್ ಎಕ್ಸ್ಪ್ರೆಷನ್ ಒಂದು**
**ಏನಿಲ್ಲ, ಸರಳ, ಡಾಟ್ ಸ್ಟಾರ್ ಮುಖಿ ಎಂದು**
**ಜ್ವಾಲಾಮುಖಿ ಅಗ್ನಿಮುಖಿಯರ ನೋಡಿ ಕಳಕೊಂಡನು ಸ್ಫೂರ್ತಿ**

ವಿಕ್ಕಿ

~~~~

**ವಿಕ್ರಮನು ವಿಕ್ಕಿ, ದೀಕ್ಷಿತನು ಡಿಕ್ಕಿ,**
**ಲಕ್ಷ್ಮಣನು ಲಕ್ಕಿ, ಅಕ್ಷಯನು ಅಕ್ಕಿ**
**ನಿಖಿಲನಾದನು ನಿಕ್ಕಿ**
**ಟೆಕ್ನಾಲಜಿಸ್ಟನು ಟೆಕ್ಕಿ**
**ಎಂಥ ಸಿಕಂದರನೂ ಜನರ ನಾಲಗೆಯಲ್ಲಿ ಸಿಕ್ಕಿ**

# ನನ್ನ ಹೃದಯ ಇರುವುದು ನನ್ನ ಹೆಂಡತಿಯ ಬಳಿ!

● ಪಾಲಹಳ್ಳಿ ವಿಶ್ವನಾಥ್

ನನ್ನಂಥವರು ಅವರಂಥವರಿಂದ ಯಾವಾಗಲೂ ದೂರವಿರಬೇಕು. ದೂರವೂ ಇರುತ್ತಿದ್ದೆವು. ಒಂದು ಬೆಳಿಗ್ಗೆ ಅವರು ನನ್ನನ್ನು ವಿಶಾಲವಾದ ನಗೆಯಿಂದ ಸ್ವಾಗತಿಸಿದಾಗ ನನಗೆ ತುಂಬಾ ಆಶ್ಚರ್ಯವಾಯಿತು

" ನಮಸ್ಕಾರ ಗೆಳೆಯ ! ಹೇಗಿದ್ದೀಯಾ ?"

ಅವರು ಯಾರನ್ನು ಉದ್ದೇಶಿಸಿ ಮಾತನಾಡುತ್ತಿದ್ದಾರೆಂದು ನನಗೆ ಗೊತ್ತಾಗಲಿಲ್ಲ. ನಾನು ಸುತ್ತಲೂ ನೋಡಿದೆ. ಆದರೆ ಬೇರೆ ಯಾರೂ ಇರಲಿಲ್ಲ. ಹೌದು, ಅವರು ನನ್ನನ್ನೇ ಉದ್ದೇಶಿಸಿ ಮಾತನಾಡುತ್ತಿದ್ದರು! ಸ್ವಲ್ಪ ಜಾಗರೂಕತೆಯಿಂದಲೆ ಉತ್ತರ ಕೊಟ್ಟೆ.

"ಚೆನ್ನಾಗಿದೀನಿ! ನೀವು ಹೇಗಿದ್ದೀರಾ ಸಾಹೇಬರೇ?"

ನಾನು ಕೊನೆಯ ಕ್ಷಣದಲ್ಲಿ ಸಾಹೇಬರೇ ಎಂದು ಸೇರಿಸಿದೆ. ಬಹಳ ದೊಡ್ಡವರಲ್ಲವೇ!.

"ನಾನು ಚೆನ್ನಾಗಿದ್ದೇನೆ, ಆದರೆ ನೀನು ನನ್ನನ್ನು ಸಾಹೇಬರೇ ಎಂದೆಲ್ಲ ಏಕೆ ಕರೆಯತ್ತೀಯಾ ? ಅದೆಲ್ಲ ಬೇಕಿಲ್ಲ . ಕಳೆದ ಕೆಲವು ವಾರಗಳಿಂದ ನಾನು ನಿನ್ನನ್ನು ನೋಡುತ್ತಿದ್ದೇನೆ. ಸ್ನೇಹ ಬೆಳೆಸೋಣ ಅಂತ ಕಾಯ್ತಾ ಇದ್ದೀನಿ "

ಧ್ವನಿಯೇನೋ ಸ್ನೇಹಮಯವಾಗಿದೆ ಆದರೆ ಅವರು ನಿಜವಾಗಿಯೂ ಹೇಗೋ?

"ಸಾಹೇಬರೇ, ನಾನು ನಿಮ್ಮನ್ನು ಮೊದಲು ನೋಡಿಲ್ಲ." (ನೋಡಿದ್ದರೂ ಗೊತ್ತಾಗಿತ್ತೇ?)

"ಹೌದು, ನನ್ನ ಗೆಳೆಯ! ನೀನು ತುಂಬಾ ಗಮನಿಸುತ್ತೀಯ ಅಂತ ಕಾಣಿಸುತ್ತೆ. ! ನಾವು ಕೇವಲ ಎರಡು ವಾರಗಳ ಹಿಂದೆ ಇಲ್ಲಿಗೆ ಬಂದಿದ್ದೇವೆ . ನಾನು ನಿನ್ನೊಂದಿಗೆ ಸ್ನೇಹ ಬೆಳೆಸಬೇಕೂಂತ ಆಸೆ"

" ತುಂಬಾ ಒಳ್ಳೆಯದು ಸಾಹೇಬರೇ"

"ಗೆಳೆಯ! ನೀನು ಮತ್ತೆ ನನ್ನನ್ನು ಸಾಹೇಬ ಮಾಡ್ತಿದೀರಲ್ಲ"

"ಕ್ಷಮಿಸಿ! ಅದು ಅಭ್ಯಾಸ ! ನಿಮ್ಮಂತವರನ್ನು ನಾನು ಹಾಗೇ ಕರೆದರೆ ತಪ್ಪಾಗುತ್ತದೆ."

" ಸರಿ, ಗೆಳೆಯ ! ನಿನ್ನಿಷ್ಟ!"

" ಏನಾದರೂ ಬೇಕಿತ್ತೇ ಸಾಹೇಬರೆ?"

"ನೋಡಯ್ಯ, ನಿಜವಾದ ಸ್ನೇಹಿತರು ಸ್ನೇಹಿತರಿಂದ ಏನನ್ನೂ ನಿರೀಕ್ಷಿಸುವುದಿಲ್ಲ ... ನೀನು ಆಗಲೇ ನನಗೆ ನಿನ್ನ ಸ್ನೇಹ ಕೊಟ್ಟಿದ್ದೀಯ ! ಸಾಕು "

ಅಂತೂ ಹೀಗೆ ಸಮಯವಾಗುತ್ತಾ ನಮ್ಮ ನಡುವಿನ ಅಂತರವು ಕಡಿಮೆಯಾಯಿತು ಅಂತ ಕಾಣುತ್ತೆ. ದಿನಾ ಬೆಳಿಗ್ಗೆ ಬರ್ತಾ ಇದ್ದರು. ಅವರದ್ದೆ ಹೆಚ್ಚು ಮಾತು! ಅವರ

ಪೂರ್ವಜರ ಬಗ್ಗೆ ಅವರಿಗೆ ಬಹಳ ಜಂಬ ! ತನ್ನ ಮುತ್ತಜ್ಜ ಇಡೀ ವಿಶ್ವದ ಚಕ್ರವರ್ತಿ ಎಂದು ಯಾರಾದರೂ ಹೇಳಿದರೆ ಇಲ್ಲ ಎಂದು ಹೇಳಲು ನಾನು ಯಾರು? ತನ್ನ ಪೂರ್ವಜರಿಗೆ ಪ್ರಕೃತಿಯ ಬಗ್ಗೆ ಎಲ್ಲವೂ ತಿಳಿದಿತ್ತು ಎಂದು ಅವರು ನಂಬಿದರೆ ಇಲ್ಲ ಎಂದು ಹೇಳಲು ನಾನು ಯಾರು? ಎಲ್ಲೆಲ್ಲೋ ಇದ್ದರಂತೆ, ಯಾವು ಯಾವುದೋ ಊರುಗಳ ಹೆಸರು ಹೇಳಿದರು. ಆದರೆ ವ್ಯಕ್ತಿ ಮಹಾ ಬೋರು ! ಏನು ಮಾಡೋದು ತಡಕೋತಾ ಇದ್ದೆ.

ಒಂದೆರಡು ವಾರಗಳಾದಮೇಲೆ ನನ್ನನ್ನು ಅವರ ಮನೇಗೆ ಕರೆಯಲು ಪ್ರಾರಂಭ ಮಾಡಿದರು

. "ನಿನ್ನನ್ನು ನನ್ನ ಹೆಂಡತಿ ಭೇಟಿ ಮಾಡಬೇಕಂತೆ' ಎಂದು ದಿನಾ ಹೇಳಲು ಶುರುಮಾಡಿದರು.

" ಅವರೇ ಇಲ್ಲಿ ಬರಬಹುದಲ್ಲ ಸಾಹೇಬರೇ" ಎಂದಿದ್ದಕ್ಕೆ

" ಅವಳಿಗೆ ಸ್ವಲ್ಪ ಮೈ ಸರಿಯಾಗಿಲ್ಲ" ಅಂದರು. ನನಗೇನೂ ಅವರನ್ನು ನೋಡುವ ಆಸಕ್ತಿ ಇರಲಿಲ್ಲ.

" ಬೇರೆಯವರ ಹೆಂಡತೀರನ್ನ ನಾನು ನೋಡೋದು ನನ್ನ ಹೆಂಡತೀಗೆ ಇಷ್ಟವಿಲ್ಲ" ಅಂತ ಹೇಳಿದೆ.

" ಹ,ಹ.ಹ" ಎಂದು ನಕ್ಕು ಬಿಟ್ಟರು.

"ಇಲ್ಲ, ಸಾಹೇಬರೇ, ಅದು ನಿಜ" ಎಂದು ನಾನು ಹೇಳಿದಾಗ

'ಬಿಡಿ, ನಿಮ್ಮ ಮನೆವರಿಗೆ ಹೇಳಿ ಯೋಚನೆ ಮಾಡೋದಕ್ಕೆ ಏನೂ ಇಲ್ಲ, ನಾವಿಬ್ಬರೂ ವಯಸ್ಸಾದವರು" ಎಂದರು.

ನಾನೇನೆ "ನನಗೆ ಬೇರೆ ಹೆಂಗಸರ ಹತ್ತಿರ ಸಂಕೋಚ" ಎಂದು ಹೇಳುತ್ತ ನಯವಾಗಿ ನಿರಾಕರಿಸಲು ಪ್ರಯತ್ನಿಸುತ್ತಿದ್ದೆ. ಆದರೆ ಅವರು ಹೆಚ್ಚು ಹೆಚ್ಚು ಒತ್ತಾಯಿಸಲು ಶುರುಮಾಡಿದರು. ಅವರು ಕಣ್ಣೀರು ಸುರಿಸಲಾರಂಭಿಸಿದಾಗ ನನಗೆ ಕಷ್ಟವಾಯಿತು. ವಿಚಿತ್ರ! ನಾನು ಅವರ ಮನೆಗೆ ಹೋಗದ ಕಾರಣ ಅಳಬೇಕೇ! ಆ ಅಳು ನಿಲ್ಲದಾಗ ಕೊನೆಗೂ ನಾನು ಒಪ್ಪಿದೆ! ಒಂದು ವಾರದ ನಂತರ ನೋಡೋಣ ಎಂದೆ. ಮತ್ತೆ ಸಾಹೇಬರು ಕಣ್ಣೀರಿಟ್ಟರು. ಸರಿ, ಅಂತಿಮವಾಗಿ ನಾವು ನನ್ನ ಭೇಟಿಗೆ ಒಂದು ದಿನ ನಿರ್ಧರಿಸಿದೆವು. .

ಆ ದಿನ ಮುಂಜಾನೆ ನಾವು ಅವರ ಮನೆಗೆ ಹೊರಟೆವು.

"ನೀನು ನಮಗೆ ಅನೇಕ ಮಾವಿನಹಣ್ಣುಗಳನ್ನು ಕೊಟ್ಟಿದ್ದೀಯ! ನನ್ನ ಹೆಂಡತಿ ಮತ್ತು ನಾನು ಈ ಹಣ್ಣುಗಳನ್ನು ಚಪ್ಪರಿಸಿಕೊಂಡು ತಿಂದೆವು "

"ನೀವು ಹಣ್ಣುಗಳನ್ನು ತಿನ್ನುತ್ತೀರಾ?"

"ಏಕೆ ಗೆಳೆಯ ಕೇಳುತ್ತಿದ್ದೀಯ?"

"ಏನಿಲ್ಲ! ನೀವು ತುಂಬಾ ದೊಡ್ಡವರು ಮತ್ತು ಮಾವಿನಹಣ್ಣು ತುಂಬಾ ಚಿಕ್ಕದಾಗಿರುತ್ತೆ.."

"ಆದರೆ ಅವು ತುಂಬಾ ರುಚಿಯಾಗಿರುತ್ತವೆ! ನಮ್ಮ ಹೊಟ್ಟೆಯನ್ನು ತುಂಬಲು ನಾವು ಎಲ್ಲಾ ರೀತಿಯ ವಸ್ತುಗಳನ್ನು ತಿನ್ನುತ್ತೇವೆ. ಆದರೆ ರುಚಿಗೆ! ನಿಮ್ಮ ಮರದ ಮಾವಿನಹಣ್ಣನ್ನು ಸೋಲಿಸಲು ಏನೂ ಇಲ್ಲ"

ಉಡಾಫೆ ಎನ್ನಿಸಿತು. ಇವರು ಬಾದಾಮಿ ಮತ್ತು ಅಲ್ಫೊನ್ಸೊ ಮಾವಿನಹಣ್ಣುಗಳನ್ನು ಬೇರೆ ಬೇರೆ ಅಂತ ಗುರುತಿಸಬಲ್ಲರೆ? ನಮಗೇ ಕಷ್ಟ, !

" ನನ್ನ ಹೆಂಡತಿಗೆ ಈ ಹಣ್ಣುಗಳು ಬಹಳ ಇಷ್ಟ" ಎಂದರು

" ಸಂತೋಷ" ಎಂದೆ

"ನನ್ನ ಹೆಂಡತಿ ಈ ಹಣ್ಣುಗಳನ್ನು ಪ್ರೀತಿಸುತ್ತಾಳೆ! ಈ ಮಾವಿನಹಣ್ಣನ್ನು ಯಾವಾಗಲೂ ತಿನ್ನುವವನು ತುಂಬಾ ಸಿಹಿ ಹೃದಯವನ್ನು ಹೊಂದಿರಬೇಕು ಎಂದು ಅವಳು ಹೇಳುತ್ತಿರುತ್ತಾಳೆ"

" ಏನು ?"

"ಹೌದು, ನನ್ನ ಗೆಳೆಯ! ಅದನ್ನೇ ನನ್ನ ಹೆಂಡತಿ ಹೇಳುತ್ತಾಳೆ. ಅದಕ್ಕಾಗಿಯೇ ನಾನು ನಿನ್ನನ್ನು ಅವಳ ಹತ್ತಿರ, ನಮ್ಮ ಮನೆಗೆ ಕರೆದುಕೊಂಡು ಹೋಗುತ್ತಿದ್ದೇನೆ". ನನಗೆ ನಂಬಲಾಗಲಿಲ್ಲ.

"ಆಕೆ ನನ್ನನ್ನು ತಿನ್ನಲು ಬಯಸುತ್ತಾರಾ?" ಎಂದು ಭಯದಿಂದ ಕೇಳಿದೆ

" ಗೆಳೆಯಾ, ನಿನ್ನನ್ನಲ್ಲಾ ! ನಿನ್ನ ಹೃದಯವನ್ನು !"

ಇದು ಯಾವ ರೀತಿಯ ಸ್ನೇಹಿತ! ದೇವರೇ! ನಾನೇನು ಮಾಡಲಿ ? ನಾನು ಈ ವಿಶ್ವಾಸಘಾತುಕ ಪ್ರಾಣಿಯ ಮೇಲೆ ಕುಳಿತಿದ್ದೇನೆ. ನನಗೆ ಈಜುವುದು ಗೊತ್ತಿಲ್ಲ. ಈಜಲು ಹೋದರೂ ಈ ಭಯಾನಕ ವ್ಯಕ್ತಿ ಕ್ಷಣದಲ್ಲಿ ನನ್ನನ್ನು ಹಿಡಿಯುತ್ತಾನೆ. ನಾನು ವೇಗವಾಗಿ ಯೋಚಿಸಬೇಕು. ಆಗ ನನಗೆ ಒಂದು ಉಪಾಯ ಹೊಳೆಯಿತು.

"ಓ ಸಾಹೇಬರೇ ! ನಾವು ದಡದಿಂದ ಹೊರಡುವ ಮೊದಲೇ ನೀವು ಹೀಗೆ ಅಂತ ನನಗೆ ಹೇಳಿದ್ರೆ?"

"ಏಕೆ? ವ್ಯತ್ಯಾಸವೇನು?"

"ನೀವು ನನ್ನನ್ನು ಮನೆಗೆ ಕರೆದುಕೊಂಡು ಹೋಗುತ್ತೀರಿ. ನಿಮ್ಮ ಹೆಂಡತಿ ನನ್ನನ್ನು ತುಂಡುಗಳಾಗಿ ಹರಿದು ತಿನ್ನುತ್ತಾರೆ. ಆದರೆ ಅದು ಕೇವಲ ಮೂರ್ಖ ಕೋತಿ ಮಾಂಸ ಮತ್ತು ಅದು ಸಿಹಿ ಅಲ್ಲ ಎಂದು ಅವಳಿಗೆ ಗೊತ್ತಾಗಿಬಿಡುತ್ತೆ."

"ಏಕೆ?"

"ಏಕೆಂದರೆ ಈ ಸಮಯದಲ್ಲಿ ನನ್ನ ಹೃದಯ ನನ್ನ ಜೊತೆಯಲ್ಲಿಲ್ಲ. ನನ್ನ ಹೃದಯವನ್ನು ನನ್ನ ಹೆಂಡತಿ ಇಟ್ಟುಕೊಂಡಿದ್ದಾಳೆ. ಅದು ಅವಳ ಹತ್ತಿರವೇ ಇರುತ್ತೆ.

ಅವಳು ನನ್ನ ಹೃದಯವನ್ನು ಕಾಪಾಡಿಕೊಳ್ಳುವವಳು ನೀವು ಹೀಗೆ ಅಂತ ಹೇಳಿದ್ದರೆ . ಈಗ ಈ ಪ್ರಯಾಣವೆಲ್ಲಾ ವ್ಯರ್ಥವಾಯಿತಲ್ಲಾ?"

"ಅವಳು ಅದನ್ನು ಏನು ಮಾಡುತ್ತಾಳೆ"?

"ಸರಿ, ಅವಳು ಅದರೊಂದಿಗೆ ಆಡುತ್ತಾಳೆ" "

" ಏನು ನಿನ್ನ ಮಾತಿನ ಅರ್ಥ"?

" ನೋಡಿ, ಸಾಹೇಬರೆ, ನೀವು ತುಂಬಾ ಪ್ರಶ್ನೆಗಳನ್ನು ಕೇಳುತ್ತಿದ್ದೀರಿ. ನಾವು ತೀರದಿಂದ ತುಂಬಾ ದೂರ ಹೋಗುತ್ತಿದ್ದೇವೆ .. ನಿಮಗೆ ನನ್ನ ಹೃದಯ ಬೇಡವೇ ಅಥವಾ ಇಲ್ಲವೇ?"

" ಖಂಡಿತವಾಗಿ ಬೇಕು.ಅದಿಲ್ಲದಿದ್ದರ ನನ್ನ ಹೆಂಡತಿ ಮನೆಗೆ ಸೇರಿಸುವುದಿಲ್ಲ "

"ಹಾಗಾದರೆ ನನ್ನನ್ನು ಮತ್ತೆ ದಡಕ್ಕೆ ಕರೆದೊಯ್ಯಿರಿ. ನಾನು ಮರದ ಮೇಲೆ ಹೋಗಿ ನನ್ನ ಹೃದಯವನ್ನು ನನ್ನ ಹೆಂಡತಿಯಿಂದ ಪಡೆಯುತ್ತೇನೆ"

"ಅವಳು ಅದನ್ನು ನಿನಗೆ ಕೊಡುತ್ತಾಳಾ"?

"ಹೌದು, ಸಾಮಾನ್ಯವಾಗಿ ಕೊಡೋಲ್ಲ!ಬೇರೆ ಹೆಂಗಸರಿಗೆ ಕೊಟ್ಟು ಬಿಡ್ತೀನಿಅಂತ ಅವಳಿಗೆ ಹೆದರಿಕೆ "

" ಹಾಗಾದರೆ?"

" ಸ್ವಲ್ಪ ಪುಸಲಾಯಿಸಬೇಕಾಗುತ್ತೆ. "

ಸರಿ, ನಾವು ಮತ್ತೆ ಹಿಂದಿರುಗಿ ದಡಕ್ಕೆ ಹೊರಟೆವು. ಇಂಥವರ ಜೊತೆ ಸ್ನೇಹ ಮಾಡಿದೆನಲ್ಲಾ ನಾನು ! ನಾನೊಬ್ಬ ಮಹಾ ಮೂರ್ಖ ಎಂದು ಬೈದುಕೊಂಡೆ. ನೆಲವನ್ನು ಮುಟ್ಟಿದ ತಕ್ಷಣ, ನಾನು ಅವರ ಬೆನ್ನಿನಿಂದ ಹೊರಗೆ ಹಾರಿ ಮರದ ಮೇಲೆ ವೇಗವಾಗಿ ಮತ್ತು ಸಾಧ್ಯವಾದಷ್ಟು ಎತ್ತರಕ್ಕೆ ಏರಿದೆ. ಸಾಹೇಬರು ನನ್ನನ್ನು ಕರೆಯುತ್ತಲೆ ಇದ್ದರು ' "ಗೆಳೆಯಾ, ನಿನ್ನ ಹೃದಯ ತೊಗೊಂಡು ಕೆಳಗೆ ಬಾ .ನನ್ನ ಹೆಂಡತಿ ಕಾಯ್ತಾ ಇರ್ತಾಳೆ, ತಡ ಆದ್ರೆ ಬೈತಾಳೆ" .

" ಇವಳು ಕೊಡ್ತಾ ಇಲ್ಲ ಸಾಹೇಬರೆ " ಎಂದು ನಗುತ್ತ ಉತ್ತರಿಸಿದೆ. ನನ್ನ ಹೆಂಡತಿಯೂ , ನಾನು ನಕ್ಕಿದ್ದೂ ನಕ್ಕಿದ್ದೇ ! ಸಾಹೇಬರು ಸಂಜೆಯ ತನಕ ಕಾಯುತ್ತಲೇ ಇದ್ದು . "ಗೆಳೆಯಾ,ನಾಳೆ ಬರ್ತೀನಿ, ಹೃದಯ ಇಸ್ಕೊಂಡು ಇಟ್ಟುಕೊಂಡಿರು" ಅಂತ ಹೊರಟು ಹೋದರು. ನನ್ನ ಹೆಂಡತಿ ಮತ್ತು ನಾನು ಮಧ್ಯರಾತ್ರಿಯಲ್ಲಿ ದೂರದ ಬೇರೆ ಮರಕ್ಕೆ ಸ್ಥಳಾಂತರಗೊಂಡೆವು. (ಮೂಲ – ಪಂಚತಂತ್ರ) ■

---

**ಚೀನಾದಲ್ಲಿ 2020 ಇಲಿ ವರ್ಷವಂತೆ. ನಿಜವೇ! ಎಲ್ಲರೂ ಬಚ್ಚಿಟ್ಟುಕೊಂಡಿದ್ದಾರೆ. ಆಹಾರಕ್ಕಾಗಿ ಮಾತ್ರ ಹೊರ ಬರುತ್ತಾರೆ. ಆಹಾರ ಸ್ಟಾಕ್ ಮಾಡುತ್ತಾರೆ. ಇತರರು ಹತ್ತಿರ ಬಂದ ತಕ್ಷಣ ಹೆದರಿ ಓಡುತ್ತಾರೆ.**

● **ದಂನಆ**

- ನಂದು ನಂದು ಅನ್ನೋದು ಮಹಾಭಾರತ. ನಿಂದು ನಿಂದು ಅನ್ನೋದು ರಾಮಾಯಣ. ಇವತ್ತು ಎಲ್ಲಾ ನಿಮ್ದು ಅಂತ ರಾಮನ ಹೆಸರಿನಾಗೆ, ಎಲ್ಲಾನೂ ನಂದೇ ಅನ್ನೋ ಮಹಾಭಾರತ ನಡೀತಾ ಇದೆ.
- ಸುಪ್ರಸಿದ್ಧ ಸಾಹಿತಿಗಳು ಬರೆಯುತ್ತಾರೆ. ಏಕೆಂದರೆ ಅವರಿಗೆ ಬರೆಯದಿರಲು ಸಾಧ್ಯವೇ ಇಲ್ಲ.
- ವೆನ್ ಯು ಆರ್ ಫಿಟ್ ಎನಿಥಿಂಗ್ ಯು ವೇರ್ ಲುಕ್ಸ್ ಗುಡ್.
- ನೀನು ಯಾವ ದೇವರನ್ನು ಪ್ರಾರ್ಥಿಸಿದೆ? ಈ ದುರಂತವನ್ನು ಮಾಡಿಸಿದ ದೇವರಿಗೆ? ಅಥವಾ ಈ ದುರಂತವನ್ನು ತಪ್ಪಿಸಲು ಏನೂ ಮಾಡದ ದೇವರಿಗೆ?
- ಈ ವಿಶ್ವದಲ್ಲಿ ಎರಡು ಬಗೆಯ ಜನರಿದ್ದಾರೆ. ಕೊಡುವವರು ಮತ್ತು ತೆಗೆದುಕೊಳ್ಳುವವರು. ತೆಗೆದುಕೊಳ್ಳುವವರು ಚೆನ್ನಾಗಿ ಉಣ್ಣುತ್ತಾರೆ. ಕೊಡುವವರು ತೃಪ್ತಿಯಿಂದ ನಿದ್ರಿಸುತ್ತಾರೆ.
- ವಾಟ್ ಯು ಡು ಇನ್ ರಿಯಲ್ ಲೈಫ್ ಈಸ್ ಮೋರ್ ಇಂಪಾರ್ಟೆಂಟ್ ದ್ಯಾನ್ ವಾಟ್ ಯು ಡು ಇನ್ ಸೋಷಿಯಲ್ ಮೀಡಿಯ ಲೈಫ್.
- ಏನಾದರು ಚೆನ್ನಾಗಿ ಮಾಡಬಹುದು ಎಂದು ಅನಿಸಿದರೆ ಅದನ್ನು ಈಗಾಗಲೇ ಯಾರಾದರು ಮಾಡಿಯೇ ಬಿಟ್ಟಿರುತ್ತಾರೆ.
- ಮಕ್ಕಳಿಗೆ ನಾವು ಸಾಮಾನ್ಯವಾಗಿ ನೆನಪಿನಲ್ಲಿ ಉಳಿಸಿಕೊಳ್ಳಬೇಕಾದ ಉತ್ತರಗಳನ್ನು ಕೊಡುತ್ತೇವೆ. ಉತ್ತರ ಪಡೆದುಕೊಳ್ಳಬೇಕಾದ ಸವಾಲುಗಳನ್ನು ಅಲ್ಲ.
- ದೇವರು ನಮಗೆ ಬೀಜಗಳನ್ನು ಕೊಡುತ್ತಾನೆ. ಆದರೆ ಸುಲಿದು ಕೊಡುವುದಿಲ್ಲ.
- ಎ ಫಿಟ್ ಅಂಡ್ ಹೆಲ್ತಿ ಬಾಡಿ ಈಸ್ ದಿ ಬೆಸ್ಟ್ ಫ್ಯಾಶನ್ ಸ್ಟೇಟ್‌ಮೆಂಟ್.
- ನಾವು ಮಾಡುತ್ತಿರುವದನ್ನು ಇನ್ನಷ್ಟು ಚೆನ್ನಾಗಿ ಮಾಡುವುದೇ ಒಂದು ಸವಾಲು.
- ದೇವಸ್ಥಾನಕ್ಕೆ ಹೋಗುವಾಗಲೂ ಹುಷಾರಾಗಿ ಹೋಗಿ ಬಾ ಎಂದು ಹೇಳಬೇಕೆ?
- ದಿ ವರ್ಲ್ಡ್ ಈಸ್ ಫೋಕಸ್ಡ್ ಆನ್ ಜಸ್ಟ್ ಲುಕಿಂಗ್ ಗುಡ್ ನಾಟ್ ಫೀಲಿಂಗ್ ಗುಡ್ ಫ್ರಂ ವಿಥಿನ್. ದಟ್ಸ್ ವೈ ಎವೆರಿಒನ್ ಲುಕ್ಸ್ ಗುಡ್ ಆನ್ ಸೋಷಿಯಲ್ ಮೀಡಿಯ.
- ನಾನು ಮರಗಳ ಪರವಾಗಿ ಮಾತನಾಡುತ್ತೇನೆ ಏಕೆಂದರೆ ಅವುಗಳಿಗೆ ನಾಲಿಗೆ ಇಲ್ಲ.
- ನಾನು ಏನನ್ನೂ ಪ್ಲಾನ್ ಮಾಡುವುದೇ ಇಲ್ಲ. ಏಕೆಂದರೆ ನಾನು ಪ್ಲಾನ್ ಮಾಡಿದಾಗ ದೇವರು ನಗುತ್ತಿರುತ್ತಾನೆ!
- ಐ ವುಡ್ ನೆವರ್ ಡೈ ಫಾರ್ ಮೈ ಬಿಲೀಫ್ಸ್ ಬಿಕಾಸ್ ಐ ಮೈಟ್ ಬಿ ರಾಂಗ್.
- ಫಿಲಾಸಫರ್ಸ್ ಕ್ಲಬ್‌ನಲ್ಲಿ WhyFi* ಉಚಿತ.

■

# ಕಾಗಾಲಾಪ

*ಅಪರಂಜಿಗಾಗಿ ಅಳವಡಿಸಿದ್ದು:* ● **ಎನ್ ರಾಮನಾಥ್**

(**ಖ್ಯಾತ ವ್ಯಂಗ್ಯ ಚಿತ್ರಕಾರ ಆರ್ ಕೆ ಲಕ್ಷ್ಮಣ್** ತಮ್ಮ ಜೀವನದಲ್ಲಿ ಕಾಗೆ ಹೊಕ್ಕ ಬಗೆಯನ್ನು **ಡಾ. ಎಚ್ ಕೆ ರಂಗನಾಥ್** ಜತೆ ಮಾತುಕತೆಗೆ ಇಳಿದಾಗ ವಿವರಿಸಿದ್ದಾರೆ...)



**ಹೆಚ್ಕೆ: ನಿಮ್ಮ ಈ ವ್ಯಂಗ್ಯಚಿತ್ರಗಳು ಮತ್ತು ಕಾಗೆ ಮಧ್ಯೆ ನಿಮಗೆ ಬಹಳ ಪ್ರೀತಿ ಕೊಡೋದು ಯಾವುದು?**

ಆರ್ಕೆ: ಕಾಗೆ. ಬೇಂದ್ರೆಯವರು ಬರೆದಿದ್ದಾರೆ ಒಂದು ಸಣ್ಣ ಪದ್ಯ.. ನೀವು ಕೇಳಿದ ಪ್ರಶ್ನೆ, ಯಾತಕ್ಕೆ ಕಾಗೆ ಬರೀತೀರೀ ಅಂತ.. ಅವರ ಪದ್ಯ  ಆ ಕಾಗೆ ಈ ಕಾಗೆ ಏಕಾಗೆ... ಯಾತಕ್ಕೇ ಅಂತ... ಆ ಪ್ರಶ್ನೆ ಬಂತು... ಯಾಕಾಗೆ ಅಂತ ಹೇಳಕ್ಕೆ ಬರೋದಿಲ್ಲ ನನಗೆ. ಯಾಕೇಂದ್ರೆ ಐ ಡೋಂಟ್ ನೋ ವೈ. ಮೈ ಫಸ್ಟ್ ಕಾಗೆ ವಾಸ್ ಡ್ರಾನ್ ಎಟ್ ದ ಏಜ್ ಆಫ್ ತ್ರೀ.

**ಹೆಚ್ಕೆ: ಓ!**

ಆರ್ಕೆ: ಮೂರು ವಯಸ್ಸು ಸ್ವಾಮಿ, ನಾನು ಮೂರನೆ ವಯಸ್ಸಿಂದ ಡ್ರಾಯಿಂಗ್ ಬರೀತಾ ಇದೀನಿ. ಮೂರನೇ ವಯಸ್ಸಿಂದ ಕೈಯಲ್ಲಿ ಚಾಕ್‌ಪೀಸ್ ಸಿಕ್ಕ ತಕ್ಷಣ ಮನೆಯ ಫ್ಲೋರೆಲ್ಲಾ ಗಬ್ಬೆಬ್ಬಿಸ್ತಾ ಇದ್ದೆ, ಪೆನ್ಸಿಲ್ ಸಿಕ್ಕಿದ ತಕ್ಷಣ ಮನೇಲಿರೋ ಗೋಡೆನೆಲ್ಲಾ! ಆವಾಗಿನಿಂದ ನಿಲ್ಲಿಸಲೇ ಇಲ್ಲ.

**ಹೆಚ್ಕೆ: ಕನ್ನಡ ನಾಡಿನ ಪುಣ್ಯ ಎನ್ನಬಹುದು.**

ಆರ್ಕೆ: ಆದರೆ ನಮ್ಮ ತಂದೆತಾಯಿಯರ ಪುಣ್ಯ ಅಲ್ಲ. ಏಕೆಂದರೆ ಅವರು ಒಳ್ಳೆ ಸುಣ್ಣ ಹೊಡೆಸಿ ಇಟ್ಟಿದ್ದನ್ನೆಲ್ಲಾ ನಾನು ಹಾಳುಮಾಡ್ಬಿಡ್ತಿದ್ದೆ.

**ಹೆಚ್ಕೆ: ನಿಮ್ಮ ಜೀವನದಲ್ಲಿ ಕಾಗೆ ಹೊಕ್ಕ ಬಗೆ?**

ಆರ್ಕೆ: ನನ್ನ ಕಾಗೆ, ಅದು ಒಂದು ಪಕ್ಷಿ ಆನ್ ವಿಚ್ ಐ ಹ್ಯಾವ್ ಮೇಡ್ ಎ ಲಾಟ್ ಆಫ್ ರಿಸರ್ಚ್. ಅನ್ಯಾಯವಾಗಿ ನಾವು ಅದನ್ನ ನೆಗ್ಲೆಕ್ಟ್ ಮಾಡ್ಬಿಟ್ಟಿದೀವಿ. ಇಟ್ ಈಸ್ ಒನ್ ಆಫ್ ದ ಗ್ರೇಟೆಸ್ಟ್ ಬರ್ಡ್ಸ್. ನನಗೆ ರೈಟ್ ಇದ್ದಿದ್ರೆ, ಇಫ್ ಐ ಹ್ಯಾಡ್ ಬೀನ್ ದ ಹೆಡ್ ಆಫ್ ದಿಸ್ ಗ್ರೇಟ್ ನೇಷನ್, ನವಿಲಿಗಲ್ಲ, ಕಾಗೇಗೆ ಕೊಡ್ತಾ ಇದ್ದೆ ನ್ಯಾಷನಲ್ ಬರ್ಡ್ ಸ್ಟೇಟಸ್‌ನ, ವಿಚ್ ಈಸ್ ಇಂಡೀಡ್ ಎ ನ್ಯಾಷನಲ್ ಬರ್ಡ್. ನೀವು ದಿನಾ ಬೆಳಗ್ಗೆ ಎದ್ದ ತಕ್ಷಣ ನವಿಲನ್ನ ನೋಡೋದಿಲ್ಲ, ಗಿಣೀನ ನೋಡೋದಿಲ್ಲ, ಕಾಗೇನ ನೋಡ್ತೀರಿ. ವೆರಿ ವಿಸಿಬಲ್, ಯಾವಾಗಲೂ ನೋಡಬಹುದು. ನಿಮ್ಮ ಕಿಟಕಿ ಅಂಚಿನಲ್ಲಿ ಯಾವಾಗಲೂ ಕೂತಿರತ್ತೆ. ಅಂಡ್ ಇಟ್ಸ್ ಮೂಮೆಂಟ್ಸ್ ಅಂಡ್ ಥಿಂಕಿಂಗ್ಸ್ ಆರ್ ವೆರಿ ಕ್ಲೋಸ್ ಟು ಹ್ಯೂಮನ್ ಬೀಯಿಂಗ್ಸ್. ಮನುಷ್ಯನಿಗೆ ನೆಕ್ಸ್ಟ್ ಅದು, ಇನ್ ಬರ್ಡ್ಸ್. ನೋ ಅದರ್ ಅನ್ ಟ್ರೈನ್ಡ್ ಬರ್ಡ್ ಹ್ಯಾಸ್ ಗಾಟ್ ದ ಕ್ಯಾರೆಕ್ಟರಿಸ್ಟಿಕ್ ಆಫ್ ಎ ಕಾಗೆ, ಆಫ್ ಎ ಹ್ಯೂಮನ್ ಬೀಯಿಂಗ್ ಲೈಕ್ ದಿಸ್. ಗಿಣಿ ಡಲ್ ಫೂಲ್. ಮರದ ಮೇಲೆ ಕೂರಿಸಿದರೂ ಕೂತಿರುತ್ತೆ, ಪಂಜರದಲ್ಲಿ ಹಾಕಿದರೂ ಕೂತಿರುತ್ತೆ, ಅದಕ್ಕೆ ಥಿಂಕಿಂಗ್ ಇಲ್ಲ, ವಾಯ್ಸ್ ಇಲ್ಲ, ಹೆಡ್ಡನ್ನೂ ಟರ್ನ್ ಮಾಡಲ್ಲ ಅದು. ಕಾಗೆ ಆಲ್ ದ ಟೈಮ್ ಹಿಂದೆ ಯಾರ್ಬರ್ತಾ ಇದ್ದಾರೆ. ಮುಂದೆ ಏನು ನಡೀತಾ ಇದೆ, ಆ ಕಿಟಕೀಲಿ ಏನಿಟ್ಟಿದಾರೆ ಏನು... ಅಂಡ್ ದಟ್ ಈಸ್ ದ ಓನ್ಲೀ ಬರ್ಡ್... ಸಾಯಂಕಾಲ ಆರು ಗಂಟೆ... ಸಂಜೆ... ಸೂರ್ಯಾಸ್ತಮ ಆದ ತಕ್ಷಣ, ಯಾವ ಮನೆ ಸಿಗತ್ತೋ ಅದರ ಕೂರೇಲಿ ಪಕ್ಕಪಕ್ಕಪಕ್ಕದಲ್ಲಿ ಕೂತ್ಕೊಂಡು, ಈವಾಗ ಟಿವಿ ಏರಿಯಲ್ ಮೇಲೆ ಕೂತ್ಕೊಂಡು, ದೇ ಹೋಲ್ಡ್ ಎ ಡಿಸ್ಕಷನ್ ಎಬೌಟ್ ವಾಟ್ ಹ್ಯಾಪನ್ಡ್ ಎವೆರಿಡೆ.

**ಹೆಚ್ಕೆ: ಅದ್ಹೇಗೆ ಗೊತ್ತು ನಿಮಗೆ ಡಿಸ್ಕಷನ್ನು ಅಂತ?**

ಆರ್ಕೆ: ಅದು ಮಾತಾಡೋದು ನನಗೆ ಗೊತ್ತು, ಅದರ ಭಾಷೆ ಗೊತ್ತು ಸ್ವಲ್ಪ. ದೇ ಡಿಸ್ಕಸ್... ಕಾಲ ಕೆಟ್ಹೋಗ್ಬಿಟ್ಟಿದೆ, ಬೆಲೆ ಎಲ್ಲಾ ಏರ್ಬಿಟ್ಟಿದೆ, ಏನೂ ಸಿಕ್ತಾ ಇಲ್ಲ ಬರ್ತಾ ಬರ್ತಾ, ಏನೋ ಒಂಚೂರು ಬ್ರೆಡ್ ಸಿಕ್ತು, ಕಾಲ ತಳ್ಬಿಟ್ಟೆ ಅಂತೇನೋ ಹೇಳ್ತಾ ಇದಾವೇಂತ ಕಾಣುತ್ತೆ, ನನಗೆ ಗೊತ್ತಿಲ್ಲ... ಬಟ್ ಐ ವಾಚ್ ದೆಮ್. ಅದೊಂದೇ ಬರ್ಡ್ ನೋಡೋದು... ನವಿಲು ಕೂತ್ಕೊಳಲ್ಲ... ನವಿಲಿಗೆ ಡ್ಯಾನ್ಸ್ ಮಾಡಕ್ಕೂ ಬರೋದಿಲ್ಲ ಸರಿಯಾಗಿ. ಎಲ್ಲಾ ಮಾಡಿ ಬಿಟ್ಟ ಮಿಕ್ಕಿದ್ದ ಬಣ್ಣ ಎಲ್ಲಾ ಇರತ್ತಲ್ಲ, ಮನೆಯನ್ನ ನೀವು ಪೇಂಟ್ ಮಾಡಿಸ್ತೀರಿ, ಮಿಕ್ಕಿದ ಬಣ್ಣ ಎಲ್ಲಾ ತೆಗೆದು ಏನೋ ಒಂದು ಬೊಂಬೆ ಬರೆದ ಹಾಗೆ.. ಬ್ರಹ್ಮ ಉತ್ಪತ್ತಿ ಮಾಡಿದ ಮೇಲೆ ಮಿಕ್ಕಿದ ಬಣ್ಣ ಎಲ್ಲ ಸೇರಿ ಒಂದು ಬರ್ಡ್ ಬರೆದ್ಬಿಟ್ರು. ಅದಕ್ಕೇ ದ ಕಲರ್



ಹಾರ್ಮನಿ ಈಸ್ ನಾಟ್ ವೆರಿ ಗುಡ್ ಇನ್ ನವಿಲು. ಸಿಕ್ಕಾಪಟ್ಟೆ ಗ್ಯಾರಿಷ್ ಕಲರ್ಸ್. ಎಲ್ಲಿ ಎಲ್ಲೋ ಇರಕೂಡದೋ ಅಲ್ಲಿ ಎಲ್ಲೋ, ಎಲ್ಲಿ ಬ್ಲೂ ಇರಕೂಡದೋ ಅಲ್ಲಿ ಬ್ಲೂ... ನಾನಾಗಿದ್ರೆ ಬೇರೆ ಕಾಂಬಿನೇಷನ್ ಕೊಡ್ತಾ ಇದ್ದೆ. ಅಂಡ್ ಅದಕ್ಕೆ ಹಾರುತ್ತಾ, ಹಾರಕ್ಕಾಗುತ್ತ ಇಲ್ವಾ ಅನ್ನೋದು ವೇಗ್ ಆಗಿ ಬಿಟ್ಬಿಟ್ರು, ಪಾಪ! ಇಲ್ಲಿಂದ ಅಲ್ಲೀವರೆಗೂ ಹಾರ್ಬಿಟ್ಟು ಸುಸ್ತು ಹೊಡೆದ್ಬಿಡೋ ಹಾಗೆ. ಸ್ಥೂಲ ಶರೀರ, ರೆಕ್ಕೆ ಚಿಕ್ಕದು; ಹಿಂದುಗಡೆ ಬಾಲ ದೊಡ್ಡದು, ಯೂಸ್‌ಲೆಸ್ ಅದು ಆರ್ನಮೆಂಟ್‌ಗೆ; ಈ ತರಹ ಮಾಡಿ ಪಾಪ ಅದನ್ನ ಕೆಡಿಸ್ಬಿಟ್ರು. ಬಟ್ ಕಾಗೇಗೆ ಕರೆಕ್ಟು ಕಲರ್ರು, ಬ್ಲ್ಯಾಕ್, ಗ್ರೇ ಎಗೇನ್ಸ್ಟ್ ದ ಬ್ಯೂಟಿಫುಲ್ ಇಂಡಿಯನ್ ಬ್ಯಾಗ್ರೌಂಡ್.

**ಹೆಚ್ಕೆ: ವಾಟ್ ಡೂ ಯೂ ಥಿಂಕ್ ಆಫ್ ದ ಸೌಂಡ್ ಆಫ್ ಕಾಗೆ?**

ಆರ್ಕೆ: ಸೌಂಡ್ ಆಫ್ ಕಾಗೇನ ನೀವು ಅಂಡರ್‌ಸ್ಟ್ಯಾಂಡ್ ಮಾಡ್ಕೋಬೇಕು. ದೇರ್ ಈಸ್ ನಾಟ್ ಒನ್ ಸೌಂಡ್. ಮಾರ್ನಿಂಗ್ ಸೌಂಡ್ ಈಸ್ ಡಿಫರೆಂಟ್ ಫ್ರಂ ಆಫ್ಟರ್‌ನೂನ್ ಸೌಂಡ್. ಆಫ್ಟರ್‌ನೂನಲ್ಲಿ ವೆನ್ ಇಟ್ ಗೋಸ್ ಟು ಸ್ಲೀಪ್, ಬಿಟ್ವೀನ್ ಟ್ವೆಲ್ವ್ ಥರ್ಟಿ ಅಂಡ್ ಒಬ್ ಥರ್ಟಿ ದೇ ಕಂಪ್ಲೀಟ್ಲೀ ಸ್ವಿಚ್ ಆಫ್. ಗೊತ್ತಾ?

**ಹೆಚ್ಕೆ: ಇಲ್ಲ ಸರ್ ಗೊತ್ತಿಲ್ಲ. ನಾವು ಕಾಗೆಗಳನ್ನ ಸ್ಟಡಿ ಮಾಡಿಲ್ಲ.**

ಆರ್ಕೆ: ಸ್ಟಡಿ ನೀವು ಮಾಡ್ಬೇಕು. ದೇರ್ ಈಸ್ ಎ ಬುಕ್, ಎ ಪೇಪರ್, ರಿಸರ್ಚ್ ಬೈ ಸ್ಮಿತ್ಸೋನಿಯನ್ ಇನ್‌ಸ್ಟಿಟ್ಯೂಟ್, ಆನ್ ಕ್ರೋಸ್. ವಿಚ್ ಗಿವ್ಸ್ ಫರ್ದರ್ ಡಿಟೇಲ್ಸ್.

**ಹೆಚ್ಕೆ: ಒಂದರಿಂದ ಎರಡು ಗಂಟೆಯವರೆಗೆ ಅದು ಸ್ತಬ್ಧ... ಏನೂ ಮಾತಾಡಲ್ವಾ?**

ಆರ್ಕೆ: ಒಂದು 'ಫಾರ್ಟಿ ವಿಂಕ್ ಐ ಟೇಕ್' ಅಂತ ಹೇಳಲ್ವೇ ಹಾಗೇನೇ... ಆವಾಗಲೇ ಅದರ ಧ್ವನಿ ಬೇರೆ. ಆಮೇಲೆ ಅದಕ್ಕೆ ಸಮ್ಮರ್ ಸೌಂಡ್... ಬಾಯಾರಿಕೆ ಆಗಿ ನೀರೆಲ್ಲಾ ಇಲ್ದೇ ಇರೋವಾಗ ಬೇರೆ ತರಹ ಸೌಂಡ್ ಇರತ್ತೆ... ತ್ರೀ ಫೋರ್ ಸೌಂಡ್ಸ್... ಒಂದೇ ಧ್ವನಿ ಇಲ್ಲ ಅದಕ್ಕೆ.

**ಹೆಚ್ಕೆ: ನವಿಲಿಗೆ ಒಂದೇ ಧ್ವನಿ, ಹೆಚ್ಚುಕಡಿಮೆ.**

ಆರ್ಕೆ: ಅಯ್ಯೋ... ಅಗ್ಲೀ ಧ್ವನಿ. ಅದನ್ನೂ ಸರಿಯಾಗಿ ಮಾಡಲಿಲ್ಲ ಬ್ರಹ್ಮ. ಯಾವುದೋ ಸಿಕ್ಕಿದ್ರಲ್ಲಿ ವೀಣೆ ತಂತಿ ಹಾಕ್ಬಿಟ್ಟು, ಹೋಗಪ್ಪ ಚೆನ್ನಾಗಿದ್ದೀಯ ಅಂತ ಕಳಿಸ್ಬಿಟ್ಟಿದ್ದಾನೆ. ದೆನ್, ಈ ಕಾಗೇದಿನ್ನೊಂದೇನೂಂದ್ರೆ, ಮನೇಲಿ ತುಂಬಾ ದಿವಸ ಇಟ್ಟಿದ್ದೀರ ಒಂದು ಬ್ರೆಡ್‌ನ, ಗಟ್ಟಿ ಆಗ್ಬಿಟ್ಟಿದೆ. ಯೂ ತ್ರೋ ಇಟ್ ಔಟ್ ಆಫ್ ದಿ ವಿಂಡೋ. ನೋ ಅದರ್ ಬರ್ಡ್ ವಿಲ್ ಗೋ ನಿಯರ್ ಇಟ್ ಬಿಕಾಸ್ ಇಟ್ ಈಸ್ ವೆರಿ ಹಾರ್ಡ್. ಈ ಕಾಗೆ ಏನ್ಮಾಡತ್ತೇ, ಅದನ್ನ ತೊಗೊಂಡ್ಬಿಟ್ಟು, ಎಲ್ಲಿ ನೀರಿದೆಯೋ ಅಲ್ಲಿ ಅದನ್ನ ಅದ್ದಿಬಿಟ್ಟು, ಸಾಫನ್ ಮಾಡಿ ಅದನ್ನ ತಿನ್ನತ್ತೆ. ದಟ್ಸ್ ದ ಓನ್ಲೀ ಬರ್ಡ್ ವಿಚ್ ಡಸ್ ಇಟ್. ನನ್ನ ಫ್ರೆಂಡ್ ಒಬ್ರು ಆಲ್ವೇಸ್ ಯೂಸ್ಡ್ ಟು ಗಿವ್ ಫ್ರೆಷ್ ವೆಟ್ ಬ್ರೆಡ್ ಟು ದ ಕ್ರೋಸ್. ದಿನಾಗ್ಲೂ ಆ ವಿಂಡೋ ತುದಿಗೆ ಆ ಟೈಮಿಗೆ ಬರತ್ತೆ, ಅದಕ್ಕೆ ಕೊಡ್ಬೇಕು.

ಒಂದ್ಸರ್ತಿ ಅದಿರ್‍ಲಿಲ್ಲಾಂತ ಮಾರಿ ಬಿಸ್ಕತ್ ಕೊಟ್ಟ. ಅದನ್ನ ಒಂದು ಬೈಟ್ ಹಾಕ್ಬಿಟ್ಟು ಸಿಕ್ಕಾಪಟ್ಟೆ ಬೈದ್ಬಿಟ್ಟು ಹೊರಟ್ಹೋಯ್ತು. ಏನು ಜಗಳ ಮಾಡ್ತೂಂತ! ಹೀ ಫೋನ್ಡ್ ಮಿ.. ಮೈ ಗಾಡ್, ಇಟ್ ಡಿಸ್ಟಿಂಗ್ವಿಷ್ಡ್; ಇಟ್ ಈಸ್ ನಾಟ್ ದಿ ಫುಡ್, ಇಟ್ ವಾಂಟ್ಸ್ ದಿ ಬ್ರೆಡ್. ಅಂಡ್ ಪೂರ್ ಫೆಲೋ ಕುಡ್ ನಾಟ್ ಗೆಟ್ ದಿ ಬ್ರೆಡ್ ದಟ್ ಡೇ. ಮಾರಿ



ಬಿಸ್ಕತ್ ಕೊಟ್ರೆ ತೊಗೊಳ್ಳಿಲ್ಲ. ಅನದರ್ ಥಿಂಗ್ ಇಟ್ ಡಸ್ ಈಸ್ ಎರಡು ವಯಸ್ಸಿನ ಮಗು, ಒಂದು ವಯಸ್ಸಿನ ಮಗು ಕೂತಿದೆ ಅಂತಿಟ್ಕೊಳಿ, ಅದರ ಪಕ್ಕದಲ್ಲಿ ಹೋಗಿ ಕಾಗೆ ಕೂತ್ಕೊಳತ್ತೆ ಮತ್ತು ಮಗು ಕೈಕಾಲಾಡಿಸಿದರೆ ಏನೂ ಮಾಡೋದಿಲ್ಲ. ಬಟ್, ಮೂರು–ನಾಲ್ಕು ವಯಸ್ಸು ಅಂದ ತಕ್ಷಣ ದೂರ ಹೊರಟ್ಹೋಗ್ಬಿಡತ್ತೆ. ಗೊತ್ತು ಅದಕ್ಕೆ, ಯಾರ ಹತ್ತರ ಹೋಗ್ಬೋದು, ಯಾರ ಹತ್ರ ಹೋಗಕೂಡದು ಅಂತ. ಅವರ್ ಮೈಥಾಲಜಿ, ಯೂ ನೋ, ನೀವೂ ಓದಿರಬಹುದು ಬಾಲಬೋಧೇಲಿ, ಒಬ್ಬ ರಾಣಿ ಸ್ನಾನ ಮಾಡ್ತಾ ಇರೋವಾಗ ಅವಳ ಜ್ಯುಯೆಲ್ರಿ, ಚೈನ್, ಗೋಲ್ಡ್, ಎಲ್ಲ ಅಲ್ಲಿಟ್ಬಿಟ್ಟು ಸ್ನಾನ ಮಾಡ್ತಾ ಇರ್ತಾಳೆ. ಒಂದು ಕಾಗೆ ಬಂದು ಅದನ್ನ ತೊಗೊಂಡ್ಹೋಗಿ, ಹಾವಿನ ಹುತ್ತದಲ್ಲಿ ಹಾಕಿ, ಅವಳ ಬಾಡಿಗಾರ್ಡ್ಸ್ ಬಂದು ಆ ಹುತ್ತದಿಂದ ಹಾವನ್ನ ಹೊಡೀತಾರೆ. ಯಾಕೇಂದ್ರೆ ಆ ಹಾವು ದಿನಾಗ್ಲೂ ಹೋಗಿ ಕಾಗೆ ಮೊಟ್ಟೆ ತಿನ್ತಾ ಇತ್ತು. ಇದನ್ನ ಹ್ಯಾಗಪ್ಪಾ ಸಾಯಿಸೋದೂಂತ ಯೋಚನೆ ಮಾಡಿ ಎರಡು ಕಾಗೆಗಳು, ಗಂಡ ಹೆಂಡತಿ ಕಾಗೆಗಳು, ಇದು ಮಾಡೋಣಾಂತ ಮಾಡಿದವು. ದಟ್ ಈಸ್ ದ ಮಾರಲ್ ಆಫ್ ದ ಸ್ಟೋರಿ. ಮೈಥಾಲಜೀಲಿ ನವಿಲು ಬರಲಿಲ್ಲ. ಗಿಣಿ ಪಂಜರದೊಳಿಲ್ಲ, ಗಿಣಿ ವಿಚಾರ ಇಲ್ಲ ಇದು... ನೋ, ಪ್ಲೀಸ್.. ಇಟ್ ಈಸ್ ಎ ಸ್ಯಾಡ್ ಒನ್. ಸಂಥಿಂಗ್ ಎಲ್ಸ್. ಅಂಡ್ ಕಾಗೆ ಕಲ್ಲು ಹಾಕೀ ಹಾಕೀ ನೀರನ್ನ ಮೇಲ್ಬರಿಸಿ ಕುಡಿಯೋದು, ಇವೆಲ್ಲಾ ನಾಟ್ ಎ ಜೋಕ್ ಎಟ್ ಆಲ್.

**ಹೆಚ್ಕೆ: ಇದುವರೆಗೆ ಎಷ್ಟು ಕಾಗೆಗಳನ್ನ ಬರೆದಿದ್ದೀರಿ?**

ಆರ್ಕೆ: ಓಹ್! ಐ ಹ್ಯಾವ್ ಹೆಲ್ಡ್ ಸೆವೆರಲ್ ಎಕ್ಸಿಬಿಷನ್ಸ್. ಒಂದೊಂದು ಕಾಗೆಗೆ ಐದು ಸಾವಿರ ರೂಪಾಯಿ. ಈಗ ಬೆಲೆ ಏರ್ಬಿಟ್ಟಿದೆ. ಸ್ವಲ್ಪ ಜಾಸ್ತಿ ಮಾಡ್ಬಿಡ್ತೀನಿ. ಸೋಲ್ಡ್ ಔಟ್ ಆನ್ ದ ಫಸ್ಟ್ ಡೇ. ಮದ್ರಾಸಲ್ಲಿ ಐ ಹೆಲ್ಡ್ ಎನ್ ಎಕ್ಸಿಬಿಷನ್ ಲಾಸ್ಟ್ ಇಯರ್.

**ಹೆಚ್ಕೆ: ಎಷ್ಟು ಕಾಗೆಗಳು ಹೋದವು?**

ಆರ್ಕೆ: ಟ್ವೆಂಟಿಒನ್. ಟ್ವೆಂಟಿಒನ್ ಕಾಗೇನೇ ಮಾಡೋದು ನಾನು.

**ಹೆಚ್ಕೆ: ಓಹೋ! ಬಹಳ ಹ್ಯೂಮನ್ನು ನೀವು ಮಾಡೋ ಕಾಗೆಗಳ ಆ ಎಕ್ಸ್‌ಪ್ರೆಷನ್ನೂ, ಆ ಕಣ್ಣೂ..**

ಆರ್ಕೆ: ನಾನು ಮಾಡಿದ ಇಪ್ಪತ್ತೊಂದೂ ಸೋಲ್ಡ್ ಔಟ್. ಸ್ಮಿತ್ಸೋನಿಯನ್ ಇನ್ಸ್ಟಿಟ್ಯೂಟಲ್ಲಿ, ಕ್ಯಾಶ್ಯೂನಟ್ಸ್ ಇವೆಯಲ್ಲಾ, ಗೇರುಬೀಜ... ಹೀಗಿಟ್ಬಿಟ್ಟು, ಆಕೆ, ಸ್ಮಿತ್‌ಸೋನಿಯನ್

ಇನ್ಸ್‌ಟಿಟ್ಯೂಟ್ ರಿಸರ್ಚರ್, ಷೀ ಹ್ಯಾಸ್ ಗಾನ್ ಇನ್‌ಸೈಡ್ ದ ಕಿಚನ್; ಷೀ ಹ್ಯಾಡ್ ಕವರ್ಡ್ ದಟ್ ವಿತ್ ಎ ಕಪ್; ಕಾಗೆ ಕಮ್ಸ್, ಪುಷಸ್ ಇಟ್ ಟು ದ ಎಡ್ಜ್ ಆಫ್ ದ ಟೇಬಲ್, ಟಾಪಲ್ಸ್ ಇಟ್ ಅಂಡ್ ದೆನ್ ಟೇಕ್ಸ್ ದ ನಟ್ ಅಂಡ್ ಗೋಸ್.

**ಹೆಚ್ಕೆ: ಅಬ್ಬ!**

ಆರ್ಕೆ: ಕಾಗೆ ಬಗ್ಗೆ ಬಹಳ ಕಥೆಗಳಿವೆ. ನಮ್ಮ ಪುರಿ ಜಗನ್ನಾಥ್ ಟೆಂಪಲ್ ಕಟ್ಟಿದ್ದು ಆ ಕಾಲದ ರಾಜ, ಅವನ ಹೆಸರು ಮರೆತ್ಹೋಯ್ತು. ಭೋಜರಾಜನೋ ಯಾವನೋ ಅಂತಿಟ್ಕೊಳಿ. ಈ ಕಾಗೆ ಏನ್ಮಾಡ್ಬಿಟ್ಟಿದೆ, ಸ್ಯಾಟ್ ಆನ್ ಎ ಸ್ಟಂಪ್ ಇನ್ ದ ಮಿಡಲ್ ಆಫ್ ದ ಸೀ.. ದೀಸ್ ಆರ್ ಆಲ್ ಅಬ್ಸ್ಟ್ರಾಕ್ಟ್ ಥಾಟ್ಸ್... ಕಾಗೆ ಆ ರಾಜನ್ನ ಕರೆದು ಒಂದು ಟೆಂಪಲ್ ಕಟ್ಟು ಅಲ್ಲಿ, ನೀನು ಮುಂದಕ್ಚರ್ತೀಯ ಅಂತ ಹೇಳ್ಬಿಟ್ಟು ಇಟ್ ಡಿಸಪಿಯರ್ಡ್. ಆದ್ದರಿಂದ ಆ ಟೆಂಪಲ್ ಕಟ್ಟಿದ್ದು. ಈವನ್ ಇನ್ ಅವರ ಮೈಥಾಲಜಿ...

**ಹೆಚ್ಕೆ: ಅಂದರೆ ಪ್ರಾಕ್ಟಿಕಲ್ ಕೇಸಸ್ಸಿಗೆ ಬಂದರೆ ನಿಮ್ಮ...**

ಆರ್ಕೆ: ನಾನು ಬರೆದು ಶುರು ಮಾಡಿ, ನಮ್ಮ ತಾಯಿಯವರು, ಹೂ ಈಸ್ ನೋ ಮೋರ್, ಶೀ ಸಾ ಇಟ್ ಅಂಡ್ ಶೀ ವಾಸ್ ಸೋ ಪ್ಲೀಸ್ಡ್, ಶೀ ಸೆಡ್ 'ಇಟ್ ಈಸ್ ಎ ವಂಡರ್‌ಫುಲ್ ಥಿಂಗ್ ಯೂ ಆರ್ ಡೂಯಿಂಗ್'. 'ನಿನಗೆ ಹ್ಯಾಗೆ ಅಪೀಲ್ ಆಯ್ತು?' ಅಂತ ಕೇಳಿದೆ. 'ಅದು ಶನೀಶ್ವರನ ವಾಹನ. ಸಮ್‌ಹೌ ಯೂ ಹ್ಯಾವ್ ಟೇಕನ್ ಎ ಫ್ಯಾಸಿನೇಷನ್ ಟು ಇಟ್ ಅಂಡ್ ಯೂ ವಿಲ್ ಗೋ ಫಾರ್.

**ಹೆಚ್ಕೆ: ಆದರೆ ನಿಮ್ಮ ಕಾಗೆಗಳ ಬಗ್ಗೆ ಒಂದು ಸ್ಮಾಲ್ ಅಬ್ಜೆಕ್ಷನ್ ನಾನು ಕೇಳಿರೋದು ಏನೂಂದ್ರೇ...**

ಆರ್ಕೆ: ಏನು?

**ಹೆಚ್ಕೆ: ದೇ ಆರ್ ಮೋರ್ ರಿಯಲಿಸ್ಟಿಕ್ ದ್ಯಾನ್ ರಿಯಲ್ ಕಾಗೇಸ್ ಅಂತ.**

ಆರ್ಕೆ: ದಟ್ ಈಸ್ ಅಬ್ಸ್ಟ್ರಾಕ್ಟು... ಐ ಹ್ಯಾವ್ ಟೇಕನ್ ಅಬ್ಸ್ಟ್ರಾಕ್ಟ್...

**ಹೆಚ್ಕೆ: ಯಾವುದೋ ಒಂದು ಮಗು ಕಾಗೆಗೆ ಕಲ್ಲು ಹೊಡೀತಂತೆ ನೀವು ಮಾಡಿದ್ದಕ್ಕೆ. ನಿಜವಾ ಅದು? ಯಾರೋ ಹೇಳಿದರು ನನಗೆ...**

ಆರ್ಕೆ: ಅದು ನಿಜ. ಏರ್ ಇಂಡಿಯಾ ಮ್ಯಾನೇಜರ್ ಮೊಮ್ಮಗ. ಊರಿಂದ ಬಂದಿದಾನೆ, ಡ್ರಾಯಿಂಗ್ ರೂಮಲ್ಲಿ ಆಟ ಆಡ್ತಾ ಇದ್ದಾನೆ, ಇವರಿಗೆ ಕೊಟ್ಟಿದ್ದ ಪಿಕ್ಚರ್‌ನ ಫ್ರೇಂ ಮಾಡಿ ಅವರು ಬುಕ್ ಷೆಲ್ಫ್ ಮೇಲಿಟ್ಟಿದ್ರು. ಇವನು, ಈ ಹುಡುಗ, ಇಲ್ಲಿ ಅಲ್ಲಿ ಓಡಾಡ್ದ, ಆ ಕಾಗೇನ ನೋಡ್ದ, ಒಂದು ಸರತಿ ಹುಶ್ ಅಂದ. ಹೋಗಲಿಲ್ಲ ಅದು, ಹಾರಿಹೋಗಲಿಲ್ಲ. ಬಂದ, ಅಲ್ಲೊಂದು ಪೇಪರ್ ವೇಯ್ಟ್ ಇತ್ತು... ತೆಗೆದು ಹೊಡೆದ... ಒಂದೇ ಏಟಿಗೆ ಬೀಳಿಸ್ಬಿಟ್ಟ...

**ಹೆಚ್ಕೆ: ಅದಕ್ಕಿಂತ ಒಳ್ಳೆ ಕಾಂಪ್ಲಿಮೆಂಟ್ ನಿಮಗೆ ಯಾರೂ ಕೊಡಕ್ಕೆ ಸಾಧ್ಯ ಇಲ್ಲ.**

ಆರ್ಕೆ: ಐ ಕನ್ಸಿಡರ್ ದಟ್ ಆಸ್ ದ ಗ್ರೇಟೆಸ್ಟ್ ಕಾಂಪ್ಲಿಮೆಂಟ್, ಟ್ರಿಬ್ಯೂಟ್ ಟು ಮೈ ಎಫರ್ಟ್ಸ್.

***(ಧ್ವನಿಸುರಳಿ ಸೌಜನ್ಯ: ಆಕಾಶವಾಣಿ, ಬೆಂಗಳೂರು)***

# ಮುತ್ತಿನಂತ ಮುತ್ತಜ್ಜಿ

**• ಚಿತ್ರಾ ರಾಮಚಂದ್ರನ್**

ಆತುರ ಆತುರವಾಗಿ ನಾಲ್ಕು ಬಾರಿ ರಿಂಗಣಿಸಿ ರಿಂಗಣಿಸಿ ನಿಂತಿತು ನನ್ನ ಮೊಬೈಲ್ ಫೋನ್. ಈ ಸಂಕೇತದ ಕರೆ ಕೇಳಿ ನನ್ನ ಮುಖ ಅರಳಿದ್ದು ನನಗೇ ಅರಿವಾಯಿತು! ಮುದ್ದು ಮೊಮ್ಮಗಳ ಕಾಲ್ ಅಂದರೆ ಯಾವ ಅಜ್ಜಿಗೆತಾನೆ ಸಂತೋಷವಿಲ್ಲ? ಆರಾಮವಾಗಿ ಕುಳಿತು ಅವಳ ನಂಬರ್ ಒತ್ತಿದೆ.

"ಹಾಯ್ ಅಮ್ಮಮ್ಮಾ !" ಅತ್ತಕಡೆಯಿಂದ ಉಕ್ಕಿಬಂದ ಉತ್ಸಾಹದ ಕೂಗು ನನ್ನ ಕಿವಿಯನ್ನು ತೂತು ಮಾಡಿತು .

"ಅಮ್ಮಮ್ಮನ ಜ್ಞಾಪಕ ಈಗ ಬಂತೆ?"

"ಸಾರೀ ಅಮ್ಮಮ್ಮಾ ! ಓದೋದು ಬರಿಯೋದು ಪ್ರಾಜೆಕ್ಟು ಅದು ಇದು ಅಂತ ತುಂಬ ಕೆಲಸ ! ನಿನ್ನ ಕೈ ಊಟ ತಿನ್ನಬೇಕು ಅನ್ಸತ್ತೆ ! ಎಕ್ಸಾಮ್ ಎಲ್ಲ ಮುಗೀಲಿ ! ಆಮೇಲೆ ನಿನ್ನ ಜೊತೆಯಲ್ಲೇ ಠಿಕಾಣಿ ! "

ದಿತ್ತು ಹೀಗೆಂದಾಗ ನನ್ನ ಹೃದಯ ಸಕ್ಕರೆ ಪಾಕದಂತೆ ಕರಗಿಯೇ ಹೋಯಿತು .

" ತಮಾಷೆಗೆ ಹಾಗಂದೆ ದಿತ್ತುಪುಟ್ಟಿ ! ಎಕ್ಸಾಮ್ ಚೆನ್ನಾಗಿ ಮಾಡು. ಆಮೇಲೆ ಇದ್ದೆ ಇದೆ ನಮ್ಮ ಚೆಲ್ಲಾಟ!"

" ಯು ಆರ್ ಸೋ ಸ್ವೀಟ್ ಅಮ್ಮಮ್ಮಾ ! ನಿನ್ನನ್ನ ಅಜ್ಜಿ ಅಂದ್ರೆ ಯಾರೂ ನಂಬಲ್ಲ ! "

" ಅಜ್ಜಿ ಮೊಮ್ಮಕ್ಕಳ ಸಂಬಂಧ ಎಣೆಯಿಲ್ಲದ ಮಧುರ ಸಂಬಂಧ ಅನ್ನೋದನ್ನ ನಂಬೋರು ನಂಬಲಿ ! ನಂಬದೋರು ಬಿಡ್ಲಿ !"

" ಆ ವಿಷಯದ ಬಗ್ಗೆಯೇ ನಿನ್ನನ್ನ ಒಂದು ಇಂಟರ್ವ್ಯೂ ಮಾಡಬೇಕಿದೆ ! "

" ಇಂಟರ್ವ್ಯೂ ? ನನ್ನನ್ನ? " ನಿಜಕ್ಕೂ ನನಗೆ ಆಶ್ಚರ್ಯವಾಯಿತು .

" 'ಅಜ್ಜಿ ಮೊಮ್ಮಕ್ಕಳ ಸಂಬಂಧ ಅಂದು – ಇಂದು' ! ಈ ವಿಷಯದ ಬಗ್ಗೆ ಒಂದು ಪ್ರಾಜೆಕ್ಟ್ ! ಬೇರೆ ಬೇರೆ ತಲೆಮಾರಿಗೆ ಸೇರಿದ ನಾಲ್ಕು ವ್ಯಕ್ತಿಗಳನ್ನ ಇಂಟರ್ವ್ಯೂ ಮಾಡಿ ಒಂದು ರಿಸರ್ಚ್ ಪೇಪರ್ ಸಬ್ಮಿಟ್ ಮಾಡ್ಬೇಕಿದೆ . "

" ಓ ! ಹೀಗೆಲ್ಲಾನೂ ಪ್ರಾಜೆಕ್ಟ್ ಮಾಡ್ತೀರಾ ? ! "

" ಸೈಕಾಲಜಿ ಪ್ರಾಜೆಕ್ಟ್ ! ನಿನ್ನ ಅಜ್ಜಿಯ ಬಗ್ಗೆ ಹೇಳು ಅಮ್ಮಮ್ಮಾ ... "

" ನಿನಗೇ ಗೊತ್ತಲ್ಲ ! ನನ್ನ ಅಜ್ಜಿಯನ್ನ ನಾನು ನೋಡೇ ಇಲ್ಲ ! ನನ್ನ ತಂದೆ ಚಿಕ್ಕವರಿದ್ದಾಗಲೇ ಅವರು ತೀರಿಕೊಂಡ್ರು . ಹಾಗಾಗಿ ನನ್ನ ಒಡನಾಟವೆಲ್ಲ ನನ್ನ ತಂದೆಯನ್ನ ಸಾಕಿದ ನನ್ನ ಮುತ್ತಜ್ಜಿಯೊಂದಿಗೆ ಮಾತ್ರ . ಅವರ ಬಗ್ಗೆ ಹೇಳ್ತಿನಿ ಕೇಳು."

" ವಾವ್ ! ಆರನೇ ತಲೆಮಾರಿನ ನನ್ನ ಅಜ್ಜಿಯ ಬಗ್ಗೆ ಮಾಹಿತಿ ! ದಟ್ ಇಸ್ ಗ್ರೇಟ್ ! ನೀನೇತಾನೆ ಅವರ ಮೊದಲನೇ ಮರಿಮೊಮ್ಮಗಳು ? ನೀನು ಹುಟ್ಟಿದಾಗ ಅವರು ಅದೆಷ್ಟು ಖುಷಿ ಪಟ್ಟಿರಬೇಕು ! "

"ನಿಜ ಹೇಳೋದಾದ್ರೆ ನಾನು ಹುಟ್ಟಿದಾಗ ಮುತ್ತಜ್ಜಿ ಅಳಕ್ಕೆ ಶುರು ಮಾಡಿದ್ರಂತೆ!"

"ಅಯ್ಯೋ ! ಯಾಕೆ ಅಮ್ಮಮ್ಮಾ ? "

"ತನಗೆ ಮರಿಮೊಮ್ಮಗನೇ ಹುಟ್ಟೋದು ಅನ್ನೋ ದೃಢ ನಂಬಿಕೆ ಅವರಿಗೆ ! ತನ್ನ ಮನೆಯ ರಾಜಕುಮಾರ ತನ್ನ ಮನೇಲೇ ಹುಟ್ಟಬೇಕು ಅನ್ನೋ ಆಸೆಯಿಂದ ಬಾಣಂತನಕ್ಕೆ ಸಹ ತವರಿಗೆ ಕಳಿಸದೇ ಅಮ್ಮನನ್ನ ತನ್ನಲ್ಲೇ ಇರಿಸಿ ಕೊಂಡಿದ್ರಂತೆ ಮುತ್ತಜ್ಜಿ! ಅಷ್ಟೊಂದು ಆಸೆ ಇಟ್ಕೊಂಡಿದ್ದ ಮುತ್ತಜ್ಜಿಗೆ ಹುಟ್ಟಿದ್ದು ಮರಿಮೊಮ್ಮಗ ಅಲ್ಲ , ಮರಿಮೊಮ್ಮಗಳು ಅಂದ್ರೆ ನಿರಾಸೆ ಆಗದೇ ಇರತ್ಯೇ ?" 'ಸರಿಯಾಗಿ ಕೇಳಿದ್ಯಾ? ಡಾಕ್ಟರ್ ಸರಿಯಾಗಿ ಹೇಳಿದ್ರಾ? ಇನ್ನೊಂದ್ಸಾರಿ ಕೇಳ್ಕೊಂಡು ಬಾ.' ಅಂತ ಮನೆಯವರನ್ನೆಲ್ಲ ಪೀಡಿಸಿ ಪ್ರಾಣ ತಿಂದುಬಿಟ್ರಂತೆ ಮುತ್ತಜ್ಜಿ . ' ಇಪ್ಪತ್ತೈದು ಸರ್ತಿ ಕೇಳಿದ್ರೆ ಮಾತ್ರ ಹೆಣ್ಣು ಮಗು ಗಂಡು ಆಗಿಬಿಡ್ತ್ಯೇನಮ್ಮಾ ? ತಾಯಿ ಮಗು ಚೆನ್ನಾಗಿದ್ದಾರೆ ! ಅಷ್ಟು ಸಾಲದೆ ?' ಅಂತ ತಾತ ಸ್ವಲ್ಪ ಗದರಿದರಂತೆ ! ಅದನ್ನ ಕೇಳಿ 'ಕುಯ್ಯುಮ್' ಅಂತ ಅಳಕ್ಕೆ ಶುರು ಮಾಡಿಬಿಟ್ರಂತೆ ಮುತ್ತಜ್ಜಿ ! "

"ಛೆ ! ಎಂತಾ ಜೆಂಡರ್ ಬಯಾಸ್ ! ಹಾಗಾದ್ರೆ ನಿನ್ನ ಮುತ್ತಜ್ಜಿಗೆ ನಿನ್ನ ಮೇಲೆ ಪ್ರೀತಿನೇ ಇರ್ಲಿಲ್ವೇ ಅಮ್ಮಮ್ಮಾ?" ಕನಿಕರದಿಂದ ಕೇಳಿದಳು ದಿತ್ತು .

"ತನಗೋ ವಯಸ್ಸಾಗ್ತಾ ಬಂದಿದೆ. ತನ್ನ ಆಯುಸ್ಸು ಮುಗಿಯೋದ್ರೊಳಗೆ ಮರಿಮೊಮ್ಮಗನ ಕೈಯಲ್ಲಿ ಸಾಂಪ್ರದಾಯಿಕವಾಗಿ ಕನಕಾಭಿಷೇಕವನ್ನ ಮಾಡಿಸ್ಕೊಂಡುಬಿಡಬೇಕು ಅನ್ನೋದು ಮುತ್ತಜ್ಜಿಯ ಧೀರ್ಘ ಕಾಲದ ಕನಸಾಗಿತ್ತು. ಆ ಕನಸು ಕುಸಿಯಿತಲ್ಲ ಅನ್ನೋ ನಿರಾಶೆ ! ಅದನ್ನ ಬಿಟ್ರೆ ನನ್ನ ಮೇಲೆ ಅವರಿಗೆ ಪ್ರತ್ಯೇಕವಾದ ಕೋಪ ಏನೂ ಇರ್ಲಿಲ್ಲ . ನನ್ನ ತಾಯಿ ನನಗೆ ವಿಧವಿಧವಾಗಿ ಅಲಂಕಾರ ಮಾಡಿ ಖುಷಿ ಪಡ್ತಿದ್ರಂತೆ ! ' ಕಾಗೆ ಕಣ್ಣು , ಗೂಬೆ ಕಣ್ಣು , ನಾಯಿ ಕಣ್ಣು, ನರಿ ಕಣ್ಣು ... ಇನ್ನು ಏನೇನೋ ಕೆಟ್ಟ ಕೆಟ್ಟ ಕಣ್ಣುಗಳನ್ನ ವಟಗುಟ್ಟಿ , ಎಲ್ಲ ಕಣ್ಣುಗಳೂ ತೊಲಗಿ ಹೋಗ್ಲಿ ಅಂತ ಪರಕೆ ಕಡ್ಡಿ ಹಿಡಿದು ನೀವಾಳಿಸ್ತಿದ್ರು ಮುತ್ತಜ್ಜಿ . 'ಅಲಂಕಾರವಲ್ಲಿ' ಅಂತಲೇ ನನ್ನನ್ನ ಕರೀತಿದ್ರು ! "

" ಅದ್ಸರಿ ಅಲಂಕಾರವಲ್ಲಿ ! ಅಜ್ಜಿ ಆಮೇಲೆ ಕನಕಾಭಿಷೇಕ ಮಾಡಿಸ್ಕೊಂಡ್ರೋ ಇಲ್ವೋ ? " ಕೀಟಲೆಯಿಂದ ನನ್ನನ್ನು ಸಂಬೋಧಿಸಿ ಪ್ರಶ್ನಿಸಿದಳು ದಿತ್ತು .

" ಅಜ್ಜಿ ಹೆದರಿದ್ದ ಹಾಗೆ ಅವರ ಆಯುಸ್ಸಿಗೆ ಯಾವ ಕಂಟಕವೂ ಇರ್ಲಿಲ್ಲ . ನನ್ನ ತಮ್ಮ ಹುಟ್ಟಿ ಮುತ್ತಜ್ಜಿಯ ಆಸೆಯನ್ನ ಪೂರೈಸಿದಾಗ ಅವರ ಆನಂದಕ್ಕೆ ಪಾರವೇ ಇರಲಿಲ್ಲ ."

" ಅಬ್ಬಾ ! ಅಂತೂ ಮುತ್ತಜ್ಜಿಯ ಹೆಬ್ಬಯಕೆ ಈಡೇರಿತು ಅನ್ನು !"

"ಅಷ್ಟೇ ಅಲ್ಲ! ತಮ್ಮನ ನಂತರ ಒಂದು ತಂಗಿ , ನಂತರ ಮತ್ತೊಂದು ತಮ್ಮನೂ ಹುಟ್ಟಿ ಅವನ ಕೈಯಲ್ಲೂ ಒಂದು ಅಭಿಷೇಕವನ್ನು ಮಾಡಿಸ್ಕೊಡ್ರು ಮುತ್ತಜ್ಜಿ ! "

" ಓ ! ಡಬ್ಬಲ್ ಧಮಾಕಾ !"

" ನಾಲ್ಕು ಮರಿಮಕ್ಕಳು ಇರೋ ಮನೆ ಅಂದ್ಮೇಲೆ ಉತ್ಸಾಹಕ್ಕೂ ತುಂಟಾಟಕ್ಕೂ ಎಲ್ಲಿಯ ಕೊರತೆ ? ಅಜ್ಜಿಗೆ ಸಿಹಿ ತಿಂಡಿಗಳೆಂದರೆ ಬಹಳ ಇಷ್ಟ . ಆಗಿಂದಾಗ್ಯೆ ರವೆ

ಉಂಡೆ  ಇಲ್ಲವೇ ಸಕ್ಕರೆ ತುಪ್ಪ ಕಲಸಿದ ಹುರಿಟ್ಟು ಉಂಡೆಗಳನ್ನು ಮಾಡ್ತಿದ್ರು . ಮರಿಮಕ್ಕಳಾದ ನಮಗೆ ಹಂಚದ ಯಾವ ತಿಂಡಿಯೂ ಅವರಿಗೆ ಬೇಕಿರಲಿಲ್ಲ . ಅಜ್ಜಿ ತುಂಬಾ ಮಡಿ ಮಾಡ್ತಿದ್ರು . ನಮ್ಮನ್ನ ಮುಟ್ಟಿಸಿಕೊಳ್ದೆ ಮೇಲಿಂದ ನಮ್ಮ ವೊಡ್ಡಿದ ಕೈಗೆ 'ದೊಪ್' ಅಂತ  ಉಂಡೆಗಳನ್ನ ಹಾಕ್ತಿದ್ರು .

ನನ್ನ ಪುಟ್ಟ ತಮ್ಮ ಬಹಳ ತುಂಟ . ಅಜ್ಜಿಯನ್ನ ಸತಾಯಿಸೋದೆಂದ್ರೆ ಅವನಿಗೆ ಬಲು ಖುಷಿ! ಒಮ್ಮೆ ಅಜ್ಜಿಯ ಸಿಹಿ ಉಂಡೆ ವಿತರಣೆಯಾಗ್ತಿತ್ತು. ಎಷ್ಟು ಹೇಳಿಯೂ ಕೇಳ್ದೆ ' ಅಜ್ಜಿ! ನೋಡೀಗ! ನಿನ್ನನ್ನ ಮುಟ್ಟಿಡ್ತೀನಿ! ಬಂದೆ , ಬಂದೆ! ' ಎನ್ನುತ್ತ ಅವಳ ಬಳಿ ಹೋಗಿ ಆಟ ತೋರಿಸ ತೊಡಗಿದ . 'ಬೇಡ ಕಣೋ ಮರಿ! ದೂರ ನಿಲ್ಲೋ! ' ಎನ್ನುತ್ತಾ ಅಜ್ಜಿ ಹಿಂದೆ ಹಿಂದೆ ಹೆಜ್ಜೆ ಇಟ್ಟಳು. ಇವನು ಹತ್ತಿರ ಹೋಗೋದು ಅಜ್ಜಿ ದೂರ ಸರಿಯೋದು ಅಂತ ಒಂದು ಜೂಟಾಟವೇ ನಡೀತಿತ್ತು. ಗದ್ದಲ ಕೇಳಿ ಅಪ್ಪ, ತಾತ , ಅಮ್ಮ ಎಲ್ರೂ ಓಡಿಬಂದ್ರು . ಕೋಪದಿಂದಿದ್ದ ಅಮ್ಮನ ಕೈ ತಪ್ಪಿಸ್ಕೊಳ್ಳೋಕ್ಕೆ ಓಟ ಹಿಡಿದ ತುಂಟ ಕಾಲೆಡವಿ  ಅಜ್ಜಿಯ ಮೇಲೆ ಬಿದ್ದೇಬಿಟ್ಟ ! ಅಮ್ಮ ಎರಡು ಬಾರಿಸಿ ಅವನನ್ನ ಧರ ಧರ ಎಳಕೊಂಡು ಹೋದ್ಲು. ಅಜ್ಜಿಯಾದರೋ 'ಅಯ್ಯೋ ! ಮಗೂನ ಹೊಡೀಬೇಡವೇ!' ಅಂತ ಕೂಗಾಡಿ  'ಕುಯ್ಯುಮ್ ' ಅಂತ  ಅಳಕ್ಕೆ ಶುರು ಮಾಡಿಬಿಟ್ರು! 'ಇನ್ಮುಂದೆ ಅಜ್ಜಿ ಹತ್ರ  ಹೋದ್ರೆ ಬರೆ ಹಾಕ್ತೀನಿ ತಡಿ !' ಅಂತ ಪುಟ್ಟ ತಮ್ಮನನ್ನ ಗದರಿಸಿದ್ಲು ಅಮ್ಮ  . "

" ತಿಂಡಿ ವಿತರಣೆಗೆ ಆಮೇಲೆ ಫುಲ್ ಸ್ಟಾಪ್ ಹಾಕ್ಬಿಟ್ರೇನು ? "

" ಚಾನ್ಸೇ ಇಲ್ಲ ! ಅಜ್ಜಿ ಮರಿಮಕ್ಕಳ ನಂಟಿಗೆ ಫುಲ್ ಸ್ಟಾಪ್ ಹಾಕಕ್ಕೆ ಯಾರಿಂದ ಸಾಧ್ಯ ?  'ಅಜ್ಜಿ ! ಉಂಡೇನ  'ಬೋಲ್ ' ಮಾಡು ! ನಾನು 'ಕ್ಯಾಚ್' ಹಿಡೀತೀನಿ ! ನನ್ನನ್ನ ಮುಟ್ಟಿದ ಗಾಳಿ ಸಹ ನಿನ್ನನ್ನ ಮುಟ್ಟೋದಿಲ್ಲ  !' ಅನ್ನುತ್ತ ಫೀಲ್ಡಿಂಗ್ ಮಾಡೋ ಕ್ರಿಕೆಟ್ ಪಟುವಿನಂತೆ ಕೈಗಳನ್ನು ಬೊಗಸೆ ಮಾಡ್ಕೊಂಡು ದೂರದಲ್ಲಿ ನಿಂತು ಪೋಸ್ಕೊಡ್ತಿದ್ದ ಪುಟ್ಟ ತಮ್ಮ ! " ತುಂಟ " ಅಂತ ನಗ್ತಾ ನಗ್ತಾ  ಅಜ್ಜಿ ಉಂಡೆಗಳನ್ನ 'ಬೋಲ್ ' ಮಾಡ್ತಿದ್ರು ! "

" ಹ ಹ ಹ ! ಸೋ  ಫನ್ನಿ ! "

" ನಮ್ಮ ಪುರಾತನವಾದ ಬಂಗಲೆಯಲ್ಲಿ  ಅಜ್ಜಿಯೇ ಮಹಾರಾಣಿ . ಅವರದ್ದೇ ದರ್ಬಾರು . ಅಡುಗೆ, ಊಟ, ತಿಂಡಿ, ವಾರಕ್ಕೆರಡು ಬಾರಿ ಎಣ್ಣೆ ಸ್ನಾನ , ಆರು ತಿಂಗಳಿಗೊಮ್ಮೆ ಕೈಎಣ್ಣೆ ಸೇವನೆ ಎಲ್ಲ ವಿಷಯಗಳೂ ಅಜ್ಜಿಯ ಅಪ್ಪಣೆಯಂತೆಯೇ ಆಗಬೇಕಿತ್ತು . ಅಜ್ಜಿಗೆ ಹಲ್ಲಿಲ್ಲದ ಕಾರಣ ಅನ್ನವನ್ನ ಬಹಳ ಮೃದುವಾಗಿ ಬೇಯಿಸಬೇಕಿತ್ತು. ಅಜ್ಜಿಯ ನಾಲಿಗೆಯೋ  ಬಲು ಸೂಕ್ಷ್ಮ. ಉಪ್ಪು ಹುಳಿ ಕಾರ ಹೆಚ್ಚಾಗಿ ಹಾಕಿದ  ಹುಳಿಸೊಪ್ಪಿನ ಚಟ್ನಿಯನ್ನ ಮೃದು ಅನ್ನಕ್ಕೆ ಕಲಸಿ ರುಚಿ ಹತ್ತಿಸ್ಕೊಂಡು 'ಗುಳುಂ' ಮಾಡ್ತಿದ್ರು ! ಉಳಿದವರಿಗೂ ಊಟದ ರುಚಿ ಕೆಡಿಸುವಂತ ಅದೇ ಮೃದುವಾದ ಮುದ್ದೆ ಅನ್ನವೇ ಆಗ್ತಿತ್ತು ! ನಾವೂ ರುಚಿಗಿಚಿ ನೋಡ್ದೆ ನಮ್ಮ ಊಟವನ್ನ 'ಗೊಳಕ್ ' ಅಂತ ನುಂಗಿಬಿಡ್ತಿದ್ವಿ! "ಅಜ್ಜಿಗೆ ಪ್ರತ್ಯೇಕವಾಗಿ ಮೃದುವಾದ ಅನ್ನವನ್ನ ಮಾಡಿ ಉಳಿದವರಿಗೆಲ್ಲ ಮಾಮೂಲಿನಂತೆ ಅನ್ನ ಮಾಡುವಂತೆ ಅಮ್ಮ ಅಡುಗೆಯವರಿಗೆ ಒಮ್ಮೆ ಸಲಹೆ ಮಾಡಿದ್ಲು. ಅಷ್ಟೇ! ಅಜ್ಜಿಗೆ ಎಲ್ಲಿಲ್ಲದ ದುಃಖ ಉಮ್ಮಳಿಸಿ ಬಂತು! ಪ್ರತ್ಯೇಕ ಅಡುಗೆ ಅನ್ನೋ ಹೆಸರಲ್ಲಿ ತನ್ನನ್ನ ದೂರ ಮಾಡ್ತಿದ್ದಾರೆ ಅನ್ನಿಸ್ತೋ ಏನೋ? 'ನನಗೂ ಎಲ್ಲರಿಗೂ ಮಾಡೋ ಅಡುಗೇನೇ

ಸಾಕು ! ನನಗಾಗಿ ಪ್ರತ್ಯೇಕವಾಗಿ ಏನೂ ಬೇಡ !' ಎಂದವಳೇ 'ಕುಯ್ಯುಮ್ ' ಅಂತ ಅಳೋದಕ್ಕೆ ಶುರು ಮಾಡಿದ್ರು. ಅಪ್ಪ ತಾತ ಇಬ್ಬರೂ ಅಜ್ಜಿಯನ್ನ ಸಮಾಧಾನ ಮಾಡಿ, ಅಜ್ಜಿಯ ದರ್ಬಾರಿನಲ್ಲಿ ಇನ್ಮುಂದೆ ಯಾರೂ ತಲೆ ಹಾಕಬಾರಾದೂಂತ ಕಟ್ಟಪ್ಪಣೆ ಮಾಡಿಬಿಟ್ರು ! "

" ಅಟ್ ದ ಡ್ರಾಪ್ ಆಫ್ ದ ಹ್ಯಾಟ್ ಅಜ್ಜಿ 'ಕುಯ್ಯುಮ್' ಅಂತ ಅಳೋದೇ ಆಯಿತಲ್ಲ ! "

" ಹಾಗೇನಿಲ್ಲ . 'ಕಿಸಿಕಿಸಿ' ನಗೋದೂ ಅಜ್ಜಿಗೆ ಅಷ್ಟೇ ಸಹಜವಾದ ವಿಷಯವಾಗಿತ್ತು. ಭಾಗೀರಥಮ್ಮ ಅನ್ನೋವ್ರು ಅವಲಕ್ಕಿ ಕುಟ್ಟಕ್ಕೆ, ಮೆಣಸಿನ ಪುಡಿ ಮಾಡಕ್ಕೆ, ಅರಳು ಹುರಿಯಕ್ಕೆ ಅಂತ ಮನೆಗೆ ಬಂದು ಹೋಗ್ತಿದ್ರು. ತಾತ ಅವರ ಮಗನಿಗೆ ಒಂದು ಕಡೆ ಕೆಲಸ ಕೊಡಿಸಿದ್ರು. ಅವನಿಗೆ ಮದುವೆಯಾದಾಗ, ನವದಂಪತಿಯರನ್ನು ಕರಕೊಂಡು ಅಜ್ಜಿಯ ಆಶೀರ್ವಾದಕ್ಕಾಗಿ ಮನೆಗೆ ಬಂದಿದ್ರು ಭಾಗೀರಥಮ್ಮ . ನಮಸ್ಕಾರ ಮಾಡಿದವರನ್ನು ಎವೆಯಿಕ್ಕದೆ ನೋಡಿ' ಹುಡುಗಿ ಏಣಿಯಂತೆ ಬೆಳೆದಿದ್ದಾಳಲ್ಲೇ ! ಆದ್ರೂ ಚೆನ್ನಾಗಿದೆ ಜೋಡಿ, ಅಕ್ಕಿ ಎಳ್ಳು ಬೆರೆತ ಹಾಗೆ! ' ಎನ್ನುತ್ತ 'ಕಿಸಕಿಸ ' ನಗಕ್ಕೆ ಶುರು ಮಾಡಿದ್ರು ಅಜ್ಜಿ."

"ಯಾಕೆ ಅಮ್ಮಮ್ಮಾ ? " ಅರ್ಥವಾಗದೆ ಪ್ರಶ್ನಿಸಿದಳು ದಿತ್ತು .

"ಹುಡುಗಿ ಸ್ವಲ್ಪ ತೆಳ್ಳಗೆ ಬಹಳ ಎತ್ತರವಾಗಿದ್ಲು, ಸ್ವಲ್ಪ ಕಪ್ಪು ಬೇರೆ ! ಹುಡುಗ ಬೆಳ್ಳಗಿದ್ದ .... "

"ಓ ಮೈ ಗಾಡ್ ! ಅಟ್ರಾಷಿಯಸ್ ! ದಿಸ್ ಇಸ್ ಬಾಡಿ ಷೇಮಿಂಗ್ ! ಅಂಡ್ ಎ ರೇಸಿಸ್ಟ್ ಕಾಮೆಂಟ್ ! " ದಿತ್ತು ಪಟಾಕಿಯಂತೆ ಚಟಪಟ ಸಿಡಿಯಲು ಶುರುಮಾಡಿದಳು.

" ಕಾಮ್ ಡೌನ್ ದಿತ್ತು ಪುಟ್ಟಿ ! ಇವತ್ತಿನ ದೃಷ್ಟಿಕೋನದ ಪ್ರಕಾರ ನೀನು ಹೇಳೋದೆಲ್ಲ ಸರಿ ! ಆದ್ರೆ ಆಗಿನ ಕಾಲದಲ್ಲಿ ಇಂತ ಮಾತೆಲ್ಲ ಸಹಜವೇ ಆಗಿತ್ತು . ಯಾರೂ ಲಕ್ಷ್ಯ ಮಾಡ್ತಿರ್ಲಿಲ್ಲ . ಅಜ್ಜಿಯ ನಾಲಿಗೆ ಹರಿತವಾದ್ರೂ ಅವರ ಮನಸ್ಸು ಬೆಣ್ಣೆಯಷ್ಟೇ ಮೃದು. ನವ ದಂಪತಿಗಳ ಹೊಸ ಸಂಸಾರಕ್ಕೆ ಬೇಕಾದ ಸಾಮಗ್ರಿಗಳನ್ನೆಲ್ಲ ತಾತನಿಗೆ ಹೇಳಿ ಆಗಲೇ ಒದಗಿಸಿದ್ರು ... "

" ಅದಕ್ಕೇ? ಏನ್ ಬೇಕಾದ್ರೂ ಮಾತಾಡ್ಬಿಡೋದೇ ? ಆ ಹುಡುಗಿಗೆ ಎಷ್ಟು ಬೇಜಾರಾಗಿರ್ಬೇಕು ? "

" ನನಗೆ ದೊಡ್ಡ ಕಣ್ಣುಗಳಿದ್ದ ಕಾರಣ ನನ್ನ ಸೋದರ ಮಾವ ನನ್ನನ 'ಗೂಬೆ' ಅಂತ ಕರೀತಿದ್ರು. ನನಗೆ ಯಾವ ಬೇಸರವೂ ಆಗ್ಲಿಲ್ಲ. ಇಂತ ಮಾತನ್ನೆಲ್ಲ ಆಗಿನ ಕಾಲದಲ್ಲಿ ಯಾರೂ ಮನಸ್ಸಿಗೆ ಹಚ್ಕೋತಾನೇ ಇರ್ಲಿಲ್ಲ. ಹಾಗಿದ್ದಿದ್ರೆ ಮುತ್ತಜ್ಜಿಯನ್ನ ಬಂಧು ಬಳಗದವರೆಲ್ಲ ಭಯ ಭಕ್ತಿಯಿಂದ ಪ್ರೀತಿ ಗೌರವದಿಂದ ಕಾಣ್ತಿದ್ರೆ ? "

"ನಿನ್ನ ಅಜ್ಜಿಯನ್ನ ನೀನು ಬಿಟ್ಕೊಡ್ತಿಯಾ ? " ಎಂದು ನಕ್ಕಳು ದಿತ್ತು .

"ನಾನು ಬೆಳೆದ ಹಾಗೇ ಅಜ್ಜಿಗೆ ವಯಸ್ಸಾಗ್ತಾ ಬಂತು. ಶಕ್ತಿ ಕುಂದಿತು. ಅವರ ಸಹಾಯಕ್ಕಾಗಿ ರಾಜಮ್ಮಾ ಎಂಬ ಮಹಿಳೆ ನೇಮಕವಾದ್ರು . ಅಜ್ಜಿಯ ಜಗಮಂಡಿತನಕ್ಕೆ ಅಡ್ಜಸ್ಟ್ ಮಾಡ್ಕೊಂಡು ಅವರನ್ನ ನೋಡ್ಕೋಬೇಕು ಅಂತ ಕಂಡಿಷನ್ ಹಾಕಿದ್ರು ತಾತ.

ದಿನಗಳು ಕಳೆದಂತೆ ರಾಜಮ್ಮಾ ನಮ್ಮ ಮನೆಯವರಂತೆಯೇ ಆಗಿಹೋದ್ರು . ನಮ್ಮ ಅಡುಗೆಮನೆಯಲ್ಲಿ ಶಿಲಾಯುಗದ ಪಳೆಯುಳಿಕೆಯಂತಿದ್ದ ಬೃಹದಾಕಾರದ ರುಬ್ಬು ಕಲ್ಲಿನ ಮೇಲೆ, ತನ್ನ ತಲೆಗಿಂತ ದಪ್ಪಗಿದ್ದ ರುಬ್ಬು ಗುಂಡನ್ನ ಚಲಿಸಿ ಅವರು ಎದ್ದು ಬಿದ್ದು ಚಟ್ನಿ ರುಬ್ತಿದ್ದ ದೃಶ್ಯವನ್ನ ನೋಡಕ್ಕೆ ಎರಡು ಕಣ್ಣುಗಳು ಸಾಕಾಗ್ತಿರ್ಲಿಲ್ಲ ! ಅಡುಗೆಯವರೊಂದಿಗೆ ಜಗಳ ತೆಗೆಯೋದು, ಅಜ್ಜಿಗೆ ಮಡಿಯುಡಿಸಿ ಊಟ ಮಾಡಿಸೋದು, ಹುರಿಟ್ಟಿನ ಸಿಹಿ ಉಂಡೆಗಳನ್ನ ಮಾಡಿ ಅಜ್ಜಿಯ ಸನ್ನಿಧಾನದಲ್ಲಿ ನಮಗೆಲ್ಲ ಹಂಚೋದು ಮುಂತಾದ ಕೆಲಸಗಳನ್ನೆಲ್ಲ ರಾಜಮ್ಮಾ ವಹಿಸ್ಕೊಂಡಿದ್ರು . ಇನ್ನೊಂದ್ಕಡೆ ಅಜ್ಜಿಗೂ ರಾಜಮ್ಮನಿಗೂ ನಡುವೆ ಆಗಿಂದಾಗ್ಯೆ ಒಂದು ಕಿರು ಕುರುಕ್ಷೇತ್ರ ಯುದ್ಧವೂ ನಡೀತಿತ್ತು . ಸಮಯ ಸಿಕ್ಕಾಗ ನಮಗೆ ದೆವ್ವದ ಕಥೆಗಳು, ಕೀಲುಕುದುರೆಯಮೇಲೆ ಹಾರಿಹೋಗೋ ರಾಜಕುಮಾರನ ಕಥೆಗಳು ಮುಂತಾದ ವಿಚಿತ್ರ ಕಥೆಗಳನ್ನು ಹೇಳ್ತಿದ್ರು ರಾಜಮ್ಮಾ. ಮನೇಲಿ ಯಾವ ಶುಭ ಕಾರ್ಯ ನಡೆದ್ರೂ ಕೀರಲು ಧ್ವನಿಯಲ್ಲಿ ಆರತಿ ಹಾಡನ್ನ ಹೇಳೋದು ಅವರ ವಾಡಿಕೆ ! ಓ ! ಸಾರೀ ದಿತ್ತುಪುಟ್ಟಿ! ನಾನು ಅಜ್ಜಿ ಟಾಪಿಕ್ ಬಿಟ್ಟು ಇನ್ನೆಲ್ಲೋ ಹೋಗ್ತಿದ್ದೀನಿ ... "

" ಪರವಾಗಿಲ್ಲ ಅಮ್ಮಮ್ಮಾ ! ನಿನ್ನ ಚಿಕ್ಕಂದಿನ ಕಥೆಗಳೆಲ್ಲ ತುಂಬ ತುಂಬ ಸ್ವಾರಸ್ಯಕರವಾಗಿವೆ ! 'ತಮ್ಮ ಇತಿಹಾಸವನ್ನ ಅರಿತುಕೊಳ್ಳದ ಜನ ಬೇರಿಲ್ಲದ ಮರಗಳ ಹಾಗೆ ' ಅನ್ನೋ ಕೋಟ್ ನೀನೂ ಕೇಳೇ ಇದ್ದೀಯ ! ನಮ್ಮ ಮನೆ ಹಿಸ್ಟರಿ ತಿಳ್ಕೊಳಕ್ಕೆ ನನಗೆ ಇದೀಗ ಸಂದರ್ಭ ಸಿಕ್ಕಿದೆ ! ನೆನಪಿಗೆ ಬಂದದ್ದನ್ನೆಲ್ಲ ಹೇಳ್ತಾನೆ ಹೋಗು ! " ದಿತ್ತು ಉತ್ಸಾಹಪಡಿಸಿದಳು .

" ರಾಜಮ್ಮಾ ಹಾಡ್ತಿದ್ದ ಒಂದು ಇಂಗ್ಲಿಷ್ ಹಾಡು ಹೀಗಿತ್ತು !

ಅಸ್ಸಗ್ಗೇಲೇಡೀ ವೈಶೋಲೇಟುಕೋಮ್
ಕೊಂಸೋನ್ ಶೀಡೋನ್ದಬೂಟಿ ಫುಲ್
ವೆರಿಗುಡ್ಲೇಡೀ ವೈಶೋಲೇಟುಕೋಮ್ ..... "

" ಇದು ಯಾವೂರ ಇಂಗ್ಲಿಷ್ ಅಮ್ಮಮ್ಮಾ ! " ದಿತ್ತು ಬಿದ್ದು ಬಿದ್ದು ನಕ್ಕಳು.

" ಬಹಳ ದಿನಗಳವರೆಗೆ ಯೋಚಿಸಿ ಯೋಚಿಸಿ ಅರ್ಥಮಾಡ್ಕೊಂಡೇ ! ಹೇಳ್ತಿನಿ ಕೇಳು ! ಹಸೆಗೆ ಲೇಡಿ ವೈ ಸೊ ಲೇಟ್ ಟು ಕಮ್ ? ಕಮ್ ಸೂನ್, ಸಿಟ್ಡೌನ್ , ದ ಬ್ಯೂಟಿಫುಲ್ ! ವೆರಿ ಗುಡ್ ಲೇಡಿ ವೈ ಸೊ ಲೇಟ್ ಟು ಕಮ್ ! ಹಸೆ ಮಣೆಗೆ ಹುಡುಗಿಯನ್ನ ಆಹ್ವಾನಿಸೋ ಹಾಡು ಇದು ! " ನಾನೂ ನಗಲು ಶುರು ಮಾಡಿದೆ .

" ಓ ಗಾಡ್ ! ದಿಸ್ ರಾಜಮ್ಮಾ ಮಸ್ಟ್ ಹ್ಯಾವ್ ಬೀನ್ ಅ ರಿಯಲ್ ಕಾರ್ಟೂನ್ ! " ದಿತ್ತು ಮತ್ತೆ ನಗಲು ಶುರು ಮಾಡಿದಳು . ಒಂದ್ಯೆದು ನಿಮಿಷಗಳು ನಕ್ಕು ನಕ್ಕು ಸಾಕಾದ ಮೇಲೆ ಇಬ್ಬರೂ ಸ್ವಲ್ಪ ಸಾವರಿಸಿಕೊಂಡೆವು .

" ಬ್ಯಾಕ್ ಟು ದಿ ಟಾಪಿಕ್ ! ಮಹಾರಾಣಿಯಂತೆ ಮನೆಯಲ್ಲೆಲ್ಲ ಓಡಾಡ್ಕೊಂಡಿದ್ದ ಅಜ್ಜಿಗೆ ಓಡಾಡೋದು ಕಷ್ಟವಾಗ್ತಾ ಬಂತು. ಅಜ್ಜಿಗೆ ಒಂಟಿತನ ಕಾಡದಿರ್ಲಿ ಅಂತ ತಾತ ಅಪ್ಪ ಅಮ್ಮ ಎಲ್ರೂ ಆವಾಗಾವಾಗ ಅವರೊಂದಿಗೆ ಹರಟಲು ಕೂರ್ತಿದ್ರು ! ನನ್ನ ಸ್ಕೂಲು, ಪಾಠಗಳ ನಡುವೆ ನಾನೂ ಸಹ ಅಜ್ಜಿಯೊಂದಿಗೆ ಸ್ವಲ್ಪ ಸಮಯ ಕಳೆಯಕ್ಕೆ ಶುರುಮಾಡ್ದೆ . ಆ ಸಮಯದಲ್ಲಿ ನಿನ್ ಹಾಗೆ ನಾನೂ ಅಜ್ಜಿಯನ್ನ ಕೇಳಿ

ನಮ್ಮ ಪೂರ್ವಿಕರ ಬಗ್ಗೆ ತಿಳ್ಕೊಂಡಿದ್ರೆ ಎಷ್ಟು ಚೆನ್ನಾಗಿತ್ತು ಅಂತ ಈಗ ಅನ್ಸತ್ತೆ ! "

" ಮತ್ತೆ ಏನು ಮಾತಾಡ್ಕೋತಿದ್ರಿ ಅಮ್ಮಮಾ ?"

"ಪಗಡೆ ಆಟ ಅಳಗುಳಿಮಣೆ ಆಟ ಎರಡೂ ಅಜ್ಜಿಗೆ ಇಷ್ಟವಾದ ಆಟಗಳು . ನಾನು ಸ್ಕೂಲಿಂದ ಬರೋದನ್ನೇ ಕಾಯ್ತಿದ್ದು 'ಪಗಡೆ ಆಡೋಣ ಬಾರೇ !' ಅಂತ ಕರೆಯೋರು ಅಜ್ಜಿ . ಅಜ್ಜಿಯ ಸುರುಳಿ ಸುತ್ಕೊಂಡಿದ್ದ ಬೆರಳುಗಳಿಂದ ದಾಳಗಳೂ ಕವಡೆಗಳೂ ಬೀಳೋದು ಬಹಳ ನಿಧಾನವಾಗ್ತಿತ್ತು ! ಒಮ್ಮೆ ದಾಳಗಳನ್ನ ಬೀಳ್ಸೋದರ ಸಲುವಾಗಿ ಸೌಟಿಗೆ ಅಂಟಿದ ಅನ್ನವನ್ನ ಒದರೋ ಹಾಗೆ ಅಜ್ಜಿಯ ಕೈಯನ್ನು ಹಿಡ್ಕೊಂಡು ಬಲವಾಗಿ ಕುಲುಕಿದ್ರು ರಾಜಮ್ಮಾ . ಅಜ್ಜಿಗೆ ಎಲ್ಲಿಂದ ಅಷ್ಟು ಶಕ್ತಿ ಬಂತೋ ! ಪಕ್ಕದಲ್ಲೇ ನಿಂತಿದ್ದ ರಾಜಮ್ಮನ ಹೊಟ್ಟೆಗೆ ತನ್ನ ಮೊಳಕೈಯಿಂದ ಗುದ್ದಿ 'ದೂರ ಹೋಗೆ ' ಅಂತ ಚೀರಿದ್ರು . ರಾಜಮ್ಮ 'ಅಯ್ಯಯ್ಯಪ್ಪ' ಅನ್ನುತ್ತ ದೂರ ಹೋಗಿ ನಿಂತವರೇ , ಆಟ ಮುಗಿಯೋವರೆಗೆ ಹತ್ತಿರ ಸುಳೀಲೇ ಇಲ್ಲ .

' ನಿಧಾನಕ್ಕೆ ಆಡಿದ್ರೆ ನಿನಗೆ ಬೇಜಾರಾಗತ್ಯೇ ಅಲಂಕಾರವಲ್ಲೀ ? ' ಅಂತ ಅಜ್ಜಿ ನಿಧಾನವಾಗಿ ಕೇಳ್ದಾಗ ನನಗೆ 'ಪಾಪ ' ಅನ್ನಿಸ್ತು . ಅಜ್ಜಿ ಎಷ್ಟೇ ನಿಧಾನವಾಗಿ ದಾಳ ಉರುಳಿಸ್ತಿದ್ರೂ ನಾನು ಸಹನೆಯಿಂದ ಒಂದು ಆಟವನ್ನಾದ್ರೂ ಅವರೊಂದಿಗೆ ಆಡಿ ಮುಗಿಸ್ತಿದ್ದೆ . "

" ಯು ಆರ್ ಸೋ ಕೈಂಡ್ ಅಮ್ಮಮ್ಮಾ ! "

" ಅಜ್ಜಿಗೆ ನನ್ನ ಸಂಗೀತ ಪಾಠವನ್ನ ಕೇಳೋದ್ರಲ್ಲಿ ಬಹಳ ಆಸಕ್ತಿ . ' ನಮ್ಮ ಅಲಂಕಾರವಲ್ಲಿ ದಿವ್ಯವಾಗಿ ಹಾಡ್ತಾಳೆ ! " ಅಂತ ಎಲ್ರ ಮುಂದೆ ಜಂಬ ಕೊಚ್ಕೋತಿದ್ರು . ಪ್ರಖ್ಯಾತ ಸಂಗೀತ ವಿದ್ವಾನ್ ಒಬ್ಬರ ಕಚೇರಿಗೆ ಹೋಗೋ ಹಾಗೆ ಮೇಷ್ಟ್ರು ಬರೋ ವೇಳೆಗೆ ಸಂಭ್ರಮದಿಂದ ತಯಾರಾಗ್ತಿದ್ರು . ಮುಖ ತೊಳೆದು , ಜಾನ್ಸನ್ ಬೇಬಿ ಪೌಡರ್ ಹಚ್ಕೊಂಡು , ಸೀರೆ ಬದಲಾಯಿಸ್ಕೊಂಡು ರಾಜಮ್ಮನ ಸಹಾಯದೊಂದಿಗೆ ಹಾಲಿಗೆ ಬಂದು ಸೋಪಾದಮೇಲೆ ಘನಗಂಭೀರವಾಗಿ ಆಸೀನರಾಗ್ಬಿಡ್ತಿದ್ರು .

ಧ್ವನಿಯನ್ನ ಗಂಟಲಲ್ಲಿ ಹಿಡಿದು ಇಟ್ಕೊಳ್ದೆ ಚೆನ್ನಾಗಿ ಮುಕ್ತವಾಗಿ ಹೊರಗೆ ಬಿಟ್ಟು ಗಟ್ಟಿಯಾಗಿ ಹಾಡ್ಬೇಕು ಅನ್ನೋದು ಮೇಷ್ಟ್ರು ಹೇಳ್ಕೊಟ್ಟಿದ್ದ ಮೊದಲ ಪಾಠ . ಹಾರ್ಮೋನಿಯಂ ಶ್ರುತಿಗೆ ದನಿಗೂಡಿಸಿ ಸಾ ಪಾ ಸಾ ಹೇಳಿ ನಾನು ಹಾಡಕ್ಕೆ ಶುರು ಮಾಡಿದ್ರೆ ಪಾಠ ಮುಗಿಸಿ ಸಾ ಪಾ ಸಾ ಹೇಳೋವರೆಗೆ ಅಜ್ಜಿ ಅಲುಗಾಡ್ತಿರ್ಲಿಲ್ಲ . ಒಮ್ಮೆ ಮೇಷ್ಟ್ರು ಆದೇಶದಂತೆ ನನ್ನ ಪ್ರಾಣವನ್ನೆಲ್ಲ ಒಗ್ಗೂಡಿಸಿ ಧ್ವನಿಯನ್ನ ಮುಕ್ತವಾಗಿ ಬಿಟ್ಟು ಗಟ್ಟಿಯಾಗಿ 'ರಂಗಪುರ ವಿಹಾರ' ಅಂತ ನಾನು ಶುರು ಮಾಡಿದ್ದೆ ತಡ ! ನನ್ನ ರಂಗಪುರ ವಿಹಾರ ಮುಳುಗಿಹೋಗೋಷ್ಟು ಗಟ್ಟಿಯಾಗಿ ಗದ್ದಲ ಶುರುವಾಯಿತು ! ಮಿಕಮಿಕ ಕಣ್ಣು ಬಿಡ್ತಾ ಮೇಷ್ಟ್ರು ಹಾರ್ಮೋನಿಯಂ ಶ್ರುತಿ ನಿಲ್ಲಿಸಿದ್ರು . ಇನ್ನೇನಿಲ್ಲ ! ಅಜ್ಜಿ – ರಾಜಮ್ಮಾರ ಕಿರು ಕುರುಕ್ಷೇತ್ರ ಯುದ್ಧ ಶುರುವಾಗಿತ್ತು ! ರಾಜಮ್ಮಾ ಅಜ್ಜಿಗೆ ಸೀರೆ ಉಡಿಸೋವಾಗ ಸರಿಯಾಗಿ ನೆರಿಗೆ ಹಿಡಿದಿರಲಿಲ್ವಂತೆ ! ಸರಿಯಾಗಿಲ್ಲಾಂತ ಅಜ್ಜಿ! ಸರಿಯಾಗಿದೇಂತ ರಾಜಮ್ಮಾ ! ವರಾಂಡದಲ್ಲಿ ಕೂತಿದ್ದ ತಾತ ಎದ್ದು ಬಂದು ರಾಜಮ್ಮನನ್ನು ಖಂಡಿಸಿ ಅಜ್ಜಿಯನ್ನ ಸಂತೈಸಿದ ಮೇಲೆ ನನ್ನ ಹಾಡು ಮುಂದುವರೀತು ! "

" ಮೈ ಗಾಡ್ ! ಮೇಷ್ಟ್ರು ಎದುರಲ್ಲಿ ಹೀಗೆಲ್ಲ ಆದ್ರೆ ... ! ಸೋ ಎಂಬರಾಸಿಂಗ್ ! ನಿನಗೆ ಅವಮಾನ ಆಗಲಿಲ್ವೆ ಅಮ್ಮಮ್ಮಾ ? "

" ಇದ್ರಲ್ಲೇನು ಅವಮಾನ ? ನನ್ನದ್ದು ಮೊದ್ಲೇ ಎಮ್ಮೆ ಚರ್ಮ ಅನ್ನು ! ಅದೂ ಅಲ್ದೆ ಅಜ್ಜಿ ಇರೋದೇ ಹೀಗೇಂತ ಎಲ್ರಿಗೂ ತಿಳಿದೇ ಇತ್ತು ! "

" ಉಮ್ ! ಆಮೇಲೆ ? "

" ಆಮೇಲೇನು ? ಅಜ್ಜಿಗೆ ತೊಂಬತ್ತಾರು ವರ್ಷಗಳು ತುಂಬುತಿದ್ದ ಹಾಗೇ ಹಾಸಿಗೆ ಹಿಡಿದು ಮಲಗಿಬಿಟ್ರು . ಡಾಕ್ಟರ್ ರಾವ್ ಪ್ರತಿದಿನವೂ ಮನೆಗೆ ಬಂದು ಅಜ್ಜಿಯನ್ನ ನೋಡ್ಕೊಂಡು ಹೋಗ್ತಿದ್ರು. ಅಜ್ಜಿಯನ್ನು ನೋಡಕ್ಕೆ ಹದಿನೈದು ನಿಮಿಷಗಳು ತಗೊಂಡ್ರೆ , ತಾತನೊಂದಿಗೆ ವೇದಾಂತ ಚರ್ಚೆಗೆ ಮುಕ್ಕಾಲು ಗಂಟೆ ನಿಲ್ತಿದ್ರು ಡಾಕ್ಟರು . ಏನೇ ಕಾಯಿಲೆ ಇರ್ಲಿ , ಎಷ್ಟೇ ಜ್ವರ ಇರ್ಲಿ

' ಏನಿಲ್ಲ ..' ಅಂತ ರಾಗವಾಗಿ ಹೇಳಿ ಔಷದಿ ಕೊಡ್ತಿದ್ರು . ಅಜ್ಜಿಯ ಆರೋಗ್ಯ ತುಂಬಾ ಹದಗೆಟ್ಟಿದ್ದಾಗ ನಾನೂ ಕಾಯಿಲೆ ಬಿದ್ದೆ . ಎಲ್ಲ ಟೆಸ್ಟ್ ಮಾಡಿಸಿ ' ಏನಿಲ್ಲ ! ಟೈಫಾಯಿಡ್ ! ' ಅಂದ್ರು ನಮ್ಮ ಏನಿಲ್ಲ ಡಾಕ್ಟರು ! ಎರಡು ತಿಂಗಳು ನನ್ನ ಕೋಣೇಲಿ ನಾನು , ಅಜ್ಜಿಯ ಕೋಣೇಲಿ ಅಜ್ಜಿ ! ಒಬ್ಬರನೊಬ್ಬರು ನೋಡಲಾರದೆ ಮಲಕೊಂಡಿದ್ವಿ . ಜ್ಞಾನ ಬಂದಾಗಲೆಲ್ಲ 'ಅಲಂಕಾರವಲ್ಲಿ ಹೇಗಿದ್ದಾಳೆ ' ಅಂತ ಕೇಳ್ತಿದ್ರಂತೆ ಅಜ್ಜಿ . ಒಂದು ಹಿರಿಯ ಜೀವ , ಮತ್ತೊಂದು ಕಿರಿಯ ಜೀವ ! ಒಟ್ಟಿಗೆ ಮಲಗಿಬಿಟ್ಟಿವೆ ! ಯಾರಿಗೆ ಏನಾಗತ್ತೋ ಅಂತ ಎಲ್ರೂ ಹೆದರಿದ್ರು . ಅಮ್ಮ , ಅಪ್ಪ , ತಾತ ನಮ್ಮಿಬ್ಬರನ್ನೂ ಕಣ್ಣಲ್ಲಿ ಕಣ್ಣಿಟ್ಟು ನೋಡ್ಕೊತಿದ್ರು . ಕೊನೆಗೆ ಒಂದು ದಿನ ಎಂದಿನಂತೆ ಅಜ್ಜಿಯನ್ನ ನೋಡಕ್ಕೆ ಬಂದ ಡಾಕ್ಟರು 'ಏನಿಲ್ಲಾ ' ಅಂತ ಹೇಳಿ ಹೋದ್ರು . ಅಜ್ಜಿಯನ್ನ ನಾನು ಆಮೇಲೆ ನೋಡ್ಲೇ ಇಲ್ಲ ..... " ಮುಂದೆ ಮಾತು ಬಾರದಾಯಿತು . ನನ್ನ ಕಂಠ ಬಿಗಿದುಕೊಂಡಿತು . ಕಣ್ಣುಗಳು ತುಂಬಿ ಬಂದವು ....

" ಅಮ್ಮಮ್ಮಾ ! ವಾಟ್ ಹ್ಯಾಪನ್ಡ್ ? " ದಿತ್ತು ಅತ್ತಕಡೆಯಿಂದ ಎರಡು ಮೂರು ಬಾರಿ ಕೇಳಿದಮೇಲೆ ನಾನು ಇಹಲೋಕಕ್ಕೆ ತಿರುಗಿಬಂದೆ .

"ಏನಿಲ್ಲ ದಿತ್ತುಪುಟ್ಟಿ ! ನನ್ನ ಮುತ್ತಿನಂತ ಮುತ್ತಜ್ಜಿಯನ್ನ ಜ್ಞಾಪಿಸ್ಕೊಂಡೆ ಅಷ್ಟೇ !"

" ಚೀರ್ ಅಪ್ ಅಮ್ಮಮ್ಮಾ ! ಅಜ್ಜಿಯ ಬಗ್ಗೆ ನೀನು ಹೇಳಿದ್ದೆಲ್ಲ ಕೇಳಿ ಅವರೊಂದಿಗೆ ನಾನೂ ಇದ್ದಂತೆಯೇ ಅನ್ನಿಸ್ತು . ಷಿ ವಿಲ್ ಆಲ್ವೇಸ್ ಬಿ ಇನ್ ಮೈ ಮೆಮೋರಿ ಟೂ ! ”

" ಥ್ಯಾಂಕ್ಸ್ ದಿತ್ತು ಪುಟ್ಟಿ ! ನಿನ್ನ ಪೇಪರ್ ಬರೆದ್ಮೇಲೆ ನನಗೂ ತೋರಿಸು . ಬೆಸ್ಟ್ ಆಫ್ ಲಕ್ ! "

" ಷ್ಯೂರ್ ಅಮ್ಮಮ್ಮಾ ! ಥ್ಯಾಂಕ್ ಯೂ ! ಐ ಲವ್ ಯೂ ! "

" ಲವ್ ಯೂ ಟೂ ! " ಎನ್ನುತ್ತ ಮೊಬೈಲ್ ಕೆಳಗಿಟ್ಟೆ .

ನಾನು ಎಂದೂ ಮುತ್ತಜ್ಜಿಗೆ 'ಲವ್ ಯೂ' ಹೇಳಿರಲಿಲ್ಲ. ಅವರೂ ಹೇಳಿರಲಿಲ್ಲ. ಮರಿಮಕ್ಕಳಾದ ನಾವು ಅವರನ್ನು ಎಷ್ಟೇ ಸತಾಯಿಸಿದ್ದರೂ ಅವರು ನಮ್ಮನ್ನ ಎಷ್ಟೋ ಬಾರಿ ಕಾಡಿದ್ದರೂ, ಇವೆಲ್ಲವನ್ನೂ ಮೀರಿ ನಮ್ಮ ನಡುವೆ ಇದ್ದ ಎಣೆಯಿಲ್ಲದ ಮಧುರ ಸಂಬಂಧದ ಅರ್ಥವೇ 'ಲವ್' ಎಂದಮೇಲೆ, ಅದನ್ನು ಬಾಯಿಬಿಟ್ಟು ಹೇಳುವ ಅವಶ್ಯಕತೆ ತಾನೇ ಎಲ್ಲಿತ್ತು ?

■

# ದಿನನಿತ್ಯದ ಕೆಲಸವೂ ಮುಖ್ಯ ಮಂತ್ರಿ ಚಂದ್ರುವೂ !!!

**● ರಕ್ಷಾ ರಮೇಶ್**




ನಮ್ಮ ದಿನ ಸಂತೋಷವಾಗಿ ಯಾವುದೇ ಅಡೆತಡೆ ಇಲ್ಲದೇ ನೆಮ್ಮದಿಯಾಗಿ ಸಾಗಲು ಏನೇನು ಬೇಕು?

ಯಾವ್ಯಾವುದನ್ನು ಯೋಚಿಸುತ್ತಿದ್ದೀರಿ.. ? ಊಟ, ತಿಂಡಿ, ನಿದ್ರೆ, ಸುಖ, ಸಂತೋಷ, ಹಣ ... ಮತ್ತೆ ಇನ್ನೇನು? ನಾನು ಹೇಳಲು ಹೊರಟಿರುವುದು ಇದ್ಯಾವುದೂ ಅಲ್ಲ.. ನಮ್ಮ ದಿನ ಸುಗಮವಾಗಿ ಸರಾಗವಾಗಿ ಸಾಗಬೇಕು ಎಂದರೆ ಆ ದಿನದ ನಿತ್ಯಕರ್ಮ ಸರಿಯಾಗಿ ಆಗಿರಬೇಕು. ಅಯ್ಯೋ ಅದೇ ರೀ ... ಒಂದು ದಿನ ಸಂಡಾಸಿಗೆ ಹೋಗಿಲ್ಲ ಎಂದರೆ ಆವತ್ತಿನ ದಿನ ನೆನೆಸಿಕೊಳ್ಳಿ ಒಂದು ಸಲ... ಎಷ್ಟು ತೊಂದರೆ ಅಲ್ವೇ .. ನಾನು ಮೊದಲು ತಿಳಿಸಿದ ಎಲ್ಲವೂ ಇದ್ದರೂ, ಈ ಕೆಲಸ ಆಗಿಲ್ಲ ಅಂದ್ರೆ ಇಡೀ ದಿನ ಡಲ್ಲು ಹೊಡೀತೀರಿರುತ್ತೆ. ಯಾವ ಕೆಲಸವೂ ಸರಿಯಾಗಿ ಆಗುವುದಿಲ್ಲ. ಬೇರೆ ಏನೇ ಕೆಲಸ ಮಾಡುತ್ತಿದ್ದರೂ ಇವತ್ಯಾಕೋ ಆಗ್ಲಿಲ್ವಲ್ಲಪ್ಪ ಅಂತ ಅದರ ಕಡೆಗೇ ಗಮನ ಹರಿಯುತ್ತೆ.. ನಿಜ ತಾನೇ? ನೀವೇನಾದರೂ ಛಿ ಛೀ ಇಲ್ಲಪ್ಪ ಏನು ಅಸಹ್ಯ ನಮಗಾ ರೀತಿ ಆಗುವುದಿಲ್ಲ ಅಂದ್ರೆ ನೀವು ಮನುಷ್ಯರೇ ಅಲ್ಲ, ದೇವರು. ಇಲ್ಲ ದೇವಮಾನವರು. ಏನೇ ಭಕ್ಷ್ಯ ಭೋಜ್ಯ ಮನೆಯಲ್ಲಿ ಮಾಡಿದ್ದರೂ, ತಿನ್ನುವ ಮನಸ್ಸಿದ್ದರೂ ತಿನ್ನಲಾಗುತ್ತದೆಯೇ? ನೆಮ್ಮದಿಯಾಗಿ ಇತರ ಕೆಲಸಗಳು ಸಾಗುತ್ತದೆಯೇ? ಖಂಡಿತಾ ಇಲ್ಲ ...

ಈ ಸಂಡಾಸಿನ ವಿಷಯದಲ್ಲಿ ಎರಡು ಥರ ... ಬರದಿದ್ದರೂ ಕಷ್ಟ, ಅತಿಸಾರವಾದರೂ ಬಲು ಕಷ್ಟ... ಈ ಮಳೆಗಾಲ, ಚಳಿಗಾಲದಲ್ಲಂತೂ ಅಲ್ಲಿ ಇಲ್ಲಿ ಕುರುಕಲು ತಿಂಡಿ, ಪಾನೀಪೂರಿ ತಿಂದು, ಫುಡ್ ಪಾಯ್ಸನ್ ಆಗಿ ಬಹಳ ಬೇಗ ಡೈಯೇರಿಯಾ, ಡೀ ಹೈಡ್ರೇಷನ್ ಆಗಿಬಿಡುತ್ತದೆ.

ನಮ್ಮ ಶಿವಮೊಗ್ಗದಲ್ಲಿ ನಮ್ಮನೆಗೆ ಹೋಗುವ ದಾರಿಯಲ್ಲಿ ಒಂದು ಮೋರಿಯ ಬಳಿ ಗಾಡಿಯಲ್ಲಿ ಬಜ್ಜಿ ಬೋಂಡಾ ಮಾಡಿ ಮಾರುತ್ತಾರೆ. ಪಕ್ಕದಲ್ಲೇ ಒಂದು ಕ್ಲಿನಿಕ್







ಇದೆ. ಏನು ಸೋಜಿಗವೋ, ಕಾಕತಾಳೀಯವೋ ಗೊತ್ತಿಲ್ಲ, ಆ ಬೋಂಡಾದ ವ್ಯಾಪಾರಿ ಹೆಸರು ಮಾಯಣ್ಣ, ಕ್ಲಿನಿಕ್ಕಿನಲ್ಲಿ ಡಾಕ್ಟರ್‌ನ ಹೆಸರು ಡಾ. ಮಾಯಪ್ಪ. ಮಳೆಗಾಲದಲ್ಲಿ, ಚಳಿಗಾಲದಲ್ಲಿ ಬೋಂಡಾ ಬಜ್ಜಿ ತಿನ್ನುವವರು ಕೇಳಬೇಕೆ ? ಮಾಯಣ್ಣನಿಗೆ ವ್ಯಾಪಾರವೋ ವ್ಯಾಪಾರ. ಒಂದೆರಡು ದಿನಗಳ ಬಳಿಕ ಮಾಯಪ್ಪನ ಶಾಪ್ ಪೇಷಂಟ್ಗಳಿಂದ ಗಿಜಿಗುಡುತ್ತಿರುತ್ತದೆ. ಇವರಿಬ್ಬರೂ ಏನಾದರೂ ಡೀಲ್ ಮಾಡಿಕೊಂಡಿದ್ದಾರೇನೋ ಅಂತ ನನಗೆ ಮೊದಲಿಂದಲೂ ಅನುಮಾನ. ಆದರೆ ಏಕೋ ಒಮ್ಮೆಯೂ ಅಲ್ಲಿಗೆ ಹೋಗುವ ಧೈರ್ಯ, ಕೇಳುವ ಧೈರ್ಯ ಇನ್ನೂ ಮಾಡಿಲ್ಲ. ಬೇಸಿಗೆಯಲ್ಲಿ ಇಬ್ಬರೂ ನೊಣ ಹೊಡೆಯುತ್ತಿರುತ್ತಾರೆ !!!

ಇದು ಅತಿಸಾರದ ಕಥೆಯಾದರೆ, ಕಾನ್ಸ್ಟಿಪೇಷನ್ (ಮಲಬದ್ಧತೆ) ಇರುವವರದು ಇನ್ನೊಂದು ಥರ. ಈ ಕಾನ್ಸ್ಟಿಪೇಷನ್ ಇರುವಂಥ ವಯಸ್ಸಾದವರೊಬ್ಬರು ಮನೆಯಲ್ಲಿದ್ದುಬಿಟ್ಟರೆ ಬಹಳ ಕಷ್ಟ. ಅವರಿಗೆ ಯಾವ ತರಹದ ಆಹಾರ ಕೊಡಬೇಕಾದರೂ ಭಯವಾಗುತ್ತದೆ. ಎಲ್ಲದಕ್ಕೂ ನನಗೆ ಮೋಶನ್ ಆಗೋಲ್ಲ ಅಂತ ಹೇಳ್ತಾರೆ. ಚಪಾತಿ ಮಾಡಿದರೆ ಉಷ್ಣವಾಗುತ್ತೆ ಮೋಷನ್ ಆಗೋಲ್ಲ.. ಅದು ಬೇಡ... ದೋಸೆ ಇಡ್ಲಿ ಅಂದ್ರೆ ವಾಯು ಬೇಡ .. ..ಮೋಷನ್ ಆಗೋಲ್ಲ. ರೊಟ್ಟಿ ಮಾಡೋಣ ಅಂದ್ರೆ ಅದು ಗಟ್ಟಿಯಾಗಿರತ್ತೆ ಮೋಶನ್ ಆಗೋಲ್ಲ ಬೇಡ.. ಮತ್ತಿನ್ನೇನು ತಿಂಡಿ ಮಾಡೋದು ... ದೇವರೇ ಬಲ್ಲ ... ಹಣ್ಣು ಹಂಪಲು, ಬಾಳೆಹಣ್ಣು ಕೊಡೋಣವೆಂದರೆ ಡಯಾಬಿಟೀಸ್ ಅಡ್ಡಿ ಬರುತ್ತದೆ. ಸೊಪ್ಪು ತರಕಾರಿಯೇ ಮೂರು ಹೊತ್ತು ಕೊಟ್ಟರೆ ಅದನ್ನೇ ತಿನ್ನಲು ಬೇಜಾರು ಅಂತಾರೆ. ಒಂದು ದಿನದ ಅಡಿಗೆಯಲ್ಲಿ ಇವರನ್ನು ಒಪ್ಪಿಸಿ ಆ ದಿನದ ಮೋಷನ್ ಅವರಿಗೆ ಆಗದೇ ಹೋದರೆ, ಮನೆಯವರಿಗೆಲ್ಲಾ ಲೂಸ್ ಮೋಷನ್ ಶುರುವಾದಂತಾಗಿರುತ್ತದೆ. ಪೀಕೂ ಚಿತ್ರದ ಅಮಿತಾಭ್ ನೆನಪಾದ್ರಾ?!!!

ನಾವು ಸೇವಿಸಬೇಕಾದ ಆಹಾರದ ಪ್ರಾಮುಖ್ಯತೆ ಅರಿತು ಹಿತ ಮಿತವಾಗಿ ತಿನ್ನುವ ಅಭ್ಯಾಸ ರೂಢಿಸಿಕೊಂಡರೆ ಇಂಥ ಯಾವ ತೊಂದರೆಯೂ ಆಗುವುದಿಲ್ಲ. ಆರೋಗ್ಯವೇ ಭಾಗ್ಯ!!!


ಮುಗಿಸುವ ಮುನ್ನ: ಟೈಟಲ್ನಲ್ಲಿ ಬಂದ ಮುಖ್ಯಮಂತ್ರಿ ಚಂದ್ರುಗೂ ಇದಕ್ಕೂ ಏನು ಸಂಬಂಧ! ಅವರು ಇಲ್ಲಿ ಬರಲೇ ಇಲ್ವಲ್ಲ ಅಂತ ಯೋಚಿಸ್ತಿದೀರಾ!!! ನೀವು ಗಣೇಶನ ಮದುವೆ ಸಿನಿಮಾ ನೋಡಿದ್ದರೆ ಅಲ್ಲಿ ಸಂಡಾಸಿಗೆ ಹೋದಾಗ ಮುಖ್ಯಮಂತ್ರಿ ಚಂದ್ರು ಒಂದು ಹಾಡು ಹೇಳುತ್ತಾರೆ... 'ತಿಂದಿದ್ದೆಲ್ಲ ಅರಗಿದ ಮೇಲೆ ಆದದ್ದೆಲ್ಲ ಒಳಿತೇ ಆಯಿತು... !!!' ಇನ್ನೊಮ್ಮೆ ಚಿತ್ರ ನೋಡಿ ಜ್ಞಾಪಕ ಬರುತ್ತೆ !!




■

# ಕೊನೆಯಲ್ಲಿ ಕೊರೊನಾ...

**● ಕೋವಿಡ ನೆಗಟೀವಕರ**





**ಕೊರೊನಾ ಇಲ್ಲದಾಗಲೇ ಕೈಲಾಸಂ ಹೇಳಿದ್ದರು:**
**ಮಕ್ಕಳ ಸ್ಕೂಲ್ ಮನೇಲಲ್ವವೆ?**

***

ಕೊರೊನಾ ಜೋಕ್ ಹೇಳಿದರೆ ಅದು ಅರ್ಥವಾಗಲು
**ಹದಿನಾಲ್ಕು ದಿನ ಬೇಕಾಗಬಹುದು!**

***

ಹಿಂದೆಲ್ಲ ಮಾಸ್ಕ್ ಹಾಕಿಕೊಂಡು ಬ್ಯಾಂಕ್‌ಗೆ ಹೋದರೆ
ಪೊಲೀಸರನ್ನು ಕರೆಯುತ್ತಿದ್ದರು.
**ಈಗ ಮಾಸ್ಕ್ ಹಾಕಿಕೊಳ್ಳದೆ ಹೋದರೆ ಪೊಲೀಸಿನವರಿಗೆ ಬುಲಾವ್.**

***

ಲಾಕ್‌ಡೌನ್ ಸಮಯದಲ್ಲಿ **ಫ್ರಿಜ್‌ನಿಂದ ಸಾಮಾಜಿಕ ಅಂತರ ಪಾಲಿಸದಿದ್ದರೆ**
ಆರೋಗ್ಯ ಕೆಡುವ ಸಾಧ್ಯತೆಯೂ ಇರುತ್ತದೆ.

***

2000ದ ಹೊತ್ತಿಗೆ ಹಾರಾಡುವ ಕಾರ್ ಬರುತ್ತದೆ ಎಂದಿದ್ದರು.
**2020ರಲ್ಲಿ ವಿಮಾನಗಳೂ ಹಾರಾಡುತ್ತಿಲ್ಲ.**

***

ಲಾಕ್‌ಡೌನ್ ಸಮಯದಲ್ಲಿ ಯಾರೂ
**ಯಾವ ಸಮಾರಂಭಕ್ಕೂ ತಡವಾಗಿ ಹೋಗುವ ಸಂಭವವೇ ಬರುತ್ತಿಲ್ಲ.**

***

ಈಗೀಗ ಸೆಲ್ಫೀಗಳು ಕಡಿಮೆ ಆಗಿವೆ. ಕಾರಣ?
**ಬ್ಯೂಟಿ ಪಾರ್ಲರ್‌ಗಳು ಬಂದ್.**